ಸಂಪುಟ: 06 ಸಂಚಿಕೆ: 224 ಪುಟಗಳು: 08 ಶುಕ್ರವಾರ 30 ಅಕ್ಟೋಬರ್ 2026
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035621249
₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಉತ್ತಮ ಪರಿಣಾಮಕ್ಕೆ ಕಷ್ಟಪಡುವುದು ಕಡ್ಡಾಯ. ಹಾಗಂತ ಕಷ್ಟಪಟ್ಟಾಗಲೆಲ್ಲ ಪರಿಣಾಮ ಒಳ್ಳೆಯದೇ ಎನ್ನಲಾಗದು. ಪ್ರಯತ್ನ ಜಾರಿಯಲ್ಲಿರಲಿ!

ಸಾಹುಕಾರ್ ಶಿವಶಂಕರಪ್ಪ 10 ಕೋಟಿ ಅವ್ಯವಹಾರ

• ಉದಯವಾಹಿನಿ, ನವದೆಹಲಿ

ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆಯನ್ನು ಚುರುಕುಗೊಳಿಸಿದ್ದು, ಪ್ರಮುಖ ಆರೋಪಿ ಶಿವಶಂಕರಪ್ಪ ಸಾಹುಕಾರ್ ಅವರ ಬೃಹತ್ ಅಕ್ರಮ ಹಣಕಾಸು ವ್ಯವಹಾರ ಬೆಳಕಿಗೆ ಬಂದಿದೆ.

ಸಾಹುಕಾರ್ ಅವರು ಕೇವಲ ಒಂದು ವರ್ಷದಲ್ಲಿ ಬರೋಬ್ಬರಿ 10 ಕೋಟಿ ರೂಪಾಯಿಗಳ ಅಕ್ರಮ ವ್ಯವಹಾರ ನಡೆಸಿರುವುದು ತಿಳಿದುಬಂದಿದೆ. ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಜೊತೆ ಕೈಜೋಡಿಸಿದ್ದ ಶಿವಶಂಕರಪ್ಪ ಸಾಹುಕಾರ್, 2025ರ ಆಗಸ್ಟ್ ಮತ್ತು ಡಿಸೆಂಬರ್ ಅವಧಿಯಲ್ಲಿ ಉದ್ಯಮಿಯಿಂದ ಬರೋಬ್ಬರಿ 4.99 ಕೋಟಿ ರೂಪಾಯಿ ಪಡೆದಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಈ ನಿಖರ ಮಾಹಿತಿಯ ಮೇರೆಗೆ ಇಡಿ ಅಧಿಕಾರಿಗಳು ರಿಯಲ್ ಎಸ್ಟೇಟ್ ಉದ್ಯಮಿಯ ನಿವಾಸ ಮತ್ತು ಕಚೇರಿಗಳ ಮೇಲೆ ದಿಢೀರ್ ದಾಳಿ ನಡೆಸಿದ್ದಾರೆ. ದಾಳಿಯ ವೇಳೆ ರಿಯಲ್ ಎಸ್ಟೇಟ್ ಉದ್ಯಮಿಯ ಕಾರಿನಲ್ಲಿ ಹಲವು ಪ್ರಮುಖ ದಾಖಲೆಗಳು ಹಾಗೂ ಕೈಬರಹದ ಪ್ರತಿಯೊಂದು ಡೈರಿ ಸಿಕ್ಕಿಬಿದ್ದಿದೆ. ಈ ಕೈಬರಹದ ದಾಖಲೆಗಳನ್ನು ಪರಿಶೀಲಿಸಿದಾಗ ಸಾಹುಕಾರ್ ಅವರ ಕೋಟ್ಯಂತರ ರೂಪಾಯಿಗಳ ಕಪ್ಪುಹಣದ ವಹಿವಾಟು ಹಾಗೂ ನೇಮಕಾತಿ ಹಗರಣದ ಕರಾಳ ಮುಖ ಸಂಪೂರ್ಣವಾಗಿ ಬಯಲಾಗಿದೆ.

2,500 ರೂ. ಬರ ಪರಿಹಾರಕ್ಕೆ 17 ಷರತ್ತು ವಿಧಿಸಿದ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ 226 ತಾಲ್ಲೂಕುಗಳಲ್ಲಿ ಬರ ಘೋಷಣೆಯಾಗಿದೆ. ಸಂಕಷ್ಟದಲ್ಲಿರುವ ರೈತರಿಗೆ ರಾಜ್ಯ ಸರ್ಕಾರ ಘೋಷಣೆ ಮಾಡಿದ್ದ ತಲಾ 2,500 ರೂ. ಪರಿಹಾರವನ್ನ ಒಂದೂವರೆ ತಿಂಗಳಲ್ಲೇ ವಿತರಣೆ ಮಾಡೋಕೆ ಮುಂದಾಗಿದೆ. ಆದ್ರೆ ಪರಿಹಾರ ಪಡೆದುಕೊಳ್ಳಲು ಸರ್ಕಾರ ರೈತರಿಗೆ (17 ಷರತ್ತುಗಳನ್ನು ವಿಧಿಸಿದೆ. ತಾಲ್ಲೂಕುವಾರು ಬೆಳೆಹಾನಿಗೆ ನಮೂದಾಗಿರುವ ಜಮೀನುಗಳ ರೈತರಿಗೆ ಮಾತ್ರ ಪರಿಹಾರ ನೀಡಲಾಗುವುದು. ಕಡಿಮೆ ಜಮೀನುಳ್ಳ ರೈತರಿಂದ ಪರಿಹಾರ ವಿತರಣೆ ಆರಂಭಿಸಲಾಗುವುದು, ಮೊದಲು ಮಳೆಯಾಶ್ರಿತ, ನಂತರ ನೀರಾವರಿ ಬೆಳೆ, ತದ ನಂತರ ಬಹು ವಾರ್ಷಿಕ ಬೆಳೆ ಬೆಳೆದವರಿಗೆ ಪರಿಹಾರ. ಬೆಳೆ ಪರಿಹಾರ ಪಡೆಯುವ ರೈತನ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಆಗಿರಬೇಕು, ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆಗೊಂಡ ಜಮೀನಿನ ರೈತರಿಗೆ ಪರಿಹಾರ ಇಲ್ಲ. ಜಂಟಿ ಖಾತೆದಾರರಿದ್ರೆ ನೊಂದಾಯಿತ ವಿಸ್ತೀರ್ಣಕ್ಕೆ ಮಾತ್ರ ಪರಿಹಾರ ನೀಡಲಾಗುವುದು.

ಜೊತೆಗೆ ಒಬ್ಬ ರೈತನಿಗೆ 2-3 ತಾಲ್ಲೂಕುಗಳಲ್ಲಿ ಜಮೀನಿದ್ರೆ, ಗರಿಷ್ಟ 2 ಹೆಕ್ಟೇರ್‌ಗೆ ಮಾತ್ರ ಪರಿಹಾರ ಸೇರಿದಂತೆ 17 ಷರತ್ತುಗಳನ್ನ ವಿಧಿಸಲಾಗಿದೆ.

ಸಿದ್ದರಾಮಯ್ಯ ವಿರುದ್ಧ ಸ್ಟಿಂಗ್ ಆಪರೇಷನ್ ಕಟ್ಟುಕಥೆ

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನಡೆಸಲಾಗಿತ್ತು ಎನ್ನಲಾದ ಬಹುಚರ್ಚಿತ ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ಅಧಿಕೃತ ಮಾಧ್ಯಮ ಪ್ರಕಟಣೆ ಹೊರಡಿಸಿದ್ದು, ವಿಡಿಯೋದಲ್ಲಿ ಬಿಂಬಿಸಲಾಗಿರುವ ಆರೋಪ ಸಂಪೂರ್ಣ ಕಟ್ಟುಕಥೆ ಮತ್ತು ಉದ್ದೇಶಪೂರ್ವಕವಾಗಿ ಸೃಷ್ಟಿಸಲಾದ ಸುಳ್ಳು ಎಂದು ಸಮಗ್ರ ತನಿಖೆಯಿಂದ ಮೇಲ್ನೋಟಕ್ಕೆ ತಿಳಿದುಬಂದಿದೆ ಎಂದು ತಿಳಿಸಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಸ್ಟಿಂಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹರಿಬಿಟ್ಟು ಅಪಪ್ರಚಾರ ಮಾಡಿರುವ ಬಗ್ಗೆ ದೂರು ಸಂಬಂಧ ಸಿಸಿಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿರುವ ವಿಡಿಯೋದಲ್ಲಿ ಬಿಂಬಿಸಿರುವಂತೆ ಲೈಂಗಿಕ ದೌರ್ಜನ್ಯ ಆರೋಪವು ಕಟ್ಟುಕಥೆಯ ಭಾಗವಾಗಿದೆ.

ಉದ್ದೇಶಪೂರ್ವಕವಾಗಿ ಸೃಷ್ಟಿಸಿರುವುದು ಮೇಲ್ನೋಟಕ್ಕೆ ತಿಳಿದುಬಂದಿದೆ. ವಿಡಿಯೋದಲ್ಲಿ ಚಿತ್ರಿಸಿರುವ ರೀತಿಯಲ್ಲಿ ಯಾವುದೇ ಘಟನೆ ನಡೆದಿರುವ ಬಗ್ಗೆ ಈವರೆಗಿನ ತನಿಖೆಯಲ್ಲಿ ದಾಖಲಿಸಲಾದ ಹೇಳಿಕೆಗಳು ಹಾಗೂ ಸಂಗ್ರಹಿಸಲಾದ ಸಾಕ್ಷ್ಯಾಧಾರಗಳು ದೃಢಪಡಿಸಿಲ್ಲ ಎಂದು ಮಾಧ್ಯಮ ಪ್ರಕಟಣೆಯಲ್ಲಿ ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಬಿಗ್ ಅಪ್ಡೇಟ್ ನೀಡಿದ ಸಾರಿಗೆ ಸಚಿವ ಬೈರತಿ ಸುರೇಶ್

• ಉದಯವಾಹಿನಿ, ಬೆಂಗಳೂರು

ಇಂದಿನ ಸಚಿವ ಸಂಪುಟದಲ್ಲಿ ಬಸ್ ಟಿಕೆಟ್ ದರ ಏರಿಕೆ ಬಗ್ಗೆಯೂ ಚರ್ಚೆಯಾಗಿದೆ. ಆದ್ರೆ, ಸಂಪುಟ ಟಿಕೆಟ್ ದರ ಏರಿಕೆಯನ್ನು ಸಾರಿಗೆ ಇಲಾಖೆಗೆ ಬಿಡಲಾಗಿದೆ.

ಇನ್ನು ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಾರಿಗೆ ಸಚಿವ ಬೈರತಿ ಸುರೇಶ್, ಈಗಾಗಲೇ ನಾವು ಬಸ್ ಪ್ರಯಾಣದ ದರ ಹೆಚ್ಚಳ ಮಾಡಬೇಕು ಅಂತ ತೀರ್ಮಾನ ಮಾಡಿದ್ವಿ. ಇಂದು ಸಿಎಂ ಅವರು ಎಲ್ಲರ ಜೊತೆ ಚರ್ಚೆ ಮಾಡಿದ್ರು. ದರ ಏರಿಕೆ ಬಗ್ಗೆ ಸಿಎಂ ಅವರು ಸಾರಿಗೆ ಇಲಾಖೆಯವರೆ ಕ್ರಮಕೈಗೊಳ್ಳಿ ಅಂತ ಹೇಳಿದ್ದಾರೆ.

ಹೀಗಾಗಿ ನಾನು ಸಾರಿಗೆ ಇಲಾಖೆ ಸೆಕ್ರೆಟರಿ ಸೇರಿದಂತೆ ನಾಲ್ಕು ನಿಗಮದ ಎಂಡಿಗಳ ಜೊತೆ ನವೆಂಬರ್ 3ರಂದು ಸಭೆ ನಡೆಸುತ್ತೇನೆ. ಎಷ್ಟು ದರ ಜಾಸ್ತಿ ಮಾಡಬಹುದು ಅಂತ ಆಮೇಲೆ ನಿರ್ಧಾರ ಮಾಡುತ್ತೇವೆ. ಬಳಿಕ ನವೆಂಬರ್ 4 ರಂದು ನಾನೇ ಸುದ್ದಿಗೋಷ್ಟಿ ಮಾಡಿ ಟಿಕೆಟ್ ದರ ಹೆಚ್ಚಳ ಬಗ್ಗೆ ಮಾಹಿತಿ ನೀಡುತ್ತೇನೆ ಎಂದು ಸ್ಪಷ್ಟಪಡಿಸಿದರು.

ಪ್ರತಿ ಟನ್‌ಗೆ 4,500 ಎಫ್‌ಆರ್‌ಪಿ ನಿಗದಿ ಮಾಡಿ: ಕೇಂದ್ರ ಸಮಿತಿಗೆ ಮನವಿ ಸಲ್ಲಿಸಿದ ಕಬ್ಬು ಬೆಳೆಗಾರರು

• ಉದಯವಾಹಿನಿ, ಬೆಂಗಳೂರು

ಪ್ರತಿ ಟನ್‌ಗೆ ಕನಿಷ್ಠ 4,500 ರೂಪಾಯಿ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) ನಿಗದಿ ಪಡಿಸಬೇಕು ಮತ್ತು ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಆಗುತ್ತಿರುವ ಶೋಷಣೆಯನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ನೀತಿ ಆಯೋಗದ ಮಾಜಿ ಸದಸ್ಯ ರಮೇಶ್ ಚಂದ್ ಅವರ ನೇತೃತ್ವದಲ್ಲಿ ರಚಿಸಲಾಗಿರುವ ಕೇಂದ್ರ ಸಮಿತಿಗೆ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು, ಹೆಚ್ಚುತ್ತಿರುವ ಕೃಷಿ ವೆಚ್ಚಗಳು, ಅಸಮರ್ಪಕ ಬೆಲೆ, ಬರ, ಬೆಳೆ ನಷ್ಟ ಮತ್ತು ಸಾಲದ ಸುಳಿಗೆ ಸಿಲುಕಿ ಕಬ್ಬು ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದಾರೆ ಎಂದು ಹೇಳಿದ್ದಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಕಬ್ಬು ರೈತರೊಂದಿಗೆ ಚರ್ಚಿಸಿದ ನಂತರ ಕೇಂದ್ರ ಸರ್ಕಾರ ಅಕ್ಟೋಬರ್ 14 ರಂದು ನಾಲ್ಕು ಸದಸ್ಯರ ಸಮಿತಿ ರಚಿಸಿತ್ತು.

ರೈತರ ಆದಾಯ, ಸಕ್ಕರೆ ಬೆಲೆ ನಿಗದಿ, ತೂಕ ಪದ್ಧತಿ ಮತ್ತು ಯಂತ್ರಗಳ ಮೂಲಕ ಕಟಾವು ಮಾಡುವ ಕಬ್ಬಿಗೆ ಬೆಲೆ ಕಡಿತದ ಕುರಿತು ಪರಿಶೀಲಿಸಿವರದಿ ನೀಡುವಂತೆ ಸಮಿತಿಗೆ ಸೂಚಿಸಲಾಗಿದೆ.

ಹೆಚ್ಚಿನ ಬೆಲೆ ಮತ್ತು ಲಾಭ ಹಂಚಿಕೆಗೆ ಬೇಡಿಕೆ: ರಾಜ್ಯ ಕಬ್ಬು ಅಭಿವೃದ್ಧಿ ಆಯುಕ್ತರ ವರದಿಯ ಪ್ರಕಾರ, ಕಳೆದ ವರ್ಷ ಒಂದು ಟನ್ ಕಬ್ಬು ಉತ್ಪಾದಿಸಲು 4,450 ರೂಪಾಯಿ ವೆಚ್ಚವಾಗುತ್ತಿತ್ತು ಎಂದು ಶಾಂತಕುಮಾರ್ ಉಲ್ಲೇಖಿಸಿದ್ದಾರೆ. ಹೀಗಾಗಿ, ಶೇಕಡಾ 10.25 ರಷ್ಟು ಸಕ್ಕರೆ ಇಳುವರಿ ಆಧಾರದ ಮೇಲೆ ಎಫ್‌ಆರ್‌ಪಿಯನ್ನು ಪ್ರತಿ ಟನ್‌ಗೆ 4,500 ನಿಗದಿಪಡಿಸುವಂತೆ ಅವರು ಕೇಂದ್ರವನ್ನು ಒತ್ತಾಯಿಸಿದ್ದಾರೆ.

ಸಿಹಿ ತಿಂಡಿ ತಯಾರಕರು, ತಂಪು ಪಾನೀಯ ಕಂಪನಿಗಳು ಮತ್ತು ಆಹಾರ ಸಂಸ್ಕರಣಾ ಘಟಕಗಳಂತಹ ವಾಣಿಜ್ಯ ಬಳಕೆದಾರರಿಗೆ ಮಾರಾಟವಾಗುವ ಸಕ್ಕರೆಗೆ ಪ್ರತ್ಯೇಕ, ಹೆಚ್ಚಿನ ಬೆಲೆ ನಿಗದಿ ಮಾಡಬೇಕು. ಆದರೆ, ಗೃಹ ಬಳಕೆದಾರರಿಗೆ ಈಗಿರುವ ಬೆಲೆಯನ್ನೇ ಮುಂದುವರಿಸಬೇಕು. ಈ ಮೂಲಕ ಬರುವ ಹೆಚ್ಚುವರಿ ಆದಾಯವನ್ನು ರೈತರಿಗೆ ಪಾವತಿಬೇಕು ಎಂದು ಅವರು ಪ್ರಸ್ತಾಪಿಸಿದ್ದಾರೆ.

ಅಲ್ಲದೆ, ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳಾದ ಮೊಲಾಸಸ್, ಬಗಾಸ್, ಎಥೆನಾಲ್ ಮತ್ತು ವಿದ್ಯುತ್ ಉತ್ಪಾದನೆಯಿಂದ ಬರುವ ಲಾಭದಲ್ಲಿ ರೈತರಿಗೂ ಕಡ್ಡಾಯ ಪಾಲು ನೀಡಬೇಕು ಎಂದು ಸಂಘವು ಆಗ್ರಹಿಸಿದೆ.

ರೈತರಿಗೂ ಒಂದೇ ರೀತಿಯ ಸರಾಸರಿ ಇಳುವರಿಯನ್ನು ಲೆಕ್ಕ ಹಾಕುವ ಬದಲಿಗೆ ಪ್ರತಿ ರೈತನ ಜಮೀನಿನ ಕಬ್ಬಿನ ಸಕ್ಕರೆ ಇಳುವರಿಯನ್ನು ವೈಜ್ಞಾನಿಕವಾಗಿ ಪರೀಕ್ಷಿಸಬೇಕು. ಯಂತ್ರಗಳ ಮೂಲಕ ಕಟಾವು ಮಾಡಿದ ಕಬ್ಬರಿಗೆ ಯಾವುದೇ ವೈಜ್ಞಾನಿಕ ಆಧಾರವಿಲ್ಲದೆ ಶೇಕಡಾ 8 ರಿಂದ ಶೇಕಡಾ 10ರಷ್ಟು ತೂಕ ಕಡಿತಗೊಳಿಸುವುದನ್ನು ನಿಲ್ಲಿಸಬೇಕು ಎಂದು ಕೋರಲಾಗಿದೆ.

ಹಾಲಿನ ದರ ಭರ್ಜರಿ ನ.1 ರಿಂದಲೇ ಜಾರಿ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಹಾಲು ಗ್ರಾಹಕರಿಗೆ ರಾಜ್ಯ ಸರ್ಕಾರವು ಬೆಲೆ ಏರಿಕೆಯ ಹೊರ ಹೇರಿದೆ. ನಂದಿನ ಹಾಲಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ 8 ರೂ. ಹೆಚ್ಚಿಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಹೊಸ ದರಗಳು ನವೆಂಬರ್ 1ರಿಂದಲೇ ಜಾರಿಗೆ ಬರಲಿವೆ ಎಂದು ಸರ್ಕಾರ ತಿಳಿಸಿದೆ.

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಹಾಲಿನ ದರ ಪರಿಷ್ಕರಣೆಗೆ ಅಧಿಕೃತ ಒಪ್ಪಿಗೆ ನೀಡಲಾಗಿದೆ. ಸಭೆಯ ಬಳಿಕ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಪ್ರತಿ ಲೀಟರ್ ಹಾಲಿನ ಮೇಲೆ ಹೆಚ್ಚಿಸಲಾಗಿರುವ 8 ರೂ.ಗಳ ಪೈಕಿ 7ರೂ.ಗಳನ್ನು ನೇರವಾಗಿ ಹಾಲು ಉತ್ಪಾದಕರಿಗೆ (ರೈತರಿಗೆ) ತಲುಪಿಸಲಾಗುತ್ತದೆ. ಉಳಿದ 1 ರೂಪಾಯಿಯನ್ನು ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ (ಕೆಎಂಎಫ್) ನಿರ್ವಹಣೆ ಮತ್ತು ಅಭಿವೃದ್ಧಿಗೆ ಬಳಸಲಾಗುವುದು ಎಂದು ತಿಳಿಸಿದ್ದಾರೆ.

ಬೆಲೆ ಏರಿಕೆಯಿಂದ ಹಾಲಿನ ಉತ್ಪಾದನೆಯ ವೆಚ್ಚ ಹೆಚ್ಚಳದಿಂದಾಗಿ ಸಂಕಷ್ಟದಲ್ಲಿದ್ದ ಲಕ್ಷಾಂತರ ರೈತರು ಮತ್ತು ಹಾಲು ಉತ್ಪಾದಕರಿಗೆ ಆರ್ಥಿಕವಾಗಿ ಹೆಚ್ಚಿನ ನೆರವು ಸಿಗಲಿದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ. ಕಳೆದ ತಿಂಗಳು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದ ಕೆಎಂಎಫ್ ನಿಯೋಗವು ಹಾಲಿನ ಖರೀದಿ ಮತ್ತು ಮಾರಾಟ ದರವನ್ನು ಲೀಟರ್‌ಗೆ 8 ರೂ.ನಿಂದ 10 ರೂ.ಗಳಷ್ಟು ಹೆಚ್ಚಿಸುವಂತೆ ಮನವಿ ಮಾಡಿತ್ತು.

ಕೆಎಂಎಫ್ ಮನವಿಯನ್ನು ಪರಿಶೀಲಿಸಿದ್ದ ಡಿ.ಕೆ ಶಿವಕುಮಾರ್, ಕಳೆದ 10 ವರ್ಷಗಳಲ್ಲಿ ಪಶು ಆಹಾರದ ಬೆಲೆಯಲ್ಲಿ ಉಂಟಾದ ಏರಿಕೆ, ಪ್ರತಿ ಲೀಟರ್ ಹಾಲು ಉತ್ಪಾದಿಸಲು ರೈತರಿಗೆ ತಗಲುವ ವೆಚ್ಚ, ಜಿಲ್ಲಾವಾರು ಹಾಲಿನ ಸಂಗ್ರಹಣೆ ಹಾಗೂ ನೆರೆಯ ರಾಜ್ಯಗಳಲ್ಲಿರುವ ಖರೀದಿ ಮತ್ತು ಮಾರಾಟ ದರದ ವಿವರಗಳನ್ನು ಒಳಗೊಂಡ ಸಮಗ್ರ ವರದಿ ಸಿದ್ಧಪಡಿಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದರು. ಅಧಿಕಾರಿಗಳು ಸಲ್ಲಿಸಿದ ವರದಿಯನ್ನು ಆಧರಿಸಿ, ಸಚಿವ ಸಂಪುಟವು ಬೆಲೆ ಏರಿಕೆಗೆ ಅಂತಿಮ ಅನುಮೋದನೆ ನೀಡಿದೆ.

ಮಾರುಕಟ್ಟೆ ಪೈಪೋಟಿ ಮತ್ತು ಗ್ರಾಹಕರ ಮೇಲಿನ ಆರ್ಥಿಕ ಹೊರೆ

ಮಾರುಕಟ್ಟೆಯಲ್ಲಿನ ಇತರೆ ಬ್ರ್ಯಾಂಡ್‌ಗಳಾದ ಅಮೂಲ್ ತಾಜಾ ಲೀಟರ್‌ಗೆ 60 ರೂಪಾಯಿ ಹಾಗೂ ದೋಡ್ಲಾ 56ರಿಂದ 62 ರೂಪಾಯಿ ಆಸುಪಾಸಿನಲ್ಲಿ ಮಾರಾಟವಾಗುತ್ತಿವೆ. 8 ರೂಪಾಯಿ ಏರಿಕೆಯ ಬಳಿಕವೂ ನಂದಿನಿ ಹಾಲು ಖಾಸಗಿ ಬ್ರ್ಯಾಂಡ್‌ಗಳಿಗಿಂತ ತುಸು ಅಗ್ಗವಾಗಿಯೇ ಉಳಿಯಲಿದೆ. ಆದರೆ, ನವೆಂಬರ್ 1ರಿಂದ ಲೀಟರ್‌ಗೆ ಪೂರ್ಣ 8 ರೂಪಾಯಿ ಹೆಚ್ಚಳ ಜಾರಿಯಾಗುವುದರಿಂದ ದೈನಂದಿನ ಬಜೆಟ್‌ನಲ್ಲಿ ಏರುಪೇರಾಗಲಿದೆ. ದಿನಕ್ಕೆ 1 ಲೀಟರ್ ಹಾಲು ಖರೀದಿಸುವ ಕುಟುಂಬಕ್ಕೆ ತಿಂಗಳಿಗೆ 240 ರೂಪಾಯಿ, 2 ಲೀಟರ್ ಬಳಸುವ ಮನೆಗೆ 480 ರೂಪಾಯಿ ಹಾಗೂ 3 ಲೀಟರ್ ಬಳಸುವವರಿಗೆ 720 ರೂಪಾಯಿ ಹೆಚ್ಚುವರಿ ವೆಚ್ಚವಾಗಲಿದೆ. ರೈತರಿಗೆ ಲಾಭದಾಯಕ ಬೆಲೆ ನೀಡುವ ಅನಿವಾರ್ಯತೆ ಹಾಗೂ ಗ್ರಾಹಕರಿಗೆ ಹೊರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯ ನಡುವೆ ದರ ಹೆಚ್ಚಳದ ಪರಿಣಾಮಗಳು ಮುಂಬರುವ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಸ್ಪಷ್ಟವಾಗಲಿವೆ. ಕರ್ನಾಟಕದಲ್ಲಿ ಒಕ್ಕೂಟ ಉತ್ಪಾದಕರಿಂದ ಟೋನ್ಸ್ ಹಾಲನ್ನು ಲೀಟರಿಗೆ 35ಕ್ಕೆ ಖರೀದಿಸುತ್ತಿದ್ದು, ನೆರೆಯ ಆಂಧ್ರಪ್ರದೇಶದಲ್ಲಿ 41.5, ಕೇರಳದಲ್ಲಿ 41.8, ಮಹಾರಾಷ್ಟ್ರದಲ್ಲಿ 41, ತಮಿಳುನಾಡಿನಲ್ಲಿ 42.24 ಕ್ಕೆ ಖರೀದಿಸಲಾಗುತ್ತಿದೆ. ಹಾಲಿನ ಗರಿಷ್ಠ ಮಾರಾಟ ದರದಲ್ಲಿ ಸಹ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಲೀಟರಿಗೆ ಕನಿಷ್ಠ 12 ರಷ್ಟು ಕಡಿಮೆಯಿತ್ತು ಎನ್ನುವುದು ಅಧಿಕಾರಿಗಳ ವಿವರಣೆ.

ಐದು ವರ್ಷಗಳಲ್ಲಿನ ನಿರಂತರ ಬೆಲೆ ಪರಿಷ್ಕರಣೆ

2022ರಿಂದ ಈವರೆಗೆ ನಂದಿನಿ ಹಾಲಿನ ದರವನ್ನು ಹಂತಹಂತವಾಗಿ ಪರಿಷ್ಕರಿಸಲಾಗಿದೆ. 2022ರ ನವೆಂಬರ್ ಹಾಗೂ 2023ರ ಜುಲೈನಲ್ಲಿ ತಲಾ 3 ರೂಪಾಯಿ ಹೆಚ್ಚಿಸಲಾಗಿತ್ತು. 2024ರ ಜೂನ್‌ನಲ್ಲಿ ದರವನ್ನು 2 ರೂಪಾಯಿ ಹೆಚ್ಚಿಸಿ 50 ಮಿ.ಲೀ. ಹೆಚ್ಚುವರಿ ಹಾಲು ನೀಡುವ ಮೂಲಕ ಹೊಂದಾಣಿಕೆ ಮಾಡಲಾಗಿತ್ತು. 2025ರ ಮಾರ್ಚ್ ವೇಳೆಗೆ ಹಾಲಿನ ದರ ಮತ್ತು ಪ್ಯಾಕೆಟ್ ಪ್ರಮಾಣವನ್ನು ಮರುಪರಿಷ್ಕರಿಸಿ ಟೋನ್ಸ್ ಹಾಲಿನ ದರವನ್ನು 47 ರೂಪಾಯಿಗೆ ನಿಗದಿಪಡಿಸಲಾಗಿತ್ತು. ಇದೀಗ 8 ರೂಪಾಯಿ ಹೆಚ್ಚಳದೊಂದಿಗೆ ನಂದಿನಿ ಟೋನ್ಡ್ ಹಾಲಿನ ದರ 54 ರೂಪಾಯಿಗೆ ತಲುಪಲಿದೆ.

ರಾಜ್ಯ ಸರ್ಕಾರ ಕೊನೆಗೂ ಜನತೆಗೆ ಬೆಲೆ ಏರಿಕೆ ಶಾಕ್

ಪ್ರತಿ ಲೀಟರ್ ಹಾಲಿನ ದರ 8 ರೂ. ಹೆಚ್ಚಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದ್ದು, ಪರಿಷ್ಕೃತ ದರ ನವೆಂಬರ್ 1 ರಿಂದಲೇ ಜಾರಿಯಾಗಲಿದೆ ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದ್ರು.ಬೆಂಗಳೂರಿನಲ್ಲಿಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಚಿವರು, ಹಾಲು ಒಕ್ಕೂಟಗಳು ಪ್ರತಿ ಲೀಟರ್ ಹಾಲಿಗೆ 10 ರೂ. ಏರಿಕೆ ಮಾಡುವಂತೆ ಒತ್ತಾಯ ಮಾಡಿದ್ದವು. ಸರ್ಕಾರ 8 ರೂ. ಏರಿಕೆ ಮಾಡಿದ್ದು, ಹೊಸ ದರ ನಂ.1 ರಿಂದಲೇ ಜಾರಿಗೆ ಬರಲಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ತೀವ್ರ ಬರ ಇದೆ, 228 ತಾಲ್ಲೂಕುಗಳಲ್ಲಿ ಬರ ಘೋಷಣೆ ಆಗಿದೆ. ಕಬ್ಬಿನ ದರ ಸಾಲೋದಿಲ್ಲ ಅಂತನೂ ಹೋರಾಟ ನಡೀತಿದೆ. ಇದರ ಮಧ್ಯೆ ಹೈನುಗಾರಿಕೆ ಮಾಡ್ಕೊಂಡು ಹಲವು ರೈತರು ಬದುಕುತ್ತಿದ್ದಾರೆ. ಹಾಲು ಉತ್ಪಾದನೆ ಮಾಡಿ ಅದರ ಆದಾಯದಿಂದ ಜೀವನ ನಡೆಸುತ್ತಿದ್ದಾರೆ. ಕೃಷಿ ವಲಯದಲ್ಲಿ ನಿಶ್ಚಿತತೆ ಇಲ್ಲ, ಹಾಲು ಉತ್ಪಾದನೆಯ ಆದಾಯ ಸದ್ಯಕ್ಕೆ ಅವರಿಗೆ ಖಾತ್ರಿ ಎಂದು ಹೇಳಿದರು.

ಏರಿಕೆಯ ದರ

ಸರ್ಕಾರಿ ಅಧಿಕಾರಿಗಳು ನೀಡಿದ ಅಂಕಿ ಅಂಶಗಳ ಪ್ರಕಾರ, ದರ ಏರಿಕೆಯ ಹೊರತಾಗಿಯೂ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹಾಲಿನ ದರ ಕಡಿಮೆಯಿದೆ. ಕರ್ನಾಟಕದಲ್ಲಿ ಪ್ರಸ್ತುತ ಒಕ್ಕೂಟವು ರೈತರಿಂದ ಟೋನ್ಡ್ ಹಾಲನ್ನು ಲೀಟರ್‌ಗೆ 35 ರೂ.ಗೆ ಖರೀದಿಸುತ್ತಿದೆ. ನೆರೆಯ ಆಂಧ್ರಪ್ರದೇಶದಲ್ಲಿ 41.50 ರೂ., ಕೇರಳದಲ್ಲಿ 41.80 ರೂ. ಮಹಾರಾಷ್ಟ್ರದಲ್ಲಿ 41 ರೂ. ಹಾಗೂ ತಮಿಳುನಾಡಿನಲ್ಲಿ 42.24 ರೂ.ಗೆ ಖರೀದಿಸಲಾಗುತ್ತಿದೆ. ಅದೇ ರೀತಿ ಹಾಲಿನ ಗರಿಷ್ಠ ಮಾರಾಟ ದರದಲ್ಲೂ ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಲೀಟರ್‌ಗೆ ಕನಿಷ್ಠ 12 ರೂ.ಗಳಷ್ಟು ವ್ಯತ್ಯಾಸವಿತ್ತು ಎಂದು ಹೇಳಲಾಗಿದೆ.

- ಕರ್ನಾಟಕ ಜನತೆಗೆ ಶಾಕ್
- ರೈತರಿಗೆ ಶುಭ ಸುದ್ದಿ, ಗ್ರಾಹಕರಿಗೆ ಆಘಾತ
- ಹಾಲಿನ ದರ 8 ರೂಪಾಯಿ ಹೆಚ್ಚಿಸಿದ ರಾಜ್ಯ ಸರ್ಕಾರ
- ನಂದಿನಿ ಹಾಲಿನ ದರ ಲೀಟರ್‌ಗೆ 8 ರೂ. ಹೆಚ್ಚಳ
- ಹಾಲಿನ ದರ ಪ್ರತಿ ಲೀಟರ್‌ಗೆ 8 ಹೆಚ್ಚಳಕ್ಕೆ ಸಂಪುಟ ಒಪ್ಪಿಗೆ
- ಹೆಚ್ಚುವರಿ 7 ರೈತರಿಗೆ, 1 ಹಾಲು ಒಕ್ಕೂಟಗಳಿಗೆ ಹಂಚಿಕೆ

ಪುನೀತ್ ರಾಜ್‌ಕುಮಾರ್ 5ನೇ ಪುಣ್ಯಸ್ಮರಣೆ: ಕುಟುಂಬಸ್ಥರಿಂದ ಪೂಜೆ ಸ್ಮಾರಕದ ಬಳಿ ಹರಿದುಬರುತ್ತಿರುವ ಅಭಿಮಾನಿ ಸಾಗರ

• ಉದಯವಾಹಿನಿ, ಬೆಂಗಳೂರು

ಕನ್ನಡ ಚಿತ್ರರಂಗದ ಅತ್ಯಂತ ಪ್ರತಿಭಾನ್ವಿತ ನಟ ಪುನೀತ್ ರಾಜ್ ಕುಮಾರ್ ನಮ್ಮನ್ನಗಲಿ ಇಂದಿಗೆ 5 ವರ್ಷಗಳು ಅಭಿಮಾನಿಗಳಿಂದ ನಗುಮೊಗದ ಒಡೆಯ ಎಂದೇ ಕರೆಸಿಕೊಂಡ ನಟ-ನಿರ್ಮಾಪಕರು 2021ರ ಅ.ರ್ 29 ಮಧ್ಯಾಹ್ನ 1 ಗಂಟೆ ಸುಮಾರಿಗೆ ಹೃದಯಾಘಾತದಿಂದ ಕೊನೆಯುಸಿರೆಳೆದರು. ಅವರಿಂದು ನಮ್ಮೊಂದಿಗಿಲ್ಲವಾದ್ರೂ ಅವರ ನೆನಪು ಮಾತ್ರ ಕನ್ನಡಿಗರೆದೆಯಲ್ಲಿ ಸದಾ ಜೀವಂತೆ. ಸಿನಿಮಾ ಮತ್ತು ಸಮಾಜಸೇವೆ ಮೂಲಕ ಅಭಿಮಾನಿಗಳೆದೆಯಲ್ಲಿ ಭದ್ರ ಸ್ಥಾನ ಹೊಂದಿದ್ದಾರೆ.

5ನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆ, ಕಂಠೀರವ ಸ್ಟುಡಿಯೋದಲ್ಲಿರುವ ಪುನೀತ್ ರಾಜ್‌ಕುಮಾರ್ ಸ್ಮಾರಕಕ್ಕೆ ಪುನೀತ್ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಮಗಳು ಧೃತಿ, ಸಹೋದರ ರಾಘವೇಂದ್ರ ರಾಜ್‌ಕುಮಾರ್, ಪತ್ನಿ ಮಂಗಳ ರಾಘವೇಂದ್ರ ರಾಜ್‌ಕುಮಾರ್, ಮಗ ಯುವ ರಾಜ್‌ಕುಮಾರ್ ಸೇರಿದಂತೆ ಕುಟುಂಬಸ್ಥರಿಂದ ವಿಶೇಷ ಪೂಜೆ ಸಲ್ಲಿಸಲಾಯಿತು. ಅಪ್ಪು ನೆನಪಲ್ಲಿ ರಾಜ್ ಕುಟುಂಬಸ್ಥರು ಭಾವುಕರಾಗಿದ್ದು ಕಂಡುಬಂತು. ರಾಜ್ಯದ ಮೂಲೆ ಮೂಲೆಗಳಿಂದಲೂ ಕಂಠೀರವ ಸ್ಟುಡಿಯೋಗೆ ಅಭಿಮಾನಿಗಳು ಆಗಮಿಸುತ್ತಿದ್ದಾರೆ. ತಮ್ಮ ಮೆಚ್ಚಿನ ನಾಯಕ

ಕೃತಕ ಬುದ್ಧಿಮತ್ತೆಯ ಬದಲಾವಣೆಗಳಿಗೆ ಹೊಂದಿಕೊಳ್ಳಿ, ನಿರಂತರವಾಗಿ ಕಲಿಯಿರಿ: ಪ್ರಿಯಾಂಕ್ ಖರ್ಗೆ

ಬೆಂಗಳೂರಿನ ಮಾನ್ಯತಾ ತಂತ್ರಜ್ಞಾನ ಉದ್ಯಾನದಲ್ಲಿರುವ ಆರ್‌ಎಸ್‌ಎಂ ಯುಎಸ್ ಇಂಟಿಗ್ರೇಟೆಡ್ ಸರ್ವಿಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ನೂತನ ಕಚೇರಿಯ ಉದ್ಘಾಟನಾ ಸಮಾರಂಭ

• ಉದಯವಾಹಿನಿ, ಬೆಂಗಳೂರು

ಕೃತಕ ಬುದ್ಧಿಮತ್ತೆಯು ಕೈಗಾರಿಕೆಗಳ ಸ್ವರೂಪ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಅಗತ್ಯವಿರುವ ಕೌಶಲ್ಯಗಳನ್ನು ವೇಗವಾಗಿ ಬದಲಾಯಿಸುತ್ತಿರುವ ಹಿನ್ನೆಲೆಯಲ್ಲಿ, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ವೃತ್ತಿಪರರು ನಿರಂತರವಾಗಿ ಕಲಿಯುತ್ತಾ, ತಮ್ಮ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳುತ್ತಾ, ಉದ್ಯಮದ ಬದಲಾಗುತ್ತಿರುವ ಅಗತ್ಯಗಳಿಗೆ ಅನುಗುಣವಾಗಿ ತಮ್ಮ ಕೌಶಲ್ಯಗಳನ್ನು ರೂಪಿಸಿಕೊಳ್ಳಬೇಕು ಎಂದು ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಇ-ಆಡಳಿತ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ ಹೇಳಿದರು.

ಬೆಂಗಳೂರಿನ ಮಾನ್ಯತಾ ತಂತ್ರಜ್ಞಾನ ಉದ್ಯಾನದಲ್ಲಿರುವ ಆರ್‌ಎಸ್‌ಎಂ ಯುಎಸ್ ಇಂಟಿಗ್ರೇಟೆಡ್ ಸರ್ವಿಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ನೂತನ ಕಚೇರಿಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಚಿವರು, ಕೃತಕ ಬುದ್ಧಿಮತ್ತೆಯ ಅಳವಡಿಕೆ ಅಭೂತಪೂರ್ವ ವೇಗದಲ್ಲಿ ನಡೆಯುತ್ತಿದ್ದು, ಭವಿಷ್ಯದಲ್ಲಿ ಯಾವ ರೀತಿಯ ಕೌಶಲ್ಯಗಳು ಅಗತ್ಯವಾಗಲಿವೆ ಎಂಬುದರ ಕುರಿತು ಅನಿಶ್ಚಿತತೆ ಹೆಚ್ಚುತ್ತಿದೆ ಎಂದು ಹೇಳಿದರು. ವೇಗವಾಗಿ ಬದಲಾಗುತ್ತಿರುವ ಜಾಗತಿಕ ಉದ್ಯೋಗ ಮಾರುಕಟ್ಟೆಯಲ್ಲಿ ಪ್ರಸ್ತುತವಾಗಿರಲು ನಿರಂತರ ಕಲಿಕೆ ಮತ್ತು ಬದಲಾವಣೆಗಳಿಗೆ ಶೀಘ್ರವಾಗಿ ಹೊಂದಿಕೊಳ್ಳುವ ಸಾಮರ್ಥ್ಯ ಅತ್ಯಂತ ಮುಖ್ಯವಾಗಿವೆ ಎಂದು ಅವರು ಒತ್ತಿಹೇಳಿದರು. ನಾವು ಕಂಡಿರುವ ಅತ್ಯಂತ ಪರಿವರ್ತನಾತ್ಮಕ ತಂತ್ರಜ್ಞಾನಗಳಲ್ಲಿ ಕೃತಕ ಬುದ್ಧಿಮತ್ತೆಯೂ ಒಂದು. ಅದರ ಅಳವಡಿಕೆಯ ವೇಗ ಮತ್ತು ವ್ಯಾಪ್ತಿ ಅಭೂತಪೂರ್ವವಾಗಿದೆ. ಭವಿಷ್ಯದಲ್ಲಿ ಉದ್ಯೋಗಗಳ ಸ್ವರೂಪ ಮತ್ತು ಅಗತ್ಯ ಕೌಶಲ್ಯಗಳು ಹೇಗೆ ಬದಲಾಗಲಿವೆ ಎಂಬುದನ್ನು

ನಿಖರವಾಗಿ ಊಹಿಸುವುದು ಕಷ್ಟ. ಆದರೆ, ನಿರಂತರವಾಗಿ ಕಲಿಯುವ, ಬದಲಾವಣೆಗಳಿಗೆ ತ್ವರಿತವಾಗಿ ಹೊಂದಿಕೊಳ್ಳುವ ಮತ್ತು ಉದ್ಯಮ ಹಾಗೂ ಜಾಗತಿಕ ಮಾರುಕಟ್ಟೆಗಳ ಅಗತ್ಯಗಳಿಗೆ ಅನುಗುಣವಾಗಿ ತಮ್ಮ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಮೂಲಕ ಈ ಬದಲಾವಣೆಯನ್ನು ಅವಕಾಶವನ್ನಾಗಿ ಪರಿವರ್ತಿಸಬಹುದು ಎಂದು ಅವರು ಹೇಳಿದರು. ಕರ್ನಾಟಕವು ಜಾಗತಿಕ ಸಾಮರ್ಥ್ಯ ಕೇಂದ್ರಗಳು ಮತ್ತು ಜಾಗತಿಕ ಉದ್ಯಮಗಳನ್ನು ನಿರಂತರವಾಗಿ ಆಕರ್ಷಿಸುತ್ತಿರುವುದಕ್ಕೆ ರಾಜ್ಯದ ಚುರುಕಾದ ಹಾಗೂ ಬದಲಾವಣೆಗಳಿಗೆ ಹೊಂದಿಕೊಳ್ಳುವ ಪ್ರತಿಭಾ ಸಂಪತ್ತು ಪ್ರಮುಖ ಕಾರಣವಾಗಿದೆ ಎಂದು ಸಚಿವರು ಹೇಳಿದರು. ಕರ್ನಾಟಕದಷ್ಟು ಚುರುಕಾಗಿ ಬದಲಾವಣೆಗಳಿಗೆ ಹೊಂದಿಕೊಳ್ಳುವ, ಹಳೆಯದನ್ನು ಮರೆತು ಹೊಸದನ್ನು ಕಲಿಯಲು ಸಿದ್ಧವಾಗಿರುವ ಮತ್ತು ದೊಡ್ಡ ಪ್ರಮಾಣದಲ್ಲಿ ಉದ್ಯಮದ ಅಗತ್ಯಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಸಜ್ಜಾಗಿರುವ ಪ್ರತಿಭಾ ಸಂಪತ್ತನ್ನು ನಾವು ಅಪರೂಪವಾಗಿ ಕಾಣುತ್ತೇವೆ. ಹೂಡಿಕೆಗಳನ್ನು ಆಕರ್ಷಿಸುವಲ್ಲಿ ಇದು ನಮ್ಮ ಪ್ರಮುಖ ಶಕ್ತಿಯಾಗಿದೆ. ನೀತಿಗಳು ಮತ್ತು ಮೂಲಸೌಕರ್ಯಗಳು ಮುಖ್ಯವಾದರೂ, ಉದ್ಯಮಗಳು ಮತ್ತು ಆರ್ಥಿಕತೆಗೆ ನಿರಂತರ ಕೊಡುಗೆ ನೀಡುತ್ತಿರುವ ನಮ್ಮ ಪ್ರತಿಭಾವಂತ ವೃತ್ತಿಪರರಿಗೂ ಇದರ ಶ್ರೇಯ ಸಲ್ಲಬೇಕು ಎಂದು ಅವರು ಹೇಳಿದರು.

ಬೆಂಗಳೂರಿನಲ್ಲಿ ಕೌಶಲ್ಯಪೂರ್ಣ ವೃತ್ತಿಪರರು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಕೃತವಾಗಿರುವುದನ್ನು ಉಲ್ಲೇಖಿಸಿದ ಸಚಿವರು, ಹೊರ ವರ್ತುಲ ರಸ್ತೆಯ ಸುಮಾರು ಒಂಬತ್ತು ಕಿಲೋಮೀಟರ್ ಉದ್ದದ ಪ್ರದೇಶದಲ್ಲಿ ಸುಮಾರು ಎಂಟು ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಇದು ಜಗತ್ತಿನ ಅತ್ಯಂತ ದಟ್ಟವಾದ ಪ್ರತಿಭಾ ಕೇಂದ್ರಗಳಲ್ಲಿ ಒಂದಾಗಿದೆ ಎಂದು ಅವರು ವಿವರಿಸಿದರು.

ನಿಪುಣ ಕರ್ನಾಟಕ

ಉದ್ಯಮದ ಅಗತ್ಯಗಳಿಗೆ ಅನುಗುಣವಾದ ಕೌಶಲ್ಯಾಭಿವೃದ್ಧಿ ಉದ್ಯಮದ ನೇತೃತ್ವದಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾರ್ಹತೆಯನ್ನು ಬಲಪಡಿಸುವ ರಾಜ್ಯದ ಉಪಕ್ರಮವಾಗಿ ನಿಪುಣ ಕರ್ನಾಟಕವನ್ನು ಸಚಿವರು ಪ್ರಸ್ತಾಪಿಸಿದರು. ಈ ಮಾದರಿಯಲ್ಲಿ ಉದ್ಯಮದ ಪಾಲುದಾರರು ತಮಗೆ ಅಗತ್ಯವಿರುವ ಕೌಶಲ್ಯಗಳನ್ನು ಗುರುತಿಸಿ, ತರಬೇತಿ ಪಠ್ಯಕ್ರಮ ರೂಪಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಇದರಿಂದ ಭವಿಷ್ಯದ ಉದ್ಯೋಗಗಳಿಗೆ ಅಗತ್ಯವಿರುವ ಕೌಶಲ್ಯಗಳನ್ನು ಬೆಳೆಸಲು ಸರ್ಕಾರ ಮತ್ತು ಉದ್ಯಮಗಳು ಸಮನ್ವಯದಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಅರ್ಹ ತರಬೇತಿ ವೆಚ್ಚಗಳಿಗೆ ಸರ್ಕಾರದ ಬೆಂಬಲ ಒದಗಿಸಲಾಗುತ್ತದೆ.

ಈ ದಿನದ ದರ | ಪೆಟ್ರೋಲ್: 111.68 ₹/L | ಡೀಸೆಲ್ : 99.56 ₹/L | ಬಂಗಾರ: ₹14,395/Gram24ct ₹13,195/Gram22ct | ಬೆಳ್ಳಿ: ₹215.00/Gram

ಆರು ಮಂದಿ ಬಂಧನ, 6.52 ಲಕ್ಷ ರೂ ಮೌಲ್ಯದ ಗಾಂಜಾ, MDMA ವಶ!

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಹೊರ ರಾಜ್ಯದ ಇಬ್ಬರು ಸೇರಿದಂತೆ ಒಟ್ಟು ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ 9.89 ಕೆಜಿ ಗಾಂಜಾ ಮತ್ತು 16 ಗ್ರಾಂ ಎಂಡಿಎಂಎ (ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ನಿಷೇಧಿತ ಮಾದಕ ವಸ್ತುಗಳ ಮಾರಾಟ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ, ಆರ್.ಟಿ. ನಗರ, ಎಲೆಕ್ಟ್ರಾನಿಕ್ ಸಿಟಿ ಮತ್ತು ಬಾಣಸವಾಡಿ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆಗಳನ್ನು ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ವಶಪಡಿಸಿಕೊಳ್ಳಲಾದ ಮಾದಕ ವಸ್ತುಗಳ ಮೌಲ್ಯ 6.52 ಲಕ್ಷ ರೂಪಾಯಿಗಳಾಗಿದ್ದು, ಮಾರುಕಟ್ಟೆಯಲ್ಲಿ ಇವುಗಳ ಅಂದಾಜು ಮೌಲ್ಯ 13.04 ಲಕ್ಷ ರೂಪಾಯಿಗಳಷ್ಟಿದೆ ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಚಾರಣೆ ವೇಳೆ, ತಾವು ಕರ್ನಾಟಕದ ಒಳಗಿನ ಹಾಗೂ ಹೊರಗಿನ ಅಪರಿಚಿತ ಪೂರೈಕೆದಾರರಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ, ಸುಲಭವಾಗಿ ಹಣ ಗಳಿಸುವ ಉದ್ದೇಶದಿಂದ ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದೆವು ಎಂದು ಆರೋಪಿಗಳು ಪೊಲೀಸರಿಗೆ ತಿಳಿಸಿದ್ದಾರೆ.

ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ ಡ್ರಗ್ಸ್ ಅಂಡ್ ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಬಂಧಿತ ಆರು ಆರೋಪಿಗಳನ್ನು ಬೇರೆ ಬೇರೆ ದಿನಾಂಕಗಳಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕರ್ನಾಟಕದಲ್ಲಿ SIR ಪ್ರಕ್ರಿಯೆ ಸಮರ್ಪಕವಾಗಿ ನಡೆದಿದೆ ವ್ಯತಿರಿಕ್ತ ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಕರ್ನಾಟಕದ ಮತದಾರರ ಪಟ್ಟಿಯಿಂದ ಸುಮಾರು ಒಂದು ಕೋಟಿ ಹೆಸರುಗಳನ್ನು ತೆಗೆದುಹಾಕಿರುವುದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿಕೆಶಿವಕುಮಾರ್ ಸೇರಿ ಕಾಂಗ್ರೆಸ್ ನಾಯಕರು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ತೀವ್ರವಾಗಿ ಟೀಕಿಸುತ್ತಿರುವ ನಡುವೆಯೇ, ಅದೇ ಪಕ್ಷದ ಹಿರಿಯ ನಾಯಕ, ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಪ್ರಕ್ರಿಯೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಮತದಾರರ ಪಟ್ಟಿಯಿಂದ ದೊಡ್ಡ ಪ್ರಮಾಣದಲ್ಲಿ ಹೆಸರುಗಳನ್ನು ತೆಗೆದುಹಾಕಿರುವುದು ಸಮರ್ಥನೀಯ ಎಂದು ಹೇಳಿರುವ ಅವರು, ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ಸಮರ್ಪಕವಾಗಿ ನಡೆಸಲಾಗಿದೆ ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿ ಮತದಾರರ ಪಟ್ಟಿಯಿಂದ ಭಾರಿ ಸಂಖ್ಯೆಯಲ್ಲಿ ಹೆಸರುಗಳನ್ನು ತೆಗೆದುಹಾಕಿರುವ ಕುರಿತು ಕಾಂಗ್ರೆಸ್ ನಾಯಕರು ಆತಂಕ ವ್ಯಕ್ತಪಡಿಸುತ್ತಿರುವಾಗಲೇ, ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸತೀಶ್ ಜಾರಕಿಹೊಳಿ ಪಕ್ಷದ ಇತರ ನಾಯಕರಿಗಿಂತ ಭಿನ್ನವಾದ ನಿಲುವು ವ್ಯಕ್ತಪಡಿಸಿರುವುದು ಇದೀಗ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಕರ್ನಾಟಕದಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆಯನ್ನು ನಾವು ವಿರೋಧಿಸಿಲ್ಲ. ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಬಿಹಾರ ಸೇರಿದಂತೆ ಇತರ ರಾಜ್ಯಗಳಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆಯ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದೇವೆ ಎಂದು ಹೇಳಿದರು. ನಾವು ನಡೆಸಿದ ಪ್ರತಿಭಟನೆಗಳು ಹಾಗೂ ನೀಡಿದ ತರಬೇತಿಯ ಪರಿಣಾಮವಾಗಿ ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆ ಸಮರ್ಪಕವಾಗಿ ನಡೆದಿದೆ. ಇತರ ರಾಜ್ಯಗಳಲ್ಲಿಯೂ ಇದೇ ರೀತಿಯಲ್ಲಿ ಪ್ರಕ್ರಿಯೆ ನಡೆಯಬೇಕು ಎಂದರು.

ಟಾಟಾ ಸಮೂಹಕ್ಕೆ ಸ್ವಾಧೀನದ ಬೆದರಿಕೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ರಾಷ್ಟ್ರೀಯ ಬ್ರ್ಯಾಂಡ್ - ಟಾಟಾ ಗ್ರೂಪ್ - ಸುತ್ತಲಿನ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಕಾಂಗ್ರೆಸ್ ನಾಯಕರು ತೀವ್ರ ಆತಂಕ ವ್ಯಕ್ತ ಪಡಿಸಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲಾ ಐಕಾನಿಕ್ ಸಮೂಹವನ್ನು ಸ್ವಾತಂತ್ರ್ಯಪೂರ್ವದಿಂದಲೂ ಶ್ರಮವಹಿಸಿ ನಿರ್ಮಿಸಲಾದ ಬ್ರ್ಯಾಂಡ್ ಎಂದು ಬಣ್ಣಿಸಿದ್ದಾರೆ. ಸಮತೋಲಿತ ಆರ್ಥಿಕ ಬೆಳವಣಿಗೆ ಮತ್ತು ನ್ಯಾಯಯುತ ಸ್ಪರ್ಧೆಗೆ ಐತಿಹಾಸಿಕ ಭಾರತೀಯ ಬ್ರ್ಯಾಂಡ್‌ಗಳನ್ನು ರಕ್ಷಿಸುವುದು ಅತ್ಯಗತ್ಯ ಎಂದು ಹೇಳಿದ್ದಾರೆ.

ಟಾಟಾ ಕ್ರಿಮಿನಲ್ ರೀತಿಯಲ್ಲಿ ನಾಶವಾಗುತ್ತಿದೆ ಎಂಬ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಆರೋಪಕ್ಕೆ ಪ್ರತಿಕ್ರಿಯಿಸಿದ ಸುರ್ಜೆವಾಲಾ, ಟಾಟಾ ಸಂಸ್ಥೆಯನ್ನು ನಾಶಮಾಡುವುದು ಕಾರ್ಪೊರೇಟ್ ಗುಂಪಿನಿಂದ ಅಂತಿಮವಾಗಿ ಅದನ್ನು ಸ್ವಾಧೀನಪಡಿಸಿಕೊಳ್ಳುವ ಮುನ್ನುಡಿಯೇ ಅಥವಾ ಸ್ಪರ್ಧೆಯಿಂದ ಹೊಡೆದೋಡಿಸುವ ತಂತ್ರವೇ? ಎಂದು ಪ್ರಶ್ನಿಸಿದ್ದಾರೆ.

ಟಾಟಾ ಗ್ರೂಪ್ ಇದು ವಿಶ್ವಾದ್ಯಂತ ಪ್ರಸಿದ್ಧ ಮತ್ತು ಅಂಗೀಕರಿಸಲ್ಪಟ್ಟ ದೊಡ್ಡ ಭಾರತೀಯ ಬ್ರ್ಯಾಂಡ್‌ಗಳಲ್ಲಿ ಒಂದಾಗಿದೆ, ಮತ್ತು 12 ವರ್ಷಗಳ ಅವಧಿಯಲ್ಲಿ ಇತರ ಬ್ರ್ಯಾಂಡ್‌ಗಳೊಂದಿಗೆ ನಾವು ನೋಡಿದಂತೆ ಅವರ' ಆಪ್ತರು ಅದನ್ನು ಸ್ವಾಧೀನಪಡಿಸಿಕೊಳ್ಳಲು ಸಹಾಯ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಸುರ್ಜೇವಾಲಾ ಆರೋಪಿಸಿದ್ದಾರೆ.

ಮನೆ- ಮನೆಗೆ ತೆರಳಿ ಕಸ ಸಂಗ್ರಹಣೆ ಕಳ್ಳಾಟಕ್ಕೆ ಬ್ರೇಕ್!

ವಾಹನಗಳು 15 ವರ್ಷಕ್ಕಿಂತ ಹಳೆಯದಾಗಿದ್ದು, ಪದೇ ಪದೇ ದುರಸ್ತಿಯ ಅಗತ್ಯವಿರುವುದರಿಂದ ಅವುಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ ಎಂದು ತಿಳಿಸಿದರು.

• ಉದಯವಾಹಿನಿ, ಬೆಂಗಳೂರು

1 ಕಳ್ಳಾಟಕ್ಕೆ ಬ್ರೇಕ್ ಹಾಕಲು ಪ್ಲ್ಯಾನ್

2 ಕೆಲಸಕ್ಕೆ ಬಾರದೆ ನಕಲಿ ಹಾಜರಾತಿ

3 ಸುಸಜ್ಜಿತ ವಾಹನಗಳ ಸಮೂಹ

ಸಿಲಿಕಾನ್ ಸಿಟಿಯಲ್ಲಿ ಕಸ ನಿರ್ವಹಣೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಲವು ಕಾರ್ಯಗಳನ್ನು ಕೈಗೊಳ್ಳುತ್ತಿದೆ.

ಇದೀಗ ಕೆಲ ಕಸದ ವಾಹನದ ಸಿಬ್ಬಂದಿ ಕೆಲಸಕ್ಕೆ ಬಾರದೆ ನಕಲಿ ಹಾಜರಾತಿ ತೋರಿಸಿರುವುದು ಕಂಡುಬಂದ ಹಿನ್ನೆಲೆ ಈ ಕಳ್ಳಾಟಕ್ಕೆ ಬ್ರೇಕ್ ಹಾಕಲು ಪ್ಲ್ಯಾನ್ ಮಾಡಲಾಗಿದೆ. ಬೆಂಗಳೂರು ನಗರ ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಫೇಸ್ ರೆಕಗ್ನಿಷನ್ ಕಡ್ಡಾಯಗೊಳಿಸಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪ್ರಧಾನ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ನಗರದ ತ್ಯಾಜ್ಯ ಸಂಗ್ರಹಣಾ ಮೂಲಸೌಕರ್ಯವನ್ನು ಆಧುನೀಕರಿಸುವ ಅಗತ್ಯವನ್ನು ಒತ್ತಿಹೇಳಿದರು, ಪ್ರಸ್ತುತ ಬಳಕೆಯಲ್ಲಿರುವ ಅನೇಕ ತ್ಯಾಜ್ಯ ಸಂಗ್ರಹಣಾ ವಾಹನಗಳು 15 ವರ್ಷಕ್ಕಿಂತ ಹಳೆಯದಾಗಿದ್ದು, ಪದೇ ಪದೇ ದುರಸ್ತಿಯ ಅಗತ್ಯವಿರುವುದರಿಂದ ಅವುಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ ಎಂದು ತಿಳಿಸಿದರು.

ಆದ್ದರಿಂದ, ಸರ್ಕಾರವು ಸುಸಜ್ಜಿತ ವಾಹನಗಳ ಹೊಸ ಸಮೂಹವನ್ನು ಪರಿಚಯಿಸಲು ನಿರ್ಧರಿಸಿದೆ. ಈ ವಾಹನಗಳಲ್ಲಿ ಜಿಪಿಎಸ್ ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಇದು ನಿಗದಿತ ಮಾರ್ಗಗಳಲ್ಲಿ ವಾಹನಗಳ ಸಂಚಾರವನ್ನು ಮೇಲ್ವಿಚಾರಣೆ ಮಾಡಲು ಮತ್ತು ತ್ಯಾಜ್ಯ ಸಂಗ್ರಹಣಾ ವೇಳಾಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು.


ಉದಯವಾಹಿನಿ ಚಿತ್ರ

ಸ್ವಚ್ಛತಾ ಸಿಬ್ಬಂದಿ ಮತ್ತು ವಾಹನಗಳ ಮೇಲ್ವಿಚಾರಣೆ ಹಾಗೂ ನಿರ್ವಹಣೆಯನ್ನು ಸುಧಾರಿಸಲು, ಜಿಪಿಎಸ್ ಆಧಾರಿತ ಮತ್ತು ಮುಖ ಗುರುತಿಸುವಿಕೆ ತಂತ್ರಜ್ಞಾನವುಳ್ಳ ಹಾಜರಾತಿ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗುವುದು. ಇದು ದೈನಂದಿನ ಕಾರ್ಯಾಚರಣೆಗಳಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ನಿಖರತೆಯನ್ನು ತರುತ್ತದೆ

ಮನೆ ಮನೆಗೆ ತೆರಳಿ ತ್ಯಾಜ್ಯ ಸಂಗ್ರಹಿಸುವ ವ್ಯವಸ್ಥೆಯು, ನಿವಾಸಿಗಳು ರಸ್ತೆ ಬದಿಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಎಸೆಯುವುದನ್ನು ತಡೆಯಲು ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದರು.

ದೊಡ್ಡ ವಾಹನಗಳು ಸಂಚರಿಸಲು ಸಾಧ್ಯವಾಗದ ಕಿರಿದಾದ ರಸ್ತೆಗಳು ಮತ್ತು ಗಲ್ಲಿಗಳಲ್ಲಿ ಮೂರು ಚಕ್ರದ ವಾಹನಗಳ ಬಳಕೆಯು ಮುಂದುವರಿಯಲಿದೆ. ಈ ಬದಲಾವಣೆಗಳಿಂದಾಗಿ ನಗರದ ದೈನಂದಿನ ತ್ಯಾಜ್ಯ ಸಂಗ್ರಹಣಾ ಸಾಮರ್ಥ್ಯವು ಪ್ರಸ್ತುತ ಇರುವ 5,200 ಟನ್‌ಗಳಿಂದ 9,000 ಟನ್‌ಗಳಿಗೆ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಬೈರೇಗೌಡರು ಒತ್ತಿ ಹೇಳಿದರು. ಪರಿಷ್ಕೃತ ಟೆಂಡರ್ ಷರತ್ತುಗಳ ಪ್ರಕಾರ, ಗುತ್ತಿಗೆದಾರರು ಪ್ರತಿ ಪ್ಯಾಕೇಜ್‌ಗೆ ಸಂಬಂಧಿಸಿದ ವ್ಯವಸ್ಥೆಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಸುಮಾರು 10 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಬೇಕಾಗುತ್ತದೆ ಎಂದು ಅವರು ಹೇಳಿದರು.

ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಮತ್ತು ಅಗತ್ಯ ಕಾರ್ಯಾಚರಣಾ ವ್ಯವಸ್ಥೆಗಳನ್ನು ರೂಪಿಸಲು ಗುತ್ತಿಗೆದಾರರು ಎರಡು ತಿಂಗಳ ಕಾಲಾವಕಾಶ ಕೋರಿದ್ದು, ಅವರ ಮನವಿಯನ್ನು ಅಂಗೀಕರಿಸಲಾಗಿದೆ ಎಂದರು. ಹೆಚ್ಚು ಪಾರದರ್ಶಕ, ದಕ್ಷ ಮತ್ತು ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯವನ್ನು ಸಂಗ್ರಹಿಸಲು ಹಾಗೂ ವಿಲೇವಾರಿ ಮಾಡಲು, 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವು ಬೆಂಗಳೂರಿನಾದ್ಯಂತ ಹೊಸ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತರುತ್ತಿದೆ.

> ಹೊಸ ವ್ಯವಸ್ಥೆಯ ಅಡಿಯಲ್ಲಿ ಐದು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡ ಐದು ಪ್ಯಾಕೇಜ್‌ಗಳಿಗೆ ಈಗಾಗಲೇ ಕಾರ್ಯಾದೇಶಗಳನ್ನು ನೀಡಲಾಗಿದ್ದು, ನವೆಂಬರ್ ತಿಂಗಳಲ್ಲಿ ಕಾರ್ಯಾಚರಣೆಗೆ ಪ್ರಾರಂಭವಾಗಲಿವೆ ಎಂದು ತಿಳಿಸಿದರು.
> -ಸಚಿವ ಕೃಷ್ಣಬೈರೇಗೌಡ

ವಾಹನಗಳ ಬಳಕೆಗೆ ಹೆಚ್ಚಿನ ಒತ್ತು

ವಾಹನ ವ್ಯವಸ್ಥೆಯ ಈ ಬದಲಾವಣೆಯ ಭಾಗವಾಗಿ, 500 ಕೆಜಿ ಸಾಮರ್ಥ್ಯದ ಸಣ್ಣ ಆಟೋ-ಟಿಪ್ಪರ್‌ಗಳ ಸಂಖ್ಯೆಯನ್ನು ಹಂತ ಹಂತವಾಗಿ ಕಡಿಮೆ ಮಾಡಲಾಗುವುದು. ಬದಲಿಗೆ, ಮೂರರಿಂದ ಐದು ಟನ್ ತ್ಯಾಜ್ಯವನ್ನು ಸಾಗಿಸಬಲ್ಲ ನಾಲ್ಕು ಚಕ್ರದ ವಾಹನಗಳ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುವುದು.

ಫಲಾನುಭವಿಗಳ ಮನೆಗಳಿಗೆ ಭೇಟಿ ನೀಡಿ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಪಂಚಾಯಿತಿ ಮಟ್ಟದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿಗಳನ್ನು ರಚಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಸಮಿತಿಯ ಸದಸ್ಯರು ಫಲಾನುಭವಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು ಹಾಗೂ ಯೋಜನೆಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ನಿಯಮಿತವಾಗಿ ಮಾಹಿತಿ ಹಂಚಿಕೊಳ್ಳಬೇಕು ಎಂದು ಅವರು ಸೂಚಿಸಿದರು. ನಿನ್ನೆ ತಮ್ಮ ಅಧಿಕೃತ ಗೃಹ ಕಚೇರಿ 'ಕೃಷ್ಣಾ'ದಲ್ಲಿ ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿಯ ಡ್ಯಾಶ್‌ಬೋರ್ಡ್ ಹಾಗೂ ಸಾಮಾಜಿಕ ಜಾಲತಾಣಗಳ ಖಾತೆಗಳಿಗೆ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಜನೆಗಳ ಕುರಿತು ನಿಯಮಿತವಾಗಿ ಮಾಹಿತಿ ಹಾಗೂ ಫಲಾನುಭವಿಗಳ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದರಿಂದ ಗ್ಯಾರಂಟಿ ಯೋಜನೆಗಳ ವಿರುದ್ಧ ಹರಡಲಾಗುತ್ತಿರುವ ತಪ್ಪು ಮಾಹಿತಿ ಮತ್ತು ಅಪಪ್ರಚಾರವನ್ನು ಎದುರಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಸಮಿತಿಯ ಸದಸ್ಯರು ಪ್ರತಿಯೊಬ್ಬ ಫಲಾನುಭವಿಯ ಮನೆಗೆ ಭೇಟಿ ನೀಡಿ, ಮನೆಯ ಬಾಗಿಲಿಗೆ 'ಗ್ಯಾರಂಟಿ ಮನೆ' ಎಂಬ ಸ್ಟಿಕ್ಕರ್ ಅಂಟಿಸಬೇಕು ಎಂದು ಸೂಚಿಸಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ದೊರೆಯುತ್ತಿರುವ ಪ್ರಯೋಜನಗಳ ಕುರಿತು ಫಲಾನುಭವಿಗಳಿಗೆ ಮನವರಿಕೆ ಮಾಡಿಕೊಡಬೇಕು. ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು. ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ, 'ಸಮಿತಿಯ ಡ್ಯಾಶ್‌ಬೋರ್ಡ್‌ನಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ ಸರ್ಕಾರ ಮಾಡಿರುವ ವೆಚ್ಚದ ಕುರಿತು ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ಲಭ್ಯವಿದೆ.

ನಿವೃತ್ತ ಯೋಧರಿಗೆ ಪ್ರತ್ಯೇಕ ಲೇಔಟ್ ನಿರ್ಮಿಸಲು ಸರ್ಕಾರ ಹೊಸ ಯೋಜನೆ!

• ಉದಯವಾಹಿನಿ, ಬೆಂಗಳೂರು

ಅಭಿವೃದ್ಧಿಪಡಿಸಿ

ಒಂದು ನಿರ್ದಿಷ್ಟ, ಗ್ರಾಮ ಪಂಚಾಯಿತಿ ಅಥವಾ ಪಟ್ಟಣದಿಂದ ಹೆಚ್ಚಿನ ಸಂಖ್ಯೆಯ ಅರ್ಜಿದಾರರು ಇದ್ದಲ್ಲಿ, ಅಂತಹ ಸ್ಥಳಗಳಲ್ಲಿ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಿ ಅವರಿಗೆ ನಿವೇಶನಗಳನ್ನು ಒದಗಿ ಸಬಹುದಾಗಿದೆ ಎಂದು ಅವರು ಹೇಳಿದರು.

ಉದಯವಾಹಿನಿ ಚಿತ್ರ

ನಿವೇಶನಗಳ ಹಂಚಿಕೆಯಲ್ಲಿ ಉಂಟಾಗುತ್ತಿರುವ ವಿಳಂಬ ನಿವಾರಿಸುವ ನಿಟ್ಟಿನಲ್ಲಿ, ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಮತ್ತು ನಿವೃತ್ತಿ ಹೊಂದಿದ ಸಿಬ್ಬಂದಿಗಾಗಿಯೇ ಪ್ರತ್ಯೇಕ ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲು, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟಗಳಲ್ಲಿ ಸರ್ಕಾರಿ ಜಮೀನು ಗುರುತಿಸುವಂತೆ ರಾಜ್ಯ ಸರ್ಕಾರ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಅಕ್ಟೋಬರ್ 27 ರಂದು ಹೊರಡಿಸಲಾದ ಸರ್ಕಾರಿ ಆದೇಶದ ಪ್ರಕಾರ, ಸೇನಾ ಸಿಬ್ಬಂದಿಗೆ ವಸತಿ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರಿ ಜಮೀನುಗಳನ್ನು ಗುರುತಿಸಿ, ಭೂ ಬ್ಯಾಂಕ್ ಒಂದನ್ನು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಲಭ್ಯವಿರುವ ಜಮೀನು ಮತ್ತು ಅರ್ಜಿದಾರರ ಸಂಖ್ಯೆಯನ್ನು ಆಧರಿಸಿ ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುವುದು. ರಾಜ್ಯಾದ್ಯಂತ ಅರ್ಹ ಸೇನಾ ಸಿಬ್ಬಂದಿಗೆ 'ಭೂ ಗ್ಯಾರಂಟಿ' ಯೋಜನೆಯಡಿ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆಯೂ ಸರ್ಕಾರ ಚಿಂತನೆ ನಡೆಸುತ್ತಿದೆ. ಕಂದಾಯ ಇಲಾಖೆಯ ಸುತ್ತೋಲೆಯೊಂದರ ಪ್ರಕಾರ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969'ರ ಅಡಿಯಲ್ಲಿ ಸೇನಾ ಸಿಬ್ಬಂದಿಗೆ ಕೃಷಿ ಭೂಮಿಯನ್ನು ಮಂಜೂರು ಮಾಡಲು ಅವಕಾಶವಿದೆ. ಆದರೆ, ಕೃಷಿ ಭೂಮಿಯ ಕೊರತೆಯಿರುವ ಹಿನ್ನೆಲೆಯಲ್ಲಿ, ಅದಕ್ಕೆ ಪರ್ಯಾಯವಾಗಿ ಸೇನಾ ಸಿಬ್ಬಂದಿಗೆ ವಸತಿ ನಿವೇಶನಗಳನ್ನು ಒದಗಿಸಲು ಸರ್ಕಾರ ನಿರ್ಧರಿಸಿದೆ.ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಮತ್ತು ಮಾಜಿ ಸೈನಿಕರಿಗೆ ವಸತಿ ನಿವೇಶನಗಳನ್ನು ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಸುಗಮಗೊಳಿಸಲು, ಸರ್ಕಾರವು ಸೈನಿಕ ಸಮ್ಮಾನ್ ಯೋಜನೆಯನ್ನು ಜಾರಿಗೆ ತರಲು ಕ್ರಮ ಕೈಗೊಂಡಿದೆ.

ಚಂದಾಪುರ ಸಮೀಪ 61 ಮೀಟರ್ ಬೃಹತ್ ಗರ್ಡರ್ ಅಳವಡಿಕೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

48 ಕಿ.ಮೀ. ಉದ್ದದ ಬೈಯಪ್ಪನಹಳ್ಳಿ ಹೊಸೂರು ರೈಲು ಮಾರ್ಗ ದ್ವಿಪಥಗೊಳಿಸುವ ಯೋಜನೆ ಭಾಗವಾಗಿ, ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ ನಿಯಮಿತ ಸಂಸ್ಥೆಯು ಚಂದಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ44ರಲ್ಲಿ 470ನೇ ಸಂಖ್ಯೆಯ ಪ್ರಮುಖ ಸೇತುವೆಗೆ ತಲಾ 61 ಮೀಟರ್ ಉದ್ದ ಹಾಗೂ ಸುಮಾರು 245 ಟನ್ ತೂಕದ ಎರಡು ಬೃಹತ್ ಗರ್ಡರ್‌ಗಳನ್ನು (ಬೃಹತ್ ಆಧಾರ ತೊಲೆಗಳು) ಅಳವಡಿಸಿದೆ.

ಮೊದಲ ಗರ್ಡರ್ ನ್ನು ಅಕ್ಟೋಬರ್ 10ರಂದು ಹಾಗೂ ಎರಡನೆಯದನ್ನು ನಿನ್ನೆ ಅಳವಡಿಸಲಾಗಿದೆ. ಬೆಂಗಳೂರಿನಲ್ಲಿ ರೈಲು ಮಾರ್ಗ ದ್ವಿಪಥಗೊಳಿಸುವ ಯೋಜನೆಗಾಗಿ ಅಳವಡಿಸಿರುವ ಅತ್ಯಂತ ಉದ್ದದ ಗರ್ಡರ್‌ಗಳು ಇವಾಗಿವೆ ಎಂದು ತಿಳಿಸಿದೆ. ಹೆದ್ದಾರಿ ಮೇಲಿನ ಸೇತುವೆಯ ವ್ಯಾಪ್ತಿಯಲ್ಲಿ ಮಧ್ಯಂತರ ಆಧಾರಸ್ತಂಭ ನಿರ್ಮಿಸದೆ, ಒಂದೇ ಕೆಳಾಧಾರ ರಚನೆಯ ಮೇಲೆ ಎರಡೂ ರೈಲು ಮಾರ್ಗಗಳನ್ನು ಅಳವಡಿಸಲು ಅನುಕೂಲವಾಗುವಂತೆ ಈ ಸೇತುವೆಯನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದ ಹೆದ್ದಾರಿಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವ ನಿರೀಕ್ಷೆಯಿದೆ. ಅನುಮೋದಿತ ವಿನ್ಯಾಸದ ಪ್ರಕಾರ ಸಂಬಂಧಿತ ಕಾಮಗಾರಿಗಳು ಪೂರ್ಣಗೊಂಡ ಬಳಿಕ, ಯೋಜಿತ 12 ಪಥಗಳ ಹೆದ್ದಾರಿ ನಿರ್ಮಾಣಕ್ಕೂ ಈ ವ್ಯವಸ್ಥೆ ಪೂರಕವಾಗಲಿದೆ.

ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್, ರಸ್ತೆ ಮತ್ತು ರೈಲು ಮಾರ್ಗಗಳು ಬೇರೆ ಬೇರೆ ಮಟ್ಟಗಳಲ್ಲಿ ಹಾದುಹೋಗುವ ಈ ವ್ಯವಸ್ಥೆಯಿಂದ ರಸ್ತೆ ಹಾಗೂ ರೈಲು ಸಂಚಾರ ಪರಸ್ಪರ ಅಡಚಣೆಯಿಲ್ಲದೆ ನಡೆಯಲಿದೆ. ರೈಲುಗಳ ಸಂಚಾರದಿಂದ ಹೆದ್ದಾರಿಯ ವಾಹನ ಸಂಚಾರಕ್ಕೆ ಉಂಟಾಗುವ ಅಡಚಣೆಗಳು ಕಡಿಮೆಯಾಗಲಿವೆ ಎಂದು ತಿಳಿಸಿದರು. ರೈಲು ಮಾರ್ಗಕ್ಕೆ ಸಂಬಂಧಿಸಿದ ಹಾಗೂ ಇತರ ಪೂರಕ ಕಾಮಗಾರಿಗಳನ್ನು ಮುಂದಿನ ಜನವರಿಯೊಳಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

> ಈ ಯೋಜನೆಯಿಂದ ಪ್ರಯಾಣಿಕ ಮತ್ತು ಸರಕು ಸಾಗಣೆ ರೈಲುಗಳ ಸಂಚಾರ ಸಾಮರ್ಥ್ಯ ಹೆಚ್ಚಾಗುವ ನಿರೀಕ್ಷೆಯಿದ್ದು, ಬೆಂಗಳೂರು ಮತ್ತು ಹೊಸೂರು ನಡುವಿನ ರೈಲು ಸಂಪರ್ಕ ಮತ್ತಷ್ಟು ಸುಧಾರಿಸಲಿದೆ.

ಸುಪ್ರೀಂ ನಲ್ಲಿ 2022 ರ ವಿಶೇಷ ಕಾಯ್ದೆ ರದ್ದು!

• ಉದಯವಾಹಿನಿ, ಬೆಂಗಳೂರು

2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ವಿವಾದದಲ್ಲಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದ್ದು, ರಾಜ್ಯ ಸರ್ಕಾರಕ್ಕೆ ತೀವ್ರ ಹಿನ್ನಡೆಯಾಗಿದೆ. ಈ ಪ್ರಕರಾಣದ ಸಂಬಂಧ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಕಾನೂನು ಹೋರಾಟ ನಡೆಯುತ್ತಿತ್ತು. 201 ರ ಈ ನೇಮಕಾತಿ ಪಟ್ಟಿಯನ್ನು ಊರ್ಜಿತಗೊಳಿಸಲು ರಾಜ್ಯ ಸರ್ಕಾರ 2022ರಲ್ಲಿ ವಿಶೇಷ ಕಾಯ್ದೆಯನ್ನು ಜಾರಿಗೆ ತಂದಿತ್ತು. ಈಗ ಈ ಕಾಯ್ದೆಯನ್ನೇ ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಪರಿಣಾಮ ಅಂದು ನೇಮಕವಾಗಿದ್ದ 362 ಕೆಎಎಸ್ ಅಧಿಕಾರಿಗಳ ನೌಕರಿಗೆ ನೇರ ಕುತ್ತು ಬಂದಿದೆ.

ಸುಧಾರಣೆ ಜಾರಿಗೊಳಿಸುವವರೆಗೂ ಏಕಖಅ ಪರೀಕ್ಷೆ ನಡೆಸಬೇಡಿ: ಸರ್ಕಾರಕ್ಕೆ ಉದ್ಯೋಗಾಕಾಂಕ್ಷಿಗಳ ಸಲಹೆ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ವಿನೋದ್ ಚಂದ್ರನ್ ಅವರನ್ನೊಳಗೊಂಡ ವಿಭಾಗೀಯ ಪೀಠ ಗುರುವಾರ ಈ ಮಹತ್ವದ ಆದೇಶ ಪ್ರಕಟಿಸಿದೆ.

2011ರ ಸಾಲಿನ ಕೆಪಿಎಸ್‌ಸಿ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕಾರಣದಿಂದ ಈ ಹಿಂದೆ ಹೈಕೋರ್ಟ್ ಆಯ್ಕೆ ಪಟ್ಟಿಯನ್ನು ರದ್ದುಪಡಿಸಿತ್ತು. ಆದರೆ ಈ ಆಯ್ಕೆ ಪಟ್ಟಿಯನ್ನು ರಕ್ಷಿಸುವ ಸಲುವಾಗಿ ರಾಜ್ಯ ಸರ್ಕಾರ 2022ರಲ್ಲಿ ವಿಶೇಷ ಕಾಯ್ದೆಯನ್ನು ಜಾರಿಗೆ ತಂದಿತ್ತು. ಸರ್ಕಾರದ ಈ ಕಾಯ್ದೆಯನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಹೈಕೋರ್ಟ್‌ನ ಈ ನಿರ್ಧಾರವನ್ನು ಪ್ರಶ್ನಿಸಿ ಅರ್ಜಿದಾರರಾದ ಶ್ರೀನಿವಾಸ ಟಿ. ಮತ್ತು ಇತರರು ಸುಪ್ರೀಂಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಈಗ ಸುಪ್ರೀಂ ಕೋರ್ಟ್ ಸರ್ಕಾರದ ಕಾಯ್ದೆಯನ್ನು ಸಂಪೂರ್ಣವಾಗಿ ಅಸಿಂಧುಗೊಳಿಸಿ ರದ್ದುಪಡಿಸಿದೆ.

ಇ- ಖಾತಾಗೆ ಅರ್ಜಿ ಸಲ್ಲಿಸಿದ್ದ ಬೆಂಗಳೂರಿಗರಿಗೆ ಆಘಾತ

• ಉದಯವಾಹಿನಿ, ಬೆಂಗಳೂರು

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಇ-ಖಾತಾ ಗೆ ಅರ್ಜಿ ಸಲ್ಲಿಸಿದ್ದ ಬೆಂಗಳೂರಿನ ಹಲವು ಖಾತಾದಾರರಿಗೆ ಹಲವು ತೊಡಕುಗಳು ಎದುರಾಗುತ್ತಿದ್ದು ಆತಂಕ ಮೂಡಿದೆ. ಹಲವು ಮಂದಿಯ ಅರ್ಜಿಗಳು ತಿರಸ್ಕೃತಗೊಂಡಿದ್ದು, ಅಸ್ಪಷ್ಟ ದಾಖಲೆಗಳ ಕಾರಣ ನೀಡಲಾಗಿದೆ. ಈ ಪೈಕಿ 5 ಸಾವಿರ ಇ ಖಾತಾಗಳು ಡೇಂಜರ್ ಝೋನ್‌ನಲ್ಲಿವೆ. ಖಾತಾ ಮೇಳದಲ್ಲಿ ಇ-ಖಾತಾಗೆ ಸಂಬಂಧಿಸಿದ ಸಮಸ್ಯೆ ಸರಿಪಡಿಸಿಕೊಳ್ಳುವಂತೆ ಖಾತಾದಾರರಿಗೆ ಸಚಿವ ಕೃಷ್ಣ ಬೈರೇಗೌಡ ಕರೆ ನೀಡಿದ್ದಾರೆ. ಶನಿವಾರ ಖಾತಾ ಮೇಳ ನಡೆಯಲಿದ್ದು, ಗೊಂದಲ ಇರುವ ಖಾತಾದಾರರಿಗೆ ಪರಿಹಾರ ಸಿಗಲಿದೆ. ಇ-ಖಾತಾಗೆ ಅಪ್ಲೈ ಮಾಡಿದರೂ ಖಾತಾಗೆ ಅನುಮೋದನೆ ಆಗುತ್ತಿಲ್ಲ, ಸಾಕಷ್ಟು ಸಮಸ್ಯೆ ಇದೆ, ತಾಂತ್ರಿಕ ದೋಷ ಇದೆ, ಜೊತೆಗೆ ಸಾಫ್ಟ್ವೇರ್ ಸಮಸ್ಯೆ ಇದೆ ಎಂಬ ಆರೋಪ ಕೇಳಿಬಂದಿದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಚಿವ ಕೃಷ್ಣ ಬೈರೇಗೌಡ, ಇ ಖಾತಾಗೆ ಅರ್ಜಿ ಸಲ್ಲಿಕೆ ಮಾಡಿದ್ದ 5 ಸಾವಿರ ಖಾತಾಗಳು ರಿಜೆಕ್ಟ್ ಆಗಿವೆ ಎಂಬ ಮಾಹಿತಿ ಬಂದಿದೆ. ಅಸ್ಪಷ್ಟವಾದ ದಾಖಲೆ, ಲೊಕೇಷನ್ ಸರಿಯಾಗಿ ನಮೂದು ಮಾಡದೇ ಇರುವುದು, ಟ್ರ್ಯಾಕಿಂಗ್ ಸರಿಯಾಗಿ ಅಪ್ಲೋಡ್ ಮಾಡದೇ ಇರುವುದು.

ಆತ್ಯಾಚಾರ ಎಸಗಿದ್ದ ದುರುಳರನ್ನು ಕಿಡ್ನಾಪ್ ಮಾಡಿ ಮಾರಣಾಂತಿಕ ಹಲ್ಲೆ: ಯುವತಿ, ಪ್ರಿಯತಮ ಸೇರಿ 11 ಮಂದಿ ಬಂಧನ

• ಉದಯವಾಹಿನಿ, ಬೆಂಗಳೂರು

ತನ್ನ ಮೇಲೆ ಆತ್ಯಾಚಾರವೆಸಗಿದ್ದ ದುರುಳರಿಗೆ ಬುದ್ಧಿ ಕಲಿಸಲು ಸಂಚು ರೂಪಿಸಿದ ಯುವತಿಯು ಪ್ರಿಯಕರನ ಮೂಲಕ ಆರೋಪಿಗಳನ್ನು ಒಗ್ಗೂಡಿಸಿ, ಇಬ್ಬರನ್ನು ಅಪಹರಿಸಿ ಮಾರಣಾಂತಿಕ ಹಲ್ಲೆ ನಡೆಸಿ ಹತ್ಯೆಗೆ ಮುಂದಾಗಿದ್ದ ಪ್ರಕರಣದಲ್ಲಿ 11 ಮಂದಿ ಆರೋಪಿಗಳನ್ನು ನಗರದ ಮಾರತ್ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈ ಸಂಬಂಧ ಗಾಲೆಟಿ ರಾಜ್‌ಕುಮಾರ್, ಮಂಜುನಾಥ್, ಲೋಕನಾಥ್, ಸುಹೈಲ್, ಗಂಗಾರೆಡ್ಡಿಗಾರಿ, ಶಿವಸುಬ್ರಮಣ್ಯ, ಸಲೀಂಪಾಷ, ನಯೀಂಪಾಷಾ, ಶಬಾಜ್, ರಾಜೇಶ್ ಹಾಗೂ ಆತ್ಯಚಾರಕ್ಕೊಳಗಾದ ಯುವತಿಯನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಮನ್ಸೂರ್ ಹಾಗೂ ತಬ್ರೇಜ್ ಎಂಬವರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ಶೋಧ ನಡೆಸಲಾಗುತ್ತಿದೆ.

ಜೊತೆಗೆ, ಯುವತಿ ಮೇಲೆ ಆತ್ಯಾಚಾರ ನಡೆಸಿದ ಆರೋಪದಡಿ ಅಪಹರಣಕ್ಕೆ ಒಳಗಾದ ಮಹೇಂದ್ರ ಹಾಗೂ ತರುಣ್ ಎಂಬವರನ್ನೂ ಬಂಧಿಸಿ ತನಿಖೆ ಚುರುಕುಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಆಂಧ್ರಪ್ರದೇಶದ ಮದನಪಲ್ಲಿಯ ಬಿ.ರಮಣ ಎಂಬವರು ತಮ್ಮ ಮಗ ಮಹೇಂದ್ರನನ್ನು ಅಪಹರಣ ಮಾಡಲಾಗಿದೆ ಎಂದು ನೀಡಿದ ದೂರಿನ ಮೇರೆಗೆ ಕಾರ್ಯಪ್ರವೃತರಾದ ಪೊಲೀಸರು ಮಿಂಚಿನ ಕಾರ್ಯಾಚರಣೆ ನಡೆಸಿ 11 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಆರೇ ಗಂಟೆಯಲ್ಲಿ ಅಪಹರಣ ಪ್ರಕರಣ ಭೇದಿಸಿದ ಪೊಲೀಸರು

• ಉದಯವಾಹಿನಿ, ಬೆಂಗಳೂರು

ಅಪಹರಣ ಪ್ರಕರಣ ದಾಖಲಾದ ಕೇವಲ ಆರು ಗಂಟೆಗಳಲ್ಲಿ ಕಾರ್ಯಾಚರಣೆ ನಡೆಸಿದ ಬೆಂಗಳೂರು ಪೊಲೀಸರು, ಇಬ್ಬರು ಸಾಫ್ಟ್‌ವೇರ್ ಉದ್ಯೋಗಿಗಳನ್ನು ರಕ್ಷಿಸಿ, ಪ್ರಕರಣಕ್ಕೆ ಸಂಬಂಧಿಸಿದಂತೆ ವೈಟ್‌ಫೀಲ್ಡ್ ವಿಭಾಗದಲ್ಲಿ 11 ಮಂದಿಯನ್ನು ಬಂಧಿಸಿದ್ದಾರೆ. ಆದರೆ, ಪ್ರಕರಣವು ಅನಿರೀಕ್ಷಿತ ತಿರುವು ಪಡೆದುಕೊಂಡಿದ್ದು, ಅಪಹರಣದಿಂದ ರಕ್ಷಿಸಲ್ಪಟ್ಟ ಪ್ರಮುಖ ಸಂತ್ರಸ್ತನ ವಿರುದ್ಧವೇ ಅಪಹರಣ ಪ್ರಕರಣದ ಮಹಿಳಾ ಆರೋಪಿಯೊಬ್ಬರು ಅತ್ಯಾಚಾರದ ದೂರು ದಾಖಲಿಸಿದ್ದಾರೆ. ಇದರ ಬೆನ್ನಲ್ಲೇ ಆತನನ್ನೂ ಪೊಲೀಸರು ಬಂಧಿಸಿದ್ದಾರೆ. ಆರಂಭದಲ್ಲಿ ಪ್ರತೀಕಾರದ ಉದ್ದೇಶದಿಂದ ಅಪಹರಣ ನಡೆಸಲಾಗಿದ್ದು, ಬಳಿಕ ಆರೋಪಿಗಳು ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು ಎಂಬುದು ಪೊಲೀಸ್ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಘಟನೆ ಬೆಳಕಿಗೆ ಬಂದಿದೆ. ಆಂಧ್ರಪ್ರದೇಶ ನಿವಾಸಿ ರಮಣ ಎಂಬುವರು ಮಾರತಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಬೆಂಗಳೂರಿನ ಮಾರತಹಳ್ಳಿ ಪ್ರದೇಶದಲ್ಲಿ ವಾಸವಾಗಿರುವ ತಮ್ಮ ಪುತ್ರ, ಬಿ. ಮಹೇಂದ್ರ (23ವ) ಹಾಗೂ ಆತನ ರೂಮ್ ಮೇಟ್ ಯೆರಿಬೋಯಿನ ತರುಣ್ (23ವ) ಅವರನ್ನು ನಡುವಿನ ಅವಧಿಯಲ್ಲಿ ಅಪಹರಿಸಲಾಗಿದೆ ಎಂದು ದೂರು ನೀಡಿದ್ದರು.

ಇಬ್ಬರೂ ಸಾಫ್ಟ್‌ವೇರ್ ಉದ್ಯೋಗಿಗಳಾಗಿದ್ದಾರೆ. ದೂರು ದಾಖಲಾದ ಕೂಡಲೇ ಮಾರತಹಳ್ಳಿ ಪೊಲೀಸ್ ಇನ್‌ಸ್ಪೆಕ್ಟರ್ ಪುನೀತ್ ಬಿ.ಎನ್. ನೇತೃತ್ವದಲ್ಲಿ ಹುಡುಕಾಟಕ್ಕೆ ವಿಶೇಷ ತಂಡ ರಚಿಸಲಾಯಿತು. ಸಿ ಜತೆಗೆ ವಿವಿಧ ಸ್ಥಳಗಳಲ್ಲಿ ತಾಂತ್ರಿಕ ವಿಧಾನಗಳ ಮೂಲಕ ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಿತು.

ಸಾಲ ತೀರಿಸಲು 6 ಲಕ್ಷ ರೂ ಮೌಲ್ಯದ ಚಿನ್ನ ಮಾರಿದ ಅನ್ನದಾತ!

ಕರಿಬಸಪ್ಪ ಅವರು ತಮ್ಮ ನಾಲ್ಕು ಎಕರೆ ಜಮೀನಿನಲ್ಲಿ ಜೋಳ ಮತ್ತು ಹತ್ತಿ ಬೆಳೆಯಲು ಖಾಸಗಿ ಹಣಕಾಸು ಸಂಸ್ಥೆಯೊಂದರಿಂದ ಸಾಲ ಪಡೆದಿದ್ದರು.

• ಉದಯವಾಹಿನಿ, ಬೆಂಗಳೂರು

1 ಮಳೆಯು ಬೆಳೆಗಳಿಗೆ ಆಸರೆಯಾಗುತ್ತದೆ

2 ರೈತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ

3 ಸಣ್ಣ ಮತ್ತು ಅತಿ ಸಣ್ಣ ರೈತರ ಪಾಲಿಗೆ

ವಿಜಯನಗರ ಜಿಲ್ಲೆಯ ದುಗ್ಗಟ್ಟಿಯ 50 ವರ್ಷದ ಕರಿಬಸಪ್ಪ ಪಾಲಿಗೆ, ಬರಗಾಲವು ಕೇವಲ ಬೆಳೆಗಳನ್ನು ಒಣಗಿಸುವುದರೊಂದಿಗೆ ನಿಲ್ಲದೆ, ವರ್ಷಗಳ ಕಾಲ ಅವರು ಕೂಡಿಟ್ಟಿದ್ದ ಉಳಿತಾಯವನ್ನೂ ಕಸಿದುಕೊಂಡಿದೆ.

ಸಾಲ ತೀರಿಸಲು ಅವರು ಸುಮಾರು 6 ಲಕ್ಷ ರೂಪಾಯಿ ಮೌಲ್ಯದ 50 ಗ್ರಾಂ ಚಿನ್ನವನ್ನು ಮಾರಾಟ ಮಾಡಬೇಕಾದ ಅನಿವಾರ್ಯತೆ ಎದುರಾಯಿತು. ಕರಿಬಸಪ್ಪ ಅವರು ತಮ್ಮ ನಾಲ್ಕು ಎಕರೆ ಜಮೀನಿನಲ್ಲಿ ಜೋಳ ಮತ್ತು ಹತ್ತಿ ಬೆಳೆಯಲು ಖಾಸಗಿ ಹಣಕಾಸು ಸಂಸ್ಥೆಯೊಂದರಿಂದ ಸಾಲ ಪಡೆದಿದ್ದರು.

ಬರಪೀಡಿತ ಪ್ರದೇಶದ ಅನೇಕ ರೈತ ಕುಟುಂಬಗಳಂತೆಯೇ, ಮಳೆಯು ಬೆಳೆಗಳಿಗೆ ಆಸರೆಯಾಗುತ್ತದೆ ಮತ್ತು ಮನೆಯ ಖರ್ಚು-ವೆಚ್ಚಗಳನ್ನು ನಿಭಾಯಿಸಲು ಹಾಗೂ ಸಾಲ ತೀರಿಸಲು ಬೇಕಾದ ಆದಾಯವನ್ನು ಒದಗಿಸುತ್ತದೆ ಎಂಬ ನಿರೀಕ್ಷೆಯೊಂದಿಗೆ ಅವರು ಕೃಷಿಯಲ್ಲಿ ಹೂಡಿಕೆ ಮಾಡಿದ್ದರು.

ಆದರೆ ಬೆಳೆಗಳು ಕೈಕೊಟ್ಟಿರುವುದರಿಂದ ರೈತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಕೃಷಿ ಆದಾಯ ಅನಿಶ್ಚಿತವಾಗಿರುವಾಗ, ಬಿತ್ತನೆ


ಉದಯವಾಹಿನಿ ಚಿತ್ರ

> ವಿಜಯನಗರ ಜಿಲ್ಲೆಯ ಎಲ್ಲಾ ಏಳು ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಈ ಹಿನ್ನೆಲೆಯಲ್ಲಿ, ರೈತರು ಮತ್ತು ಗ್ರಾಮೀಣ ನಿವಾಸಿಗಳು ಎದುರಿಸುತ್ತಿರುವ ಸಂಕಷ್ಟಗಳನ್ನು ತಗ್ಗಿಸಲು ಜಿಲ್ಲಾಡಳಿತವು ಕ್ರಮಗಳನ್ನು ಚುರುಕುಗೊಳಿಸಿದೆ. ಬರ ಪರಿಹಾರ ಕ್ರಮಗಳು ಮತ್ತು ಸರ್ಕಾರಿ ನೆರವನ್ನು ಸಕಾಲದಲ್ಲಿ ತಲುಪಿಸುವ ಅಗತ್ಯವಿದೆ.-ಡಾ. ಜಿ. ಪರಮೇಶ್ವರ್

ಬೀಜ, ರಸಗೊಬ್ಬರ ಮತ್ತು ಇತರ ಕೃಷಿ ವೆಚ್ಚಗಳಿಗಾಗಿ ಪಡೆದ ಸಾಲವನ್ನು ಮರುಪಾವತಿಸಬೇಕಾದ ಸವಾಲು ಅವರ ಮುಂದಿದೆ. ಸಣ್ಣ ಮತ್ತು ಅತಿ ಸಣ್ಣ ರೈತರ ಪಾಲಿಗೆ, ನಿರೀಕ್ಷಿತ ಫಸಲು ಸಿಗದಿದ್ದಾಗ, ಅದು ಕೇವಲ ಒಂದು ಹಂಗಾಮಿನ ಹಿನ್ನಡೆಯಾಗದೆ, ದೀರ್ಘಕಾಲೀನ ಆರ್ಥಿಕ ಬಿಕ್ಕಟ್ಟಾಗಿ ಪರಿಣಮಿಸುತ್ತದೆ.

ಈ ಬರಗಾಲವು ಕೇವಲ ಹೊಲ-ಗದ್ದೆಗಳಿಗಷ್ಟೇ ಸೀಮಿತವಾಗದೆ, ಗ್ರಾಮೀಣ ಕುಟುಂಬಗಳ ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಬೆಳೆಗಳು ವಿಫಲವಾದಾಗ, ಕುಟುಂಬಗಳು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಅತ್ಯಗತ್ಯ ಖರ್ಚುಗಳನ್ನು ಮುಂದೂಡುವುದು ಅಥವಾ ತಕ್ಷಣದ ಆರ್ಥಿಕ ಅಗತ್ಯಗಳನ್ನು ಪೂರೈಸಲು ತಮ್ಮ ಉಳಿತಾಯವನ್ನು ಬಳಸಿಕೊಳ್ಳುವುದು. ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಕಾರಣ, ಈ ಪ್ರದೇಶದ ರೈತರು ತಮ್ಮ ಜೀವನೋಪಾಯದ ಬಗ್ಗೆ ಅನಿಶ್ಚಿತತೆಯನ್ನು ಎದುರಿಸುತ್ತಿದ್ದಾರೆ.

ನಿರೀಕ್ಷಿತ ಕೃಷಿ ಆದಾಯ

ಕರಿಬಸಪ್ಪ ಅವರ ಕುಟುಂಬಕ್ಕೆ, ಬೆಳೆ ನಷ್ಟವು ಭಾರೀ ಬೆಲೆ ತೆರುವಂತೆ ಮಾಡಿದೆ. ಇದು ಕೇವಲ ನಿರೀಕ್ಷಿತ ಕೃಷಿ ಆದಾಯವನ್ನಷ್ಟೇ ಅಲ್ಲದೆ, ವರ್ಷಗಳ ಕಾಲ ಶ್ರಮಪಟ್ಟು ಕೂಡಿಟ್ಟಿದ್ದ 6 ಲಕ್ಷ ರೂಪಾಯಿ ಮೌಲ್ಯದ ಚಿನ್ನವನ್ನೂ ಕಸಿದುಕೊಂಡಿದೆ.

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಬರಗಾಲ: ಹತ್ತು ವರ್ಷಗಳಲ್ಲೇ ಗರಿಷ್ಠ ಮಟ್ಟಕ್ಕೆ ಏರಿದ ಜೋಳದ ಬೆಲೆ! ವಿಬಿ-ಗ್ರಾಮ್' ಯೋಜನೆಯಡಿಬಿಡುಗಡೆಯಾಗಬೇಕಾದ ಅನುದಾನವನ್ನು ನಿಗದಿತ ಸಮಯದೊಳಗೆ ತಲುಪಿಸುವುದನ್ನು ಖಚಿತಪಡಿಸಿಕೊಳ್ಳುವಂತೆ ಜಿಲ್ಲಾಡಳಿತವು ಅಧಿಕಾರಿಗಳಿಗೆ ಸೂಚನೆ ನೀಡಿದೆ. ಬರಪೀಡಿತ ಹಳ್ಳಿಗಳಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗುವಂತೆ ನೋಡಿಕೊಳ್ಳಲು ಹಾಗೂ ಜಾನುವಾರುಗಳಿಗೆ ಮೇವು ಮತ್ತು ನೀರು ಒದಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸ್ಥಳೀಯ ಆಡಳಿತಕ್ಕೆ ನಿರ್ದೇಶನ ನೀಡಲಾಗಿದೆ.

ಉದ್ಭವಿಸುವ ಅಗತ್ಯತೆಗಳನ್ನು ವಿಳಂಬವಿಲ್ಲದೆ ಪೂರೈಸಲು, ಸ್ಥಳೀಯ ಸಂಸ್ಥೆಗಳು ಮತ್ತು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಕಾರಣ, ಕುಡಿಯುವ ನೀರಿನ ಕೊರತೆಯನ್ನು ತಡೆಗಟ್ಟಲು ಪರಿಹಾರ ಕ್ರಮಗಳ ಅನುಷ್ಠಾನವನ್ನು ಆಡಳಿತವು ಸೂಕ್ಷ್ಮವಾಗಿ ಗಮನಿಸುತ್ತದೆ. ನಿರಂತರ ಬರಗಾಲದ ಸಮಯದಲ್ಲಿ ಜಾನುವಾರು ಮಾಲೀಕರಿಗೆ ಸಕಾಲಿಕ ನೆರವು ನೀಡಲು ಮುಂದಾಗಿದೆ.

ಅಭಿವೃದ್ಧಿಗೆ ಮೂಲಸೌಕರ್ಯ ಕಲ್ಪಿಸುವುದು ಮುಖ್ಯ

• ಉದಯವಾಹಿನಿ, ಕೆ.ಆರ್.ಪೇಟೆ.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಸುಮಾರು 36 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಟಿಎಪಿಸಿಎಂಎಸ್ ಕಚೇರಿ ಹಾಗೂ ಗೋದಾಮು ಕಟ್ಟಡದ ಕಾಮಗಾರಿಗೆ ಕ್ಷೇತ್ರದ ಜನಪ್ರಿಯ ಶಾಸಕ ಹೆಚ್.ಟಿ.ಮಂಜು ಅವರು ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಶಾಸಕರು, ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾದ ಮೂಲಸೌಕರ್ಯಗಳನ್ನು ಕಲ್ಪಿಸುವುದು ಮುಖ್ಯವಾಗಿದೆ. ಕಚೇರಿ ಹಾಗೂ ಗೋದಾಮು ಕಟ್ಟಡ ನಿರ್ಮಾಣದಿಂದ ಸಂಸ್ಥೆಯ ಆಡಳಿತಾತ್ಮಕ ಕಾರ್ಯಚಟುವಟಿಕೆಗಳಿಗೆ ಅನುಕೂಲವಾಗಲಿದ್ದು, ರೈತರು ಹಾಗೂ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಟಿಎಪಿಸಿಎಂಎಸ್ ಆಡಳಿತ ಮಂಡಳಿಯ ಸದಸ್ಯರು ಶಾಸಕ ಹೆಚ್.ಟಿ.ಮಂಜು ಅವರನ್ನು ಸನ್ಮಾನಿಸಿ, ಗೌರವಿಸಿ ಅಭಿನಂದಿಸಿದರು.ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಮಲ್ಲೇನಹಳ್ಳಿ ಮೋಹನ್ ಅವರು ಮಾತನಾಡಿ, ಕಟ್ಟಡ ಕಾಮಗಾರಿಯ ಉದ್ದೇಶ ಹಾಗೂ ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.

ಬೌದ್ಧ ಸಮ್ಮೇಳನಕ್ಕೆ ಹೊರಟ ನೂರಾರು ಅನುಯಾಯಿಗಳು

• ಉದಯವಾಹಿನಿ, ಮಳವಳ್ಳಿ

ಚಾಮರಾಜನಗರದಲ್ಲಿ ನಡೆಯುವ ಅಂತರಾಷ್ಟ್ರೀಯ ಬೌದ್ಧ ಸಮ್ಮೇಳನಕ್ಕೆ ಮಳವಳ್ಳಿ ತಾಲ್ಲೂಕಿನ ನೌಕರ ಬಂಧುಗಳು ಅಪಾರ ಬುದ್ಧ ಬಸವ ಅಂಬೇಡ್ಕರ್ ಅನುಯಾಯಿಗಳು ಬಸ್ಸುಗಳಲ್ಲಿ ಪ್ರಯಾಣ ಬೆಳೆಸಿದರು ಮಳವಳ್ಳಿ ತಾಲ್ಲೂಕಿನ ಅತ್ಯಂತ ಸುಮಾರು 20ಕ್ಕೂ ಹೆಚ್ಚು ಬಸ್ಸುಗಳು ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶದಲ್ಲಿನ ಬುದ್ಧ ಬಸವ ಅಂಬೇಡ್ಕರ್ ಅನುಯಾಯಿಗಳನ್ನು ಕರೆದುಕೊಂಡು ಹೊರಟವು ಮಳವಳ್ಳಿ ಪಟ್ಟಣದ ಅಂಬೇಡ್ಕರ್ ಪ್ರತಿಮೆ ಬಳಿ ನೂರಾರು ಬುದ್ಧ ಬಸವ ಅಂಬೇಡ್ಕರ್ ಅನುಯಾಯಿಗಳು ಬುದ್ಧ ಘೋಷಣೆಗಳೊಂದಿಗೆ ಚಾಮರಾಜನಗರದತ್ತ ಹೊರಟರು ಪ್ರಸ್ತುತ ದಿನಗಳಲ್ಲಿ ಪ್ರಪಂಚದಾದ್ಯಂತ ಅಶಾಂತಿ ನೆಲೆಸಿದ್ದು ಮನುಷ್ಯರು ಕ್ರೌರ್ಯ ಹಿಂಸೆಯಿಂದ ಬದುಕುತ್ತಿದ್ದಾರೆ ದೇಶ ದೇಶಗಳ ನಡುವೆ ಯುದ್ಧ ಸಾರುತ್ತಿದ್ದು ಅಶಾಂತಿ ನೆಲೆಸಿದೆ ಅದಕ್ಕಾಗಿ ಈ ಪ್ರಪಂಚಕ್ಕೆ ಬುದ್ಧನ ಸಂದೇಶಗಳು ಅಮೂಲ್ಯ ಮಾರ್ಗವನ್ನು ತೋರಿಸುತ್ತಾ ಶಾಂತಿ ಸ್ಥಾಪನೆಗೆ ಕಾರಣವಾಗಿವೆ ಇಂತಹ ಬೌದ್ಧ ಸಮ್ಮೇಳನಗಳು ಪ್ರತಿ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲೂ ಸಹ ನಡೆದು ಬುದ್ಧರ ಸಂದೇಶಗಳನ್ನು ಪಂಚಶೀಲ ತತ್ವಗಳನ್ನು ಜನರಲ್ಲಿ ಮೂಡಿಸಬೇಕೆಂದು ಬುದ್ಧ ಅನುಯಾಯಿ ಶಿವಕುಮಾರ್ ಆರೋಗ್ಯ ಇಲಾಖೆ ಇವರು ಸಂದೇಶ ಸಾರಿದರು :ನುಷ್ಯರು ಕ್ರೌರ್ಯ ಹಿಂಸೆಯಿಂದ ಬದುಕುತ್ತಿದ್ದಾರೆ ಬುದ್ಧ ಪಯಣದಲ್ಲಿ ಎಸ್ಸಿ , ಎಸ್ಟಿ ನೌಕರರ ಸಂಘದ ಅಧ್ಯಕ್ಷರಾದ ಬೋರಯ್ಯ ಮಲ್ಲಿಕಾರ್ಜುನ ಸ್ವಾಮಿ ಪ್ರಾಂಶುಪಾಲರು ಆದರ್ಶ ವಿದ್ಯಾಲಯ ಮಳವಳ್ಳಿ ರಾಚಯ್ಯ ಶೆಟ್ಟಹಳ್ಳಿ ವಕೀಲರು ಚುಂಚಣ್ಣ ಕೃಷ್ಣಮೂರ್ತಿ ಶಿಕ್ಷಕರು ಪುಟ್ಟಸ್ವಾಮಿ ಸೀಕ್ರೆಶ್ ಮಲ್ಲಿಕಾರ್ಜುನ ಸ್ವಾಮಿ ಕೆಬಿ ಶಾಂತರಾಜು ಮಹಾಲಿಂಗಯ್ಯ ಮರಿಸ್ವಾಮಿ ಜಿ ಶಿಕ್ಷಕರು ನಾಗರಾಜು ಕೃಷ್ಣ ಶೆಟ್ಟಳ್ಳಿ ಸಿ ರಾಚಯ್ಯ ಸುಧಾಕರ್ ಸಂದೇಶ್ ಮಹದೇವು ಇನ್ನೂ ಹಲವಾರು ಬುದ್ಧ ಬಸವ ಅಂಬೇಡ್ಕರ್ ಅನುಯಾಯಿಗಳು ಬೌದ್ಧ ಸಮ್ಮೇಳನಕ್ಕೆ ಪ್ರಯಾಣ ಬೆಳೆಸಿದರು.

ಕಾಂಗ್ರೆಸ್ ಸಂಘಟನೆ ಬಲಪಡಿಸಲು ಸೃಜನ್ ಅಭಿಯಾನ-2

ಹುಣಸೂರು ತಾಲ್ಲೂಕಿನಲ್ಲಿ ಪಕ್ಷದ ಸಂಘಟನೆ ಹಾಗೂ ಕಾರ್ಯಚಟುವಟಿಕೆಗಳ ಕುರಿತು ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಸಮಗ್ರ ಮಾಹಿತಿ ನೀಡಿದ್ದಾರೆ

• ಉದಯವಾಹಿನಿ, ಹುಣಸೂರು

1 ನಿಷ್ಠಾವಂತರಿಗೆ ಪಕ್ಷದಲ್ಲಿ ಉತ್ತಮ ಅವಕಾಶ

2 ಅಧಿಕಾರಕ್ಕೆ ಕಾರ್ಯಕರ್ತರು ಸಂಘಟಿತರಾಗಲಿ

3 ಅಕ್ಟೋಬರ್ 31ರೊಳಗೆ ಮೈಸೂರು ಜಿಲ್ಲೆಯ

-ಕಾಂಗ್ರೆಸ್ ಪಕ್ಷವನ್ನು ಬೂತ್ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಸಂಘಟನಾ ಸೃಜನ್ ಅಭಿಯಾನ-2 ಆರಂಭಿಸಲಾಗಿದೆ ಎಂದು ಮಾಜಿ ಸಂಸದ ಹಾಗೂ ಕಾಂಗ್ರೆಸ್ ಪಕ್ಷದ ರಾಜ್ಯ ವೀಕ್ಷಕ ಮುದ್ದು ಹನುಮೇಗೌಡ ತಿಳಿಸಿದರು. ನಗರದ ಕಾಂಗ್ರೆಸ್ ಕಚೇರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಸಂಘಟನಾ ಸೃಜನ್ ಅಭಿಯಾನ-2 ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಚುನಾವಣೆಯಲ್ಲಿ ಸೋಲು-ಗೆಲುವಿಗಿಂತ ಪಕ್ಷದ ಸಂಘಟನೆ ಮುಖ್ಯವಾಗಿದ್ದು, ಸಂಘಟನೆ ಬಲವಾಗಿಲ್ಲದಿದ್ದರೆ ಸಣ್ಣಪುಟ್ಟ ಚುನಾವಣೆಗಳಲ್ಲಿಯೂ ಗೆಲುವು ಸಾಧಿಸುವುದು ಕಷ್ಟ. ಆದ್ದರಿಂದ ಪಕ್ಷವನ್ನು ತಳಮಟ್ಟದಿಂದ ಬಲಪಡಿಸಲು ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕೆ.ಪಿ.ಸಿ.ಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜ್ ಮಾತನಾಡಿ, ಬೂತ್‌ನಿಂದ ಜಿಲ್ಲಾ ಮಟ್ಟದವರೆಗೆ ರಚಿಸಿರುವ ಪಕ್ಷದ ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಮುಂಬರುವ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್

ಉದಯವಾಹಿನಿ ಚಿತ್ರ

ಅಭ್ಯರ್ಥಿಗಳ ಗೆಲುವಿಗೆ ಸಂಘಟಿತವಾಗಿ ಶ್ರಮಿಸಬೇಕು. ಬೂತ್ ಮಟ್ಟದ ಪದಾಧಿಕಾರಿಗಳು ಒಗ್ಗಟ್ಟಿನಿಂದ ಕೆಲಸ ಮಾಡಿ ಎಚ್.ಪಿ.ಮಂಜುನಾಥ್ ಅವರ ಕೈ ಬಲಪಡಿಸಬೇಕು ಎಂದರು.

ಈಗಾಗಲೇ ಬ್ಲಾಕ್ ಮಟ್ಟದಲ್ಲಿ ಹಲವು ಸಮಿತಿಗಳನ್ನು ರಚಿಸಲಾಗಿದ್ದರೂ ಕೆಲವು ಸಮಿತಿಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಹೀಗಾಗಿ ಸಕ್ರಿಯವಾಗಿ ಕೆಲಸ ಮಾಡುವ ಪದಾಧಿಕಾರಿಗಳನ್ನು ಗುರುತಿಸಿ ಪಕ್ಷದ ಸಂಘಟನೆಯನ್ನು ಬಲಪಡಿಸಲು ಕೆ.ಪಿ.ಸಿ.ಸಿ ಅಧ್ಯಕ್ಷರ ನಿರ್ದೇಶನದಂತೆ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಅಕ್ಟೋಬರ್ 31ರೊಳಗೆ ಮೈಸೂರು ಜಿಲ್ಲೆಯ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಲಾಗುವುದು. ಎಚ್.ಪಿ.ಮಂಜುನಾಥ್ ಹಾಗೂ ಪಕ್ಷದ ಮುಖಂಡರೊಂದಿಗೆ ಸಮಾಲೋಚಿಸಿ ಉತ್ತಮ ಬ್ಲಾಕ್ ಸಮಿತಿಗಳನ್ನು ರಚಿಸಲಾಗುವುದು ಎಂದು ತಿಳಿಸಿದರು.

ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಮಾತನಾಡಿ, ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ಮರೆಯಬಾರದು. ಪಕ್ಷದ ಬಗ್ಗೆ ಬದ್ಧತೆ, ಸಿದ್ಧಾಂತ ಹಾಗೂ ಕಾಳಜಿ ಹೊಂದಿರುವವರು ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು.

ಅಧಿಕಾರ ದೊರೆಯುವುದು ತಡವಾದರೂ ನಿಷ್ಠೆಯಿಂದ ದುಡಿಯುವವರಿಗೆ ಪಕ್ಷದಲ್ಲಿ ಸೂಕ್ತ ಅವಕಾಶಗಳು ಸಿಗಲಿವೆ ಎಂದರು. ತಮ್ಮ ತಂದೆಯೂ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದು, ಹುಣಸೂರಿನಲ್ಲಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವ ಸಂದರ್ಭದಲ್ಲಿ ಕಾಂಗ್ರೆಸ್ ದುರ್ಬಲ ಸ್ಥಿತಿಯಲ್ಲಿತ್ತು. ಆ ಸಂದರ್ಭದಲ್ಲಿ ಕಾರ್ಯಕರ್ತರ ಸಹಕಾರದೊಂದಿಗೆ ಪಕ್ಷವನ್ನು ಪುನರ್ ಸಂಘಟಿಸಿದ ಪರಿಣಾಮ ಮೂರು ಬಾರಿ ಶಾಸಕನಾಗಲು ಸಾಧ್ಯವಾಯಿತು ಎಂದು ಸ್ಮರಿಸಿದರು.

> ಪ್ರಸ್ತುತ ರಾಜಕೀಯ ಅಧಿಕಾರದ ಆಸೆ ಇಲ್ಲದಿದ್ದರೂ ತಮ್ಮನ್ನು ನಂಬಿರುವ ಕಾರ್ಯಕರ್ತರಿಗಾಗಿ ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ದುಡಿಯುತ್ತಿದ್ದೇನೆ. ಕಾರ್ಯಕರ್ತರು ನಿಷ್ಠೆ ಹಾಗೂ ಬದ್ಧತೆಯಿಂದ ಕೆಲಸ ಮಾಡಿದರೆ ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ ಎಂದು ಹೇಳಿದರು.
> - ಮಂಜುನಾಥ್

ಕಾಂಗ್ರೆಸ್ ಪಕ್ಷ ಸದೃಢ

ಹುಣಸೂರು ಕ್ಷೇತ್ರದಲ್ಲಿ ಎಚ್.ಪಿ.ಮಂಜುನಾಥ್ ಅವರ ಪರಿಶ್ರಮದಿಂದ ಕಾಂಗ್ರೆಸ್ ಪಕ್ಷ ಸದೃಢವಾಗಿದೆ. ಮುಂದಿನ ದಿನಗಳಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬರಲು ಹಾಗೂ ಮಂಜುನಾಥ್ ಅವರ ಕೈ ಬಲಪಡಿಸಲು ಕಾರ್ಯಕರ್ತರು ಶಕ್ತಿಯುತವಾಗಿ ಮತ್ತು ಸಂಘಟಿತರಾಗಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಬಸವಣ್ಣನವರು ಸಮ ಸಮಾಜ ನಿರ್ಮಾಣದ ಕನಸು ಕಂಡವರು

• ಉದಯವಾಹಿನಿ, ಕೆ.ಆರ್.ನಗರ

12ನೇ ಶತಮಾನದಲ್ಲಿಯೇ ಬಸವಣ್ಣನವರು ಸಮ ಸಮಾಜ ನಿರ್ಮಾಣದ ಕನಸು ಕಂಡವರು ಅದು 900 ವರ್ಷಗಳು ಕಳೆದರು ಇನ್ನು ಹಿಡೇರದಿರುವುದಕ್ಕೆ ಸಮಾಜ ಸಮಾಜಗಳ ನಡುವೆ, ಧರ್ಮ ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ದ್ವೇಷ, ಜಾತಿ ತಾರತಮ್ಯ ಹುಟ್ಟು ಹಾಕುವ ಪಟ್ಟಭದ್ರ ಹಿತಾಶಕ್ತಿಗಳೇ ಕಾರಣವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ ಪಟ್ಟರು. ಪಟ್ಟಣದ ಡಾ.ರಾಜಕುಮಾರ್ ಬಾನಾಂಗಳದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ವೀರಶೈವ ಲಿಂಗಾಯತ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ವರ್ಗ ರಹಿತ, ಜಾತಿ ರಹಿತ,ಮಾನವೀಯತೆಯಿಂದ ಕೂಡಿದ ಸಮಾಜ ನಿರ್ಮಾಣ ಬಸವಣ್ಣನವರದಾಗಿತ್ತು ಎಂದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷಗಳು ಕಳೆದಿವೆ, ಬಾಬಾ ಸಾಹೇಬ್ ಅಂಬೇಡ್ಕರ್ ರವರು ಸಂವಿಧಾನವನ್ನ ರಚನೆ ಮಾಡಿ ಅದು ಜಾರಿಗೆ ತಂದು 78 ವರ್ಷಗಳಾಗಿವೆ. ಬಸವಣ್ಣನವರ ವಿಚಾರದಾರೆಗಳು ಸಂವಿಧಾನದಲ್ಲಿವೆ. ಪ್ರತಿಯೊಬ್ಬರು ಸಂವಿಧಾನವನ್ನು ತಿಳಿದುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಶಾಲೆಗಳಲ್ಲಿ ಸಂವಿಧಾನ ಪೀಠಿಕೆ ಓದುವುದು ಕಡ್ಡಾಯ ಮಾಡಿದೆ ಎಂದು ತಿಳಿಸಿದರು.

ಬುದ್ದ 2500 ವರ್ಷಗಳ ಹಿಂದೆ ಸಮ ಸಮಾಜದ ಸಿದ್ದಾಂತ ಹೇಳಿದರು.900 ವರ್ಷಗಳ ಹಿಂದೆ ಬಸವಣ್ಣನವರು ಹೇಳಿದರು. ನಂತರ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಹೇಳಿದರು ಆದರೂ ಕೂಡ ಅವರು ಕಂಡಿದಂತ ಕನಸಿನ ಭಾರತ ಇನ್ನು ನಿರ್ಮಾಣವಾಗದಿರುವುದು ವ್ಯತೆಯ ಸಂಗತಿ. ಕಾರಣ ಜಾತಿ ವ್ಯವಸ್ಥೆಗೆ ಚಲನೆ ಇಲ್ಲಾ. ಯಾವ ವ್ಯವಸ್ಥೆಗೆ ಚಲನೆ ಇಲ್ಲವೋ ಅಲ್ಲಿ ಜಡತ್ವ ಇರುತ್ತದೆ. ಜಡತ್ವವನ್ನು ಹೋಗಲಾಡಿಸಿ ಚಲನೆ ಕೊಡಬೇಕಾಗಿರುವುದು ನಮ್ಮೆಲ್ಲರ ಜವಬ್ದಾರಿ ಎಂದರು.

ಎಸ್.ಐ.ಆರ್. ದೇಶದ ಚುನಾವಣೆ ವ್ಯವಸ್ಥೆ ಬಲಪಡಿಸುವ ನಿಟ್ಟಿನಲ್ಲಿ ಉತ್ತಮ ಕಾರ್ಯಕ್ರಮ - ಸಂಸದ ಡಾ.ಸಿ.ಎನ್.ಮಂಜುನಾಥ್

• ಉದಯವಾಹಿನಿ, ರಾಮನಗರ

ಉದಯವಾಹಿನಿ ಚಿತ್ರ

ಎಸ್.ಐ.ಆರ್. ಪ್ರಕ್ರಿಯೆಯು ದೇಶದ ಚುನಾವಣೆ ವ್ಯವಸ್ಥೆ ಬಲಪಡಿಸುವ ನಿಟ್ಟಿನಲ್ಲಿ ಉತ್ತಮ ಕಾರ್ಯಕ್ರಮ. ಆದರೆ ಸೋಲನ್ನು ಒಪ್ಪಿಕೊಳ್ಳದ ಕಾಂಗ್ರೆಸ್ ವಿನಾಕಾರಣ ಆರೋಪ ಮಾಡುತ್ತಿದೆ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.ರಾಮನಗರದಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಲಿನಿಂದ ದಾರಿ ಕಾಣದಾಗಿರುವ ಕಾಂಗ್ರೆಸ್ ಪಕ್ಷ ನಿತ್ಯ ಸುಳ್ಳು ಹೇಳುವ ಮೂಲಕ ದೇಶದ ಜನರನ್ನು ದಾರಿತಪ್ಪಿಸುತ್ತಿದ್ದು ಇದು ಅವರ ಹತಾಶೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದರು.ಇವಿಎಂ ಬಗ್ಗೆ ಅಪಪ್ರಚಾರ ಮಾಡುತ್ತಿದ್ದ ಕಾಂಗ್ರೆಸ್ ಪಕ್ಷಕ್ಕೆ ದೇಶದ ನಾಲ್ಕು ರಾಜ್ಯಗಳಲ್ಲಿ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಒಂದು ಸ್ಥಾನವನ್ನು ಗೆಲ್ಲಲು ಸಾಧ್ಯವಾಗಿಲ್ಲ. ಶಿಕ್ಷಿತರು, ಪದವಿದರ ಮತದಾರರು ಬ್ಯಾಲೆಟ್ ಪೇಪರ್ ಗಳ ಮೂಲಕ ತಕ್ಕ ಉತ್ತರ ಕೊಟ್ಟಿದ್ದಾರೆ. ಆದರೂ ಸಹ ಕಾಂಗ್ರೆಸ್ ಮುಖಂಡರು ಸುಳ್ಳನ್ನೆ ಸತ್ಯ ಎಂದು ನಂಬಿಸಲು ಹೊರಟಿದೆ ಎಂದರು.ರಾಜ್ಯದಲ್ಲಿನ ವಿಧಾನ ಪರಿಷತ್ ಚುನಾವಣಾ ಫಲಿತಾಂಶ 2028ಕ್ಕೆ ನಡೆಯಲಿರುವ ವಿಧಾನಸಭಾ ಚುನಾವಣೆಯ ಸ್ಪಷ್ಟವಾದ ಮುನ್ಸೂಚನೆಯಾಗಿದೆ. ರಾಜ್ಯ ಸರ್ಕಾರದ ವಿರುದ್ಧ ಜನರು ಆಕ್ರೋಶಗೊಂಡಿರುವುದನ್ನು ಫಲಿತಾಂಶ ತೋರಿಸಿದೆ.

ಈ ಫಲಿತಾಂಶವು ಆಡಳಿತ ವಿರೋಧಿ ನೀತಿಗೆ ಉದಾಹರಣೆಯಾಗಿ ಹೊರಹೊಮ್ಮಿದೆ ಎಂದು ಅಭಿಪ್ರಾಯಪಟ್ಟರು. ಬಿಜೆಪಿ ರಾಜ್ಯ ವಕ್ತಾರ ಅಶ್ವತ್ಥ ನಾರಾಯಣ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ರಾಮನಗರ ತಾಲ್ಲೂಕು ಅಧ್ಯಕ್ಷ ಗೌತಮ್ ಗೌಡ, ಮಾಗಡಿ ತಾಲ್ಲೂಕು ಅಧ್ಯಕ್ಷ ಪ್ರಸಾದ್ ಗೌಡ, ಪರಿಷತ್ ಸದಸ್ಯ ಸುರೇಶ್, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಕಾಳಯ್ಯ, ನಗರ ಘಟಕ ಅಧ್ಯಕ್ಷ ಚಂದನ್ ಮೊರೆ, ಬಿಜೆಪಿ ಮುಖಂಡರಾದ ಜಿ.ವಿ. ಪದ್ಮನಾಭ , ರುದ್ರದೇವರು, ವಕ್ತಾರ ಸಿದ್ದು, ಪ್ರಮುಖರಾದ ಜೈಕುಮಾರ್, ಚನ್ನಪ್ಪ, ಕೆಂಪರಾಜು, ಚಂದ್ರಶೇಖರ್, ಚೇತನ್, ಶಿವಮುತ್ತು, ಸುಗ್ಗನಹಳ್ಳಿ ರಾಮಕೃಷ್ಣಯ್ಯ, ಲೋಕೇಶ್, ಮಹಾದೇವ್ ಲಕ್ಕಸಂದ್ರ, ಮತ್ತಿತರರಿದ್ದರು.

ಜಿಲ್ಲೆಯಲ್ಲಿ 8,04,534 ಮತದಾರರು ಡಿಸಿ ಡಾ. ಕೆ.ಎನ್. ಅನುರಾಧ

• ಉದಯವಾಹಿನಿ,ದೇವನಹಳ್ಳಿ,

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಂತಿಮ ಮತದಾರರ ಪಟ್ಟಿಯಲ್ಲಿ 8,04,534 ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧ ಅವರು ತಿಳಿಸಿದರು.

ಜಿಲ್ಲಾಡಳಿತ ಭವನದ ನ್ಯಾಯಾಲಯ ಸಭಾಂಗಣದಲ್ಲಿ ಅಂತಿಮ ಮತದಾರ ಪಟ್ಟಿ ಪ್ರಕಟಕ್ಕೆ ಸಂಬಂಧಿಸಿದಂತೆ ಆಯೋಜಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಎಸ್ ಐಆರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, ಅಂತಿಮ ಮತದಾರರ ಪಟ್ಟಿಯಲ್ಲಿ 3,95,473 ಪುರುಷ ಮತದಾರರು, 4,09,001 ಮಹಿಳಾ ಮತದಾರರು ಹಾಗೂ 60 ಇತರೆ ಮತದಾರರು ಸೇರಿ ಒಟ್ಟಾರೆ ಜಿಲ್ಲೆಯಲ್ಲಿ 8,04,534 ಮತದಾರರಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಐವರು ಮೃತರು, 1,716 ಶಾಶ್ವತ ವಲಸೆ ಹೋಗಿರುವರು, 2,093 ಇತರೆಡೆ ನೋಂದಣಿ ಹೊಂದಿರುವವರು ಸೇರಿ 3814 ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದರು.

ಎಸ್‌ಐಆರ್ ಪ್ರಕ್ರಿಯೆಯಡಿ ನೋ ಮ್ಯಾಪಿಂಗ್ ಹಾಗೂ ಅನಾಮಲಿಸ್ (2002ಕ್ಕೆ ಮ್ಯಾಪಿಂಗ್ ನಲ್ಲಿನ ವ್ಯತ್ಯಾಸ ಕಂಡುಬಂದ ಪ್ರಕರಣಗಳು) ಒಳಗೊಂಡಂತೆ 56,349 ಮತದಾರರಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 04 ಮತಕ್ಷೇತ್ರಗಳಲ್ಲಿ ನಡೆದ ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ 2026 ಸಂಬಂಧ, ಎಲ್ಲಾ ಪ್ರಕ್ರಿಯೆ, ಪ್ರಗತಿ ಕುರಿತ ವಿವರಗಳನ್ನು ಹಾಗೂ ಮತದಾರರು ತಮ್ಮ ಹೆಸರು ಪಟ್ಟಿಯಲ್ಲಿ ಇರುವುದನ್ನು ಭಾರತ ಚುನಾವಣಾ ಆಯೋಗ ಮತ್ತು ಜಿಲ್ಲಾ ಅಧಿಕೃತ ವೆಬ್‌ಸೈಟ್ ಮೂಲಕ ಪರಿಶೀಲಿಸಬಹುದು ಹಾಗು ಮತದಾರರ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಜೊತೆಗೆ ಎಲ್ಲಾ ಮತದಾರರ ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ ಪ್ರಚೂರ ಪಡಿಸಲಾಗಿದೆ. ಮತದಾರರ ಪಟ್ಟಿಯಲ್ಲಿ ಕೈಬಿಟ್ಟಿರುವ ಅರ್ಹ ಮತದಾರರು ಸೇರ್ಪಡೆಗೆ ನಮೂನೆ-6ರ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದರು. ಪತ್ರಿಕಾ ಗೋಷ್ಠಿಯಲ್ಲಿ ಸಿಇಓ ಡಾ. ವಾಸಂತಿ ಅಮರ್, ಅಪರ ಜಿಲ್ಲಾಧಿಕಾರಿ ಸೈಯಿದಾ ಅಯಿಷಾ, ಎಸಿ ಮಂಜುನಾಥ್, ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಶಿವಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಅಶೋಕ್ ಕುಮಾರ್ ಡಿ, ತಾಲ್ಲೂಕು ಮತದಾರರ ನೋಂದಣಿ ಅಧಿಕಾರಿಗಳು, ಚುನಾವಣೆ ಶಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

ಇವಿಎಂ ಬೇಡ ಎಂದಿದ್ದ ಕಾಂಗ್ರೆಸ್‌ಗೆ ಬ್ಯಾಲೆಟ್ ಪೇಪರ್‌ನಲ್ಲೇ ಮತದಾರನ ಉತ್ತರ - ನಿಖಿಲ್ ಕುಮಾರಸ್ವಾಮಿ

• ಉದಯವಾಹಿನಿ, ರಾಮನಗರ

ಇವಿಎಂ ಮೇಲೆ ಅನುಮಾನ ವ್ಯಕ್ತಪಡಿಸಿ, ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸುತ್ತಿದ್ದ ಕಾಂಗ್ರೆಸ್ ಪಕ್ಷಕ್ಕೆ, ಈಗ ಬ್ಯಾಲೆಟ್ ಪೇಪರ್‌ನಲ್ಲೇ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಜಾಗೃತ ಮತದಾರರು ತಕ್ಕ ಉತ್ತರ ನೀಡಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ರಾಮನಗರ ತಾಲ್ಲೂಕು ಜೆಡಿಎಸ್ ಪಕ್ಷದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಐತಿಹಾಸಿಕ ಗೆಲುವಿನ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಕರ್ನಾಟಕ ವಿಧಾನ ಪರಿಷತ್ತಿನ 2 ಪದವೀಧರ ಮತ್ತು 2 ಶಿಕ್ಷಕರ

ಉದಯವಾಹಿನಿ ಚಿತ್ರ

ಕ್ಷೇತ್ರಗಳು ಸೇರಿ ನಾಲ್ಕು ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ 4ಕ್ಕೆ 4 ಸ್ಥಾನಗಳನ್ನು ಗೆದ್ದು ಕ್ಲೀನ್ ಸ್ವೀಪ್ ಮಾಡಿದೆ. ಇದು ಎರಡೂ ಪಕ್ಷಗಳ ಕಾರ್ಯಕರ್ತರ ಅವಿರತ ಶ್ರಮಕ್ಕೆ ಸಂದ ಜಯ. ಅದರಲ್ಲೂ ಎ.ಪಿ. ರಂಗನಾಥ್ ಅವರಿಗೆ ಶಿಕ್ಷಕ ಸಮುದಾಯ ಒಂದು ಅವಕಾಶ ಕೊಟ್ಟಿದೆ ಎಂದು ಹೇಳಿದರು.

19 ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೆ ಮುಖಭಂಗ: ಈ ಚುನಾವಣೆ ಕೇವಲ ನಾಲ್ಕು ಕ್ಷೇತ್ರಗಳಿಗೆ ಸೀಮಿತವಾಗಿರಲಿಲ್ಲ. ರಾಜ್ಯದ 19 ಜಿಲ್ಲೆಗಳನ್ನು ಒಳಗೊಂಡಿದ್ದು, ಮಿನಿ ವಿಧಾನಸಭಾ ಚುನಾವಣೆಯಂತೆಯೇ ಪ್ರತಿಷ್ಠೆಯ ಕಣವಾಗಿತ್ತು.

ಸ್ವತಃ ಮುಖ್ಯಮಂತ್ರಿಗಳ ತವರು ಜಿಲ್ಲೆ ಹಾಗೂ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಕ್ಷೇತ್ರ ಕಲಬುರಗಿ ಸೇರಿದಂತೆ ಕಾಂಗ್ರೆಸ್ ಭದ್ರಕೋಟೆಗಳಲ್ಲೇ ಚುನಾವಣೆ ನಡೆದಿದ್ದು, ಅಲ್ಲೆಲ್ಲಾ ಕಾಂಗ್ರೆಸ್‌ಗೆ ಹೀನಾಯ ಸೋಲಾಗಿದೆ. ಆಡಳಿತಾರೂಢ ಕಾಂಗ್ರೆಸ್ ತನ್ನ ಸಂಪೂರ್ಣ ಸರ್ಕಾರಿ ಯಂತ್ರಾಂಗ, ಅಧಿಕಾರ ಬಲ ಮತ್ತು ಹಣ ಬಲವನ್ನು ಬಳಸಿದರೂ, ಪ್ರಬುದ್ಧ ಪದವೀಧರರು ಮತ್ತು ಶಿಕ್ಷಕರು ಎನ್‌ಡಿಎ ಪರವಾಗಿ ನಿಂತಿದ್ದಾರೆ. ಇದು 2028ರ ವಿಧಾನಸಭಾ ಚುನಾವಣೆಯ ಸ್ಪಷ್ಟ ದಿಕ್ಸೂಚಿಯಾಗಿದೆ ಎಂದು ನಿಖಿಲ್ ಹೇಳಿದರು.

ಸ್ಥಳೀಯ ಸಂಸ್ಥೆ ಚುನಾವಣೆ ಮೈತ್ರಿ: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಮೈತ್ರಿ ಮುಂದುವರೆಯುವ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ಹೈಕಮಾಂಡ್ ನಾಯಕರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. ಇದು ನಾಲ್ಕು ಗೋಡೆಗಳ ಮಧ್ಯೆ ಚರ್ಚಿಸಿ ನಿರ್ಧಾರ ಮಾಡಬೇಕಾದ ವಿಚಾರ. ಸ್ಥಳೀಯ ಸಂಸ್ಥೆ ಚುನಾವಣೆಗೆ ಎರಡೂ ಪಕ್ಷಗಳಲ್ಲಿ ಆಕಾಂಕ್ಷಿಗಳು ಹೆಚ್ಚಿದ್ದಾರೆ ಎಂದರು.ಜೆಡಿಎಸ್ ಜಿಲ್ಲಾಧ್ಯಕ್ಷ ಜಯಮುತ್ತು, ತಾಲ್ಲೂಕು ಅಧ್ಯಕ್ಷ ಸಬ್ಬಗೆರೆ ಶಿವಲಿಂಗಪ್ಪ, ಪ್ರಮುಖರಾದ ನರಸಿಂಹಮೂರ್ತಿ, ರಾಜಶೇಖರ್, ಲಕ್ಷ್ಮಿಕಾಂತ, ಜಯಕುಮಾರ್ ಮತ್ತಿತರರು ಇದ್ದರು.

ಐಬಿ ವೃತ್ತದ ಬಳಿ ಮದ್ಯದಂಗಡಿಗೆ ವಿರೋಧ: ರಾಷ್ಟ್ರೀಯ ಹೆದ್ದಾರಿ ತಡೆದು ಕರವೇ ಪ್ರತಿಭಟನೆ

ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಐಬಿ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು.

• ಉದಯವಾಹಿನಿ, ಗುಂಡ್ಲುಪೇಟೆ

1 ಅಧಿಕಾರಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ

2 ಹೊಸದಾಗಿ ಮದ್ಯದಂಗಡಿ ತೆರೆಯಲು ಸಿದ್ಧತೆ

3 ನೂರಾರು ಟಿಪ್ಪರ್ ಈ ಮಾರ್ಗದಲ್ಲಿ ಓಡಾಡುತ್ತವೆ.

ಪಟ್ಟಣದ ಐಬಿ ಸರ್ಕಲ್‌ನ ಗಾಂಧಿ ವೃತ್ತದ ಸಮೀಪ ಹೊಸದಾಗಿ ಮದ್ಯದಂಗಡಿ ತೆರೆಯಲು ಮುಂದಾಗಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿ-766 ತಡೆದು ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಮೆರವಣಿಗೆಯಲ್ಲಿ ಸಾಗಿದ ಕರವೇ ಪದಾಧಿಕಾರಿಗಳು ಐಬಿ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಶರವಣ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಕರವೇ ಮೈಸೂರು ಜಿಲ್ಲಾಧ್ಯಕ್ಷ ಪ್ರವೀಣ್ ಗೌಡ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಲ್ಲಿರುವ ಐಬಿ ಸರ್ಕಲ್‌ನ ಗಾಂಧಿ ವೃತ್ತದ ಪಕ್ಕದಲ್ಲಿ ಮೀನಾಕ್ಷಿ ರಾಜಣ್ಣ ಎಂಬುವವರು ಹೊಸದಾಗಿ ಮದ್ಯದಂಗಡಿ ತೆರೆಯಲು

ಉದಯವಾಹಿನಿ ಚಿತ್ರ

ಶಾಲೆ, ಚರ್ಚ್ ಸಮೀಪ ಮದ್ಯದಂಗಡಿಗೆ ವಿರೋದ

ಪ್ರಸ್ತಾವಿತ ಮದ್ಯದಂಗಡಿಯ 100 ಮೀಟರ್ ವ್ಯಾಪ್ತಿಯಲ್ಲಿ ಚರ್ಚ್, ಶಾಲೆ ಹಾಗೂ ಸರ್ಕಾರಿ ಪ್ರವಾಸಿ ಮಂದಿರವಿದೆ. ಆದರೂ ಅಬಕಾರಿ ಅಧಿಕಾರಿಗಳು ನಿಯಮಗಳನ್ನು ಉಲ್ಲಂಘಿಸಿ, ಅಳತೆಯಲ್ಲಿ ವ್ಯತ್ಯಾಸ ಮಾಡಿ ಪರವಾನಗಿ ನೀಡಲು ಮುಂದಾಗಿದ್ದಾರೆ ಎಂಬುದು ಪ್ರತಿಭಟನಾಕಾರರ ಆರೋಪವಾಗಿದೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದರು. ಚರ್ಚ್‌ನಲ್ಲಿರುವ ಶಾಲೆಗೆ ಮಕ್ಕಳು ಮತ್ತು ಶಿಕ್ಷಕರು ಇದೇ ರಸ್ತೆಯ ಮೂಲಕ ಸಂಚರಿಸುತ್ತಾರೆ. ಅಲ್ಲದೆ, ಬೆಳಗ್ಗಿನಿಂದ ರಾತ್ರಿವರೆಗೂ ನೂರಾರು ಟಿಪ್ಪರ್‌ಗಳು ಈ ಮಾರ್ಗದಲ್ಲಿ ಓಡಾಡುತ್ತವೆ. ಮದ್ಯ ಖರೀದಿಗಾಗಿ ವಾಹನಗಳನ್ನು ರಸ್ತೆಯಲ್ಲೇ ನಿಲ್ಲಿಸಿದರೆ ಸಂಚಾರ ದಟ್ಟಣೆ ಹೆಚ್ಚಾಗಿ ಅಪಘಾತ ಸಂಭವಿಸುವ ಸಾಧ್ಯತೆಯಿದೆ. ಚರ್ಚ್‌ಗೆ ಬರುವ ಭಕ್ತಾದಿಗಳು ಸಾರ್ವಜನಿಕರಿಗೂ ತೊಂದರೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ರಾತ್ರೋರಾತ್ರಿ ಉದ್ಯಮ ಪರವಾನಗಿ ನೀಡಿದ ಆರೋಪ

ಮದ್ಯದಂಗಡಿ ವಿಚಾರದಲ್ಲಿ ಪುರಸಭೆ ಮುಖ್ಯಾಧಿಕಾರಿಗಳು ಪರವಾನಗಿ ನೀಡುವುದಿಲ್ಲ ಎಂದು ಹೇಳಿಕೆ ನೀಡಿದ್ದರೂ, ರಾತ್ರೋರಾತ್ರಿ ಉದ್ಯಮ ಪರವಾನಗಿ ನೀಡಲಾಗಿದೆ ಎಂದು ಕರವೇ ಕಾರ್ಯಕರ್ತರು ಆರೋಪಿಸಿದರು. ರಾಜಕೀಯ ಪ್ರಭಾವ ಬಳಸಿ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಅನುಮತಿ ಪಡೆಯಲು ಪ್ರಯತ್ನಿಸಲಾಗುತ್ತಿದೆ ಎಂಬ ಆರೋಪವನ್ನೂ ಮಾಡಿದರು. ಸಾರ್ವಜನಿಕ ಹಿತಾಸಕ್ತಿ, ಧಾರ್ಮಿಕ ಭಾವನೆಗಳು ಮತ್ತು ಮಕ್ಕಳ ಶೈಕ್ಷಣಿಕ ವಾತಾವರಣಕ್ಕೆ ಧಕ್ಕೆಯಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಪ್ರಸ್ತಾವಿತ ಸ್ಥಳದಲ್ಲಿ ಮದ್ಯದಂಗಡಿ ತೆರೆಯಲು ಅವಕಾಶ ನೀಡಬಾರದು. ಒಂದು ವೇಳೆ ಮದ್ಯದಂಗಡಿ ತೆರೆಯಲು ಮುಂದಾದರೆ ಸ್ಥಳದಲ್ಲೇ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಪ್ರವೀಣ್ ಗೌಡ ಎಚ್ಚರಿಕೆ ನೀಡಿದರು.

ಮತ್ತು ವಾಹನ ಸಂಚಾರ ಹೆಚ್ಚಿರುವ ಇಂತಹ ಸ್ಥಳದಲ್ಲಿ ಮದ್ಯದಂಗಡಿ ತೆರೆಯಲು ಅನುಮತಿ ನೀಡಲು ಮುಂದಾಗಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ಪ್ರತಿಭಟನೆಯಲ್ಲಿ ಕರವೇ ಜಿಲ್ಲಾಧ್ಯಕ್ಷ ಮಂಜೇಶ್, ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷ ರಮೇಶ್ ನಾಯಕ, ಗೌರವಾಧ್ಯಕ್ಷ ಮಾಧು, ಟೌನ್ ಅಧ್ಯಕ್ಷ ಶಿವಮೂರ್ತಿ, ಹಂಗಳ ಹೋಬಳಿ ಅಧ್ಯಕ್ಷ ಚೆನ್ನನಾಯಕ, ಎಂ. ನಾಗರಾಜು, ಮಂಜು, ಯೋಗಿ, ವಸಂತ, ಮೋನಿಸ್, ಕನ್ನೇಗಾಲ ಮನಸ್ಸು, ಮಹಿಳಾ ಜಿಲ್ಲಾಧ್ಯಕ್ಷೆ ಭಾಗ್ಯಲಕ್ಷ್ಮೀ, ಚಾಮರಾಜನಗರ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಸುಮ, ಸಂತೋಷ್, ಸಾಕಮ್ಮ, ಜಿಲ್ಲಾ ಕಾರ್ಯದರ್ಶಿ ಸುಮತಿ, ಗೌರಮ್ಮ, ಶ್ರೀಕಾಂತ್ ಸೇರಿದಂತೆ ಹಲವು ಕರವೇ ಪದಾಧಿಕಾರಿಗಳು ಭಾಗವಹಿಸಿದ್ದರು.

ಮಿನಿ ನ್ಯೂಸ್

ಉಳಿತಾಯ ಮನೋಭಾವನೆ, ಆರ್ಥಿಕ ಪ್ರಗತಿಗೆ ಹೆಚ್ಚಿನ ಒತ್ತು

ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ಜಿಲ್ಲೆಯ ಜನರಲ್ಲಿ ಉಳಿತಾಯ ಮನೋಭಾವನೆ, ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಸೇರಿದಂತೆ ಶೇ. 7ರ ಬಡ್ಡಿ ದರದಲ್ಲಿ ಠೇವಣಿ ಸ್ವೀಕಾರ ಮಾಡುವ ಮೂಲಕ ಜಿಲ್ಲೆಯ ಆರ್ಥಿಕ ಪ್ರಗತಿಗೆ ಐಗಿರಿ ಸೌಹಾರ್ದ ಕೋ. ಅಪರೇಟಿವ್ ಸೊಸೈಟಿ ಕಾರ್ಯನಿರ್ವಹಿಸಲಿದೆ ಎಂದು ಸಂಘದ ಅಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರ ಸಂಯುಕ್ತ ಮಾಜಿ ನಿರ್ದೇಶಕ ಆರ್. ದಿನೇಶ್ ಗುಪ್ತಾ ತಿಳಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕೇಂದ್ರದಲ್ಲಿ ಐಗಿರಿ ಸೌಹಾರ್ದ ಕೋ ಅಪರೇಟಿವ್ ಸೊಸೈಟಿ ಉದ್ಘಾಟನೆ ಕುರಿತು ಮಾಹಿತಿ ನೀಡಿದರು.ಈಗಾಗಲೇ 700ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ್ದು, 16 ಲಕ್ಷಕ್ಕು ಹೆಚ್ಚು ಷೇರು ಸಂಗ್ರಹಿಸಲಾಗಿದೆ. ಸೌಹಾರ್ದ ಸಹಕಾರ ಸಂಘದ ಮೂಲಕ ಸದಸ್ಯರಲ್ಲಿ ಆರ್ಥಿಕ ಶಿಸ್ತು ರೂಪಿಸಿವುದು. ಸಂಸ್ಥೆಯನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಲು ಆಡಳಿತ ಮಂಡಳಿ ಉದ್ದೇಶಿಸಿದೆ ಎಂದು ಹೇಳಿದರು.

ನಗರದಲ್ಲಿ ಐಗಿರಿ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಅ.30 ರಂದು ಶುಕ್ರವಾರ ಬೆಳಗ್ಗೆ 11 ಗಂಟಗೆ ಉದ್ಘಾಟನೆಗೊಳ್ಳಲಿದೆ. ನಗರದ ಹಳೆಯ ಬಸ್ ನಿಲ್ದಾಣದ ಸಮೀಪದ ಮಾರಮ್ಮ ದೇವಸ್ಥಾನದ ಎದುರಿನ ಚಿರಂತ್ ಆರ್ಕೇಡ್‌ನಲ್ಲಿ ಸೊಸೈಟಿ ಕಚೇರಿಯನ್ನು ಆರಂಭಿಸಿದ್ದು, ಚಾ.ನಗರ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ 'ಮಠ ಅಧ್ಯಕ್ಷರಾದ ಶ್ರೀ ಚೆನ್ನಬಸವಸ್ವಾಮೀಜಿ ದಿವ್ಯ ಸಾನಿಧ್ಯವಹಿಸಲಿದ್ದಾರೆ.

187 ಕುಟುಂಬಗಳಿಗೆ ಸಾಗುವಳಿ ಹಕ್ಕು ವಿತರಣೆ!

ಉದಯವಾಹಿನಿ ಚಿತ್ರ

• ಉದಯವಾಹಿನಿ, ಹುಣಸೂರು

ಹಲವು ವರ್ಷಗಳಿಂದ ಜಮೀನು ಸಾಗುವಳಿ ಮಾಡಿಕೊಂಡು ಬರುತ್ತಿದ್ದ 187 ಬಡ ಕುಟುಂಬಗಳಿಗೆ ಭೂಮಿಯ ಹಕ್ಕು ದೊರಕಿಸಿಕೊಟ್ಟಿರುವುದು ತೃಪ್ತಿ ತಂದಿದೆ ಎಂದು ಶಾಸಕ ಹರೀಶ್ ಗೌಡ ಸಂತಸ ವ್ಯಕ್ತಪಡಿಸಿದರು.

ನಗರದ ತಾಲ್ಲೂಕು ಕಚೇರಿಯಲ್ಲಿ ನಡೆದ ಅಕ್ರಮ-ಸಕ್ರಮ ಸಮಿತಿ ಸಭೆಯ ಬಳಿಕ ಮಾತನಾಡಿದ ಅವರು, ಕೃಷಿಯನ್ನೇ ನಂಬಿಕೊಂಡು ಜೀವನ ನಡೆಸುತ್ತಿರುವ ಬಡ ಕುಟುಂಬಗಳಿಗೆ ಜಮೀನಿನ ಅಧಿಕೃತ ಹಕ್ಕು ದೊರೆತರೆ ಆರ್ಥಿಕ ಭದ್ರತೆ ಸಿಗುವುದರ ಜತೆಗೆ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಲಿದೆ ಎಂದರು. ಹಲವು ವರ್ಷಗಳಿಂದ ಜಮೀನು ಸಾಗುವಳಿ ಮಾಡಿಕೊಂಡಿದ್ದರೂ ಅಧಿಕೃತ ದಾಖಲೆಗಳಿಲ್ಲದೆ ಸಮಸ್ಯೆ ಎದುರಿಸುತ್ತಿದ್ದ ಕುಟುಂಬಗಳಿಗೆ ಹಕ್ಕು ದೊರಕಿಸಿಕೊಡುವುದು ಜನಪ್ರತಿನಿಧಿಯಾಗಿ ತಮ್ಮ ಜವಾಬ್ದಾರಿಯಾಗಿದೆ.

ಈ ನಿಟ್ಟಿನಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ 187 ಕುಟುಂಬಗಳಿಗೆ ಸಾಗುವಳಿ ಚೀಟಿ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಸರ್ಕಾರದ ವಿವಿಧ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳುವುದರ ಜತೆಗೆ ರೈತರು ಗ್ರಾಮೀಣ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ನೀರು ಮತ್ತು ಬೀದಿದೀಪದ ಸಮಸ್ಯೆ: ಮುಖ್ಯಾಧಿಕಾರಿಗಳಿಗೆ ನಿವಾಸಿಗಳ ಮನವಿ

ಉದಯವಾಹಿನಿ ಚಿತ್ರ

• ಉದಯವಾಹಿನಿ, ವಿಜಯಪುರ

ವಿಜಯಪುರದ ಪಾಂಚಜನ್ಯ ಲೇಔಟ್‌ನಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಮತ್ತು ಕೇಬಲ್ ಸಮಸ್ಯೆಯಿಂದ ಬೀದಿ ದೀಪಗಳು ನಿಷ್ಕ್ರಿಯಗೊಂಡಿರುವ ಕುರಿತು ಸ್ಥಳೀಯ ನಿವಾಸಿಗಳು ಪುರಸಭೆ ಮುಖ್ಯಾಧಿಕಾರಿಗಳಾದ ವೈ.ಎನ್. ಸತ್ಯನಾರಾಯಣ ಅವರಿಗೆ ಮನವಿ ಸಲ್ಲಿಸಿದ್ದು, ಕಳೆದ ಹಲವು ದಿನಗಳಿಂದ ಕುಡಿಯುವ ನೀರಿನ ಸರಬರಾಜು ಅಸ್ತವ್ಯಸ್ತಗೊಂಡಿದೆ ಎಂದು ದೂರಿದ್ದಾರೆ.

ನಿಗದಿತ ದಿನಗಳಲ್ಲಿ ನೀರು ಬಾರದಿರುವುದು ಮತ್ತು ಬಂದರೂ ಸಹ ನೀರಿನ ಒತ್ತಡ ತೀರಾ ಕಡಿಮೆ ಇರುವುದರಿಂದ ಸಾರ್ವಜನಿಕರು ನೀರಿಗಾಗಿ ಪರದಾಡುವಂತಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಇದರೊಂದಿಗೆ ಹಲವು ಬೀದಿಗಳಲ್ಲಿ ದೀಪಗಳು ಕಾರ್ಯನಿರ್ವಹಿಸದ ಕಾರಣ ರಾತ್ರಿ ವೇಳೆ ಕತ್ತಲುವರಿಸಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದ್ದು, ಅಹಿತಕರ ಘಟನೆಗಳ ಭೀತಿ ಎದುರಾಗಿದೆ ಎಂದು ತಿಳಿಸಿದ್ದಾರೆ. ನಾಗರಿಕರ ಮನವಿ ಸ್ವೀಕರಿಸಿದ ಪುರಸಭೆ ಮುಖ್ಯಾಧಿಕಾರಿ ವೈ.ಎನ್. ಸತ್ಯನಾರಾಯಣ ಅವರು ನೀರಿನ ಸಮಸ್ಯೆಗೆ ತ್ವರಿತವಾಗಿ ಪರಿಹಾರ ಕಲ್ಪಿಸಲಾಗುವುದು ಎಂದು ಭರವಸೆ ನೀಡಿ, ಸಾರ್ವಜನಿಕರು ಪುರಸಭೆ ಸಿಬ್ಬಂದಿಗೆ ಸಹಕಾರ ನೀಡಿ ತಮ್ಮ ಪ್ರದೇಶದ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಂತೆ ಮನವಿ ಮಾಡಿದರು. ತದನಂತರ ಬೆಸ್ಕಾಂ ಇಲಾಖೆಯ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಚರ್ಚೆ ನಡೆಸಿ ಬೀದಿದೀಪದ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಕೋರಿದ್ದು, ಈ ಸಂದರ್ಭದಲ್ಲಿ ಇಂಜಿನಿಯರ್ ಶೇಖರ್ ರೆಡ್ಡಿ ಉಪಸ್ಥಿತರಿದ್ದರು.

ವಿಧಾನಪರಿಷತ್ ಚುನಾವಣೆ ಫಲಿತಾಂಶ ಮುಂಬರುವ ಚುನಾವಣೆಗೆ ದಿಕ್ಸೂಚಿ

ಉದಯವಾಹಿನಿ ಚಿತ್ರ

• ಉದಯವಾಹಿನಿ, ವಿಜಯಪುರ

ವಿಧಾನಪರಿಷತ್ 4 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 4 ಎನ್.ಡಿ.ಎ. ಅಭ್ಯರ್ಥಿಗಳ ಗೆಲುವಿಗಾಗಿ ವಿಜಯಪುರದ ಅಂಗತಟ್ಟಿ ನಂಜುಂಡಪ್ಪ ವೃತ್ತದಲ್ಲಿ ಆಯೋಜಿಸಿದ್ದ ವಿಜಯೋತ್ಸವದಲ್ಲಿ ಬಿಜೆಪಿ ನಗರ ಘಟಕದ ಅಧ್ಯಕ್ಷ ವೆಂಕಟೇಶ್ ಪ್ರಭು ಮಾತನಾಡುತ್ತಾ, ವಿಧಾನಪರಿಷತ್‌ನ 4 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎನ್.ಡಿ.ಎ. ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು ಮುಂಬರುವ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದರು. ರಾಜ್ಯ ಸರ್ಕಾರ ಯುವನಿಧಿ ನೀಡುತ್ತಿದ್ದರೂ ಯುವಕರು ಸೂಕ್ತ ಅಭ್ಯರ್ಥಿಗಳಿಗೆ ಮತ ನೀಡಿರುವುದು, ಸರ್ಕಾರದ ಯೋಜನೆಗಳಿಂದ ತೃಪ್ತಿಯಿಲ್ಲ ಎಂಬುದನ್ನು ಸಾಬೀತುಪಡಿಸಿದೆ ಮತ್ತು ಇದು ಕಾಂಗ್ರೆಸ್ ದುರಾಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದ್ದು, ಜೆಡಿಎಸ್-ಬಿಜೆಪಿ ಕಾರ್ಯಕರ್ತರ ಸಂಘಟಿತ ಕೆಲಸದ ಪ್ರತಿಫಲವಾಗಿದೆ ಎಂದು ತಿಳಿಸಿದರು. ಪುರಸಭೆ ಮಾಜಿ ಸದಸ್ಯ, ಎಸ್. ಭಾಸ್ಕರ್ ಮಾತನಾಡಿ, ಸಮಾಜದ ಏಳಿಗೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶಿಕ್ಷಕರು ಹಾಗೂ ಪದವೀಧರರು ದೇಶದ ಪ್ರಗತಿ ಮತ್ತು ರಾಜ್ಯದ ದುಸ್ಥಿತಿಯ ಕುರಿತು ಆಲೋಚಿಸಿ ಮತ ಚಲಾಯಿಸಿದ್ದಾರೆ ಎಂದರು. ಮುಖಂಡರಾದ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಜಿಲ್ಲಾ ಅಧ್ಯಕ್ಷ ಮಂಜುನಾಥ್, ತಾಲ್ಲೂಕು ಅಧ್ಯಕ್ಷ ಮಹೇಶ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ಅಂಬರೀಶ್ ಗೌಡ ಸೇರಿದಂತೆ ಎರಡೂ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರ ಶ್ರಮ ಈ ಗೆಲುವಿಗೆ ಕಾರಣವಾಗಿದೆ ಎಂದು ಹೇಳಿದರು. ಪುರಸಭೆ ಮಾಜಿ ಸದಸ್ಯ ಬಲಮುರಿ ಶ್ರೀನಿವಾಸ್ ಮಾತನಾಡಿ, ರಾಜ್ಯ ಸರ್ಕಾರದ ಗ್ಯಾರಂಟಿಗಳು ಕೆಲಸ ಮಾಡುತ್ತಿಲ್ಲ ,ಸರ್ಕಾರವಿದೆಯೋ ಇಲ್ಲವೋ ಎಂದು ಜನರು ಕಂಗಾಲಾಗಿದ್ದು, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಇದು ದಿಕ್ಸೂಚಿಯಾಗಿದೆ ಎಂದರು.

ಅಂತರಾಳದಿಂದ.. EDITORIAL

ಔಷಧಗಳ ಬೆಲೆ ನಿಯಂತ್ರಣ, ಲಾಭಕ್ಕಿಂತ ಜನಹಿತ ಮುಖ್ಯ

ಔಷಧಗಳ ಬೆಲೆ ನಿಗದಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರಕಾರ ಮತ್ತು ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ದೇಶದಲ್ಲಿ ವಿವಿಧ ಕಾಯಿಲೆಗಳ ಶಮನ ಮತ್ತು ಚಿಕಿತ್ಸೆಗಾಗಿ ಬಳಸಲಾಗುವ ಔಷಧಗಳ ಬೆಲೆಯ ಮೇಲೆ ನಿಯಂತ್ರಣವೇ ಇಲ್ಲದಂತಾಗಿರುವ ಕುರಿತಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುವುದು ದೇಶದಲ್ಲಿನ ಔಷಧೋದ್ಯಮದ ಅನಿಯಂತ್ರಿತ ವ್ಯವಹಾರಕ್ಕೆ ಕನ್ನಡಿ ಹಿಡಿದಂತಾಗಿದೆ.

ದೇಶದಲ್ಲಿ ಒಂದೇ ಮಾದರಿಯ ಔಷಧಗಳಿಗೂ ಬೆಲೆಯಲ್ಲಿ ಏಕರೂಪತೆ ಇಲ್ಲವಾಗಿದ್ದು ಮತ್ತೆ ಹಲವು ಔಷಧಗಳನ್ನು ಅತ್ಯಧಿಕ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರು ಒಮ್ಮೆ ಈ ಸಮಸ್ಯೆಯಿಂದ ಪಾರಾದರೆ ಸಾಕು ಎಂದು ಔಷಧದಂಗಡಿಗಳು ಹೇಳಿದ ಬೆಲೆ ತೆತ್ತು ಈ ಔಷಧಗಳನ್ನು ಖರೀದಿಸುತ್ತಾರೆ. ಕೆಲವು ಕಾಯಿಲೆಗಳಿಗೆ ದೀರ್ಘಕಾಲ ಔಷಧ ಸೇವನೆ ಅನಿವಾರ್ಯವಾದ್ದರಿಂದ ಬಡವರ ಪಾಲಿಗೆ ಇದು ಬಲುದೊಡ್ಡ ಆರ್ಥಿಕ ಹೊರೆಯಾಗಿ ಪರಿಣಮಿಸುತ್ತದೆ. ದೇಶದಲ್ಲಿ ಔಷಧಗಳ ಬೆಲೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ನ್ಯಾಯಪೀಠ, ಔಷಧಗಳ ದುಬಾರಿ ಬೆಲೆಯ ಕುರಿತಂತೆ ಕೆಲವು ಪ್ರಮುಖ ಪ್ರಶ್ನೆಗಳನ್ನು ಎತ್ತಿದ್ದೇ ಅಲ್ಲದೆ ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರದ ನಿಷ್ಕ್ರಿಯತೆಯ ಕುರಿತಂತೆ ಬೆಟ್ಟು ಮಾಡಿದೆ. ವಾರಗಳ ಹಿಂದೆಯಷ್ಟೇ ಕೇಂದ್ರ ಸರಕಾರ ಕ್ಯಾನ್ಸರ್ ಕಾಯಿಲೆಯ ನಿಯಂತ್ರಣಕ್ಕೆ ಬಳಸಲಾಗುವ ಔಷಧಗಳ ಬೆಲೆಯ ಮಾರಾಟದ ಲಾಭವನ್ನು ಶೇ.16ಕ್ಕೆ ಸೀಮಿತಗೊಳಿಸಿ ಆದೇಶ ಹೊರಡಿಸಿತ್ತು.

ದೇಶದಲ್ಲಿ ಔಷಧಗಳ ಬೆಲೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್ ನ್ಯಾಯಪೀಠ, ಔಷಧಗಳ ದುಬಾರಿ ಬೆಲೆಯ ಕುರಿತಂತೆ ಕೆಲವು ಪ್ರಮುಖ ಪ್ರಶ್ನೆಗಳನ್ನು ಎತ್ತಿದ್ದೇ ಅಲ್ಲದೆ ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರದ ನಿಷ್ಕ್ರಿಯತೆಯ ಕುರಿತಂತೆ ಬೆಟ್ಟು ಮಾಡಿದೆ. ವಾರಗಳ ಹಿಂದೆಯಷ್ಟೇ ಕೇಂದ್ರ ಸರಕಾರ ಕ್ಯಾನ್ಸರ್ ಕಾಯಿಲೆಯ ನಿಯಂತ್ರಣಕ್ಕೆ ಬಳಸಲಾಗುವ ಔಷಧಗಳ ಬೆಲೆಯ ಮಾರಾಟದ ಲಾಭವನ್ನು ಶೇ.16ಕ್ಕೆ ಸೀಮಿತಗೊಳಿಸಿ ಆದೇಶ ಹೊರಡಿಸಿತ್ತು.
ಈ ಅರ್ಜಿಗಳ ವಿಚಾರಣೆ ಸಂದರ್ಭದಲ್ಲೂ ಕೇಂದ್ರ ಸರಕಾರ ಈ ವಿಷಯವನ್ನು ನ್ಯಾಯಪೀಠದ ಗಮನಕ್ಕೆ ತಂದಿತ್ತಲ್ಲದೆ ವಿದೇಶಗಳಿಗೆ ಹೋಲಿಸಿದರೆ ದೇಶದಲ್ಲಿ ಔಷಧಗಳ ಬೆಲೆ ಅಗ್ಗವಾಗಿವೆ ಎಂದು ಸಮರ್ಥಿಸಿಕೊಂಡಿತ್ತು. ಆದರೆ, ಕೇಂದ್ರ ಸರಕಾರದ ಈ ವಾದವನ್ನು ಒಪ್ಪದ ನ್ಯಾಯಪೀಠ, ಲಾಭಾಂಶದ ಬೆಲೆ ಮಿತಿಯನ್ನು ಕೇವಲ ಕ್ಯಾನ್ಸರ್‌ಔಷಧಗಳಿಗೆ ಸೀಮಿತಗೊಳಿಸದೆ ಎಲ್ಲಾ ಔಷಧಗಳನ್ನು ಇದರ ವ್ಯಾಪ್ತಿಗೆ ಸೇರಿಸಬಾರದು ಎಂದು ಖಾರವಾಗಿಯೇ ಪ್ರಶ್ನಿಸಿದೆ.

ಈ ಅರ್ಜಿಗಳ ವಿಚಾರಣೆ ಸಂದರ್ಭದಲ್ಲೂ ಕೇಂದ್ರ ಸರಕಾರ ಈ ವಿಷಯವನ್ನು ನ್ಯಾಯಪೀಠದ ಗಮನಕ್ಕೆ ತಂದಿತ್ತಲ್ಲದೆ ವಿದೇಶಗಳಿಗೆ ಹೋಲಿಸಿದರೆ ದೇಶದಲ್ಲಿ ಔಷಧಗಳ ಬೆಲೆ ಅಗ್ಗವಾಗಿವೆ ಎಂದು ಸಮರ್ಥಿಸಿಕೊಂಡಿತ್ತು. ಆದರೆ, ಕೇಂದ್ರ ಸರಕಾರದ ಈ ವಾದವನ್ನು ಒಪ್ಪದ ನ್ಯಾಯಪೀಠ, ಲಾಭಾಂಶದ ಬೆಲೆ ಮಿತಿಯನ್ನು ಕೇವಲ ಕ್ಯಾನ್ಸರ್‌ಔಷಧಗಳಿಗೆ ಸೀಮಿತಗೊಳಿಸದೆ ಎಲ್ಲಾ ಔಷಧಗಳನ್ನು ಇದರ ವ್ಯಾಪ್ತಿಗೆ ಸೇರಿಸಬಾರದು ಎಂದು ಖಾರವಾಗಿಯೇ ಪ್ರಶ್ನಿಸಿದೆ.

ದೇಶದಲ್ಲಿ ಒಂದೇ ಮಾದರಿಯ ಔಷಧಗಳಿಗೂ ಬೆಲೆಯಲ್ಲಿ ಏಕರೂಪತೆ ಇಲ್ಲವಾಗಿದ್ದು ಮತ್ತೆ ಹಲವು ಔಷಧಗಳನ್ನು ಅತ್ಯಧಿಕ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರು ಒಮ್ಮೆ ಈ ಸಮಸ್ಯೆಯಿಂದ ಪಾರಾದರೆ ಸಾಕು ಎಂದು ಔಷಧದಂಗಡಿಗಳು ಹೇಳಿದ ಬೆಲೆ ತೆತ್ತು ಈ ಔಷಧಗಳನ್ನು ಖರೀದಿಸುತ್ತಾರೆ. ಕೆಲವು ಕಾಯಿಲೆಗಳಿಗೆ ದೀರ್ಘಕಾಲ ಔಷಧ ಸೇವನೆ ಅನಿವಾರ್ಯವಾದ್ದರಿಂದ ಬಡವರ ಪಾಲಿಗೆ ಇದು ಬಲುದೊಡ್ಡ ಆರ್ಥಿಕ ಹೊರೆಯಾಗಿ ಪರಿಣಮಿಸುತ್ತದೆ.

ಎಂಟು ಗಂಟೆಗಳವರೆಗೆ ನಿದ್ರಿಸಿದರೂ ದೈಹಿಕವಾಗಿ ಆಯಾಸವೆನಿಸುತ್ತಿದೆಯೇ?; ಸ್ಲೀಪ್ ಅಪ್ನಿಯಾ ಲಕ್ಷಣವಿರಬಹುದು: ವೈದ್ಯರ ಸಲಹೆಗಳೇನು

ದೈಹಿಕ ಆರೋಗ್ಯಕ್ಕೆ ನಾವು ಹಾಸಿಗೆಯ ಮೇಲೆ ಕಳೆಯುವ ಒಟ್ಟು ಸಮಯಕ್ಕಿಂತ ನಿದ್ರೆಯ ಗುಣಮಟ್ಟ ಹಾಗೂ ಅದು ಎಷ್ಟು ನೆಮ್ಮದಿಯಿಂದ ಕೂಡಿದೆ ಎಂಬುದು ತುಂಬಾ ಮುಖ್ಯವಾಗುತ್ತದೆ.

ಒಂದು ವೇಳೆ, ನೀವು ಸಾಕಷ್ಟು ಸಮಯ ಮಲಗಿದ್ದರೂ ಬೆಳಗ್ಗೆ ಎದ್ದಾಗ ಇನ್ನೂ ಆಯಾಸ ಕಡಿಮೆಯಾಗದೇ ಇದ್ದರೆ, ಏನಾದರೂ ತಪ್ಪಾಗುತ್ತಿದೆ ಎಂದು ಯೋಚಿಸುವುದು ಅವಶ್ಯವಾಗಿದೆ. ರಾತ್ರಿಯಿಡೀ ಚೆನ್ನಾಗಿ ನಿದ್ರಿಸಿದರೂ ಹಗಲಿನಲ್ಲಿ ನಿದ್ರೆ ಬರುವುದು ಇಲ್ಲವೇ ಕೆಲಸಗಳಲ್ಲಿ ಗಮನ ಕೇಂದ್ರೀಕರಿಸಲು ಕಷ್ಟವಾಗುವುದು, ಉಸಿರಾಟಕ್ಕೆ ಸಂಬಂಧಿಸಿದ ಗಂಭೀರವಾದ ಆರೋಗ್ಯ ಸಮಸ್ಯೆಯ ಸಂಕೇತವಾಗಿರಬಹುದು. ಅನೇಕರ ಗಮನಕ್ಕೆ ಬಾರದ ಈ ಸ್ಥಿತಿಯನ್ನು 'ಸ್ಲೀಪ್ ಅಪ್ನಿಯಾ' ಎಂದು ಕರೆಯಲಾಗುತ್ತದೆ. ಸ್ಲೀಪ್ ಅಪ್ನಿಯಾ ಆರೋಗ್ಯದ ಸಮಸ್ಯೆಯ ಕುರಿತು ಕೋಲ್ಕತ್ತಾದ ಸಿ.ಕೆ. ಬಿರ್ಲಾ ಆಸ್ಪತ್ರೆಯ ಹಿರಿಯ ಶ್ವಾಸಕೋಶ ತಜ್ಞರಾದ ಡಾ.ಅರೂಪ್ ಹಲ್ದಾರ್ ಪ್ರತಿಕ್ರಿಯಿಸಿ, ಒಬ್ಬ ವ್ಯಕ್ತಿ ಮಲಗಿದಾಗ, ಗಂಟಲಿನ ಸ್ನಾಯುಗಳು ಸಹಜವಾಗಿಯೇ ಸಡಿಲಗೊಳ್ಳುತ್ತವೆ. ಈ ನಿದ್ರೆಯ ಸಮಸ್ಯೆಯನ್ನು ಹೊಂದಿರುವವರಲ್ಲಿ ಈ ಸ್ನಾಯುಗಳು ಅತಿಯಾಗಿ ಸಡಿಲಗೊಳ್ಳುತ್ತವೆ. ಇದರಿಂದ ಮೇಲ್ಭಾಗದ ಉಸಿರಾಟದ ಮಾರ್ಗವು ಕಿರಿದಾಗುತ್ತದೆ, ಇಲ್ಲವೇ ಸಂಪೂರ್ಣವಾಗಿ ಮುಚ್ಚಿಹೋಗುತ್ತದೆ.ಈ ರೀತಿ ಉಸಿರಾಟದ ಮಾರ್ಗಕ್ಕೆ ಅಡಚಣೆ ಉಂಟಾದಾಗ, ಸಾಮಾನ್ಯ ಉಸಿರಾಟವು ತಾತ್ಕಾಲಿಕವಾಗಿ ನಿಂತುಹೋಗುತ್ತದೆ. ವ್ಯಕ್ತಿಯು ಕೆಲವು ಸೆಕೆಂಡುಗಳ ಕಾಲ ಉಸಿರಾಡಲು ಸಾಧ್ಯವಾಗದ ಪರಿಸ್ಥಿತಿಯೂ ಉಂಟಾಗಬಹುದು.

ದೇಹದಲ್ಲಿ ಆಮ್ಲಜನಕದ ಮಟ್ಟ ಕಡಿಮೆಯಾದಾಗ ಸಾಮಾನ್ಯ ಉಸಿರಾಟವನ್ನು ಪುನಃಸ್ಥಾಪಿಸಲು ಮೆದುಳು ವ್ಯಕ್ತಿಯನ್ನು ಕ್ಷಣಕಾಲ ಎಚ್ಚರಗೊಳಿಸುತ್ತದೆ. ರಾತ್ರಿಯಿಡೀ ಇಂತಹ ಘಟನೆಗಳು ಹಲವು ಬಾರಿ ಸಂಭವಿಸಬಹುದು. ಮರುದಿನ ಬೆಳಗ್ಗೆ ಎದ್ದಾಗ ನಮಗೆ ಸಾಮಾನ್ಯವಾಗಿ ಇದು ನೆನಪಿರುವುದಿಲ್ಲ. ಇದರ ಪರಿಣಾಮವಾಗಿ ದೇಹ ಮತ್ತು ಮೆದುಳು ಎರಡಕ್ಕೂ ಅಗತ್ಯವಿರುವ ಸಂಪೂರ್ಣ ವಿಶ್ರಾಂತಿ ಸಿಗುವುದಿಲ್ಲ. ರಾತ್ರಿಯಲ್ಲಿ ಜೋರಾಗಿ ಗೊರಕೆ ಹೊಡೆಯುವುದು, ಈ ಸಮಸ್ಯೆಯ ಪ್ರಮುಖ ಸೂಚನೆಯಾಗಿದೆ. ಗೊರಕೆಯ ಜೊತೆಗೆ ಉಸಿರಾಡಲು ಕಷ್ಟಪಡುತ್ತಿರುವಂತಹ ಶಬ್ದಗಳು ಕೇಳಿಬಂದರೆ, ಉಸಿರಾಟದ ಮಾರ್ಗದಲ್ಲಿ ಏನೋ ಅಡಚಣೆಯಿರುವಂತೆ ಭಾಸವಾದರೆ, ಅದು ಸ್ಪಷ್ಟವಾದ ಸಂಕೇತವಾಗಿದೆ ಎಂದು ವೈದ್ಯರು ವಿವರಿಸುತ್ತಾರೆ.

ಸ್ಲೀಪ್ ಅಪ್ನಿಯಾ ಸಮಸ್ಯೆಯು ಅಧಿಕ ದೇಹದ ತೂಕ, ವಯಸ್ಸಾಗುವುದು, ನೈಸರ್ಗಿಕವಾಗಿ ಕಿರಿದಾದ ವಾಯುಮಾರ್ಗವನ್ನು ಹೊಂದಿರುವುದು, ಈ ನಿದ್ರಾಹೀನತೆಯ ಕುಟುಂಬದ ಇತಿಹಾಸ ಸೇರಿದಂತೆ ವಿವಿಧ ಅಂಶಗಳಿಂದ ಉಂಟಾಗಬಹುದು. ಇದು ಯಾವುದೇ ನಿರ್ದಿಷ್ಟ ವಯಸ್ಸಿನ ಗುಂಪಿಗೆ ಸೀಮಿತವಾಗಿಲ್ಲ. ಇದು ಯಾವುದೇ ವಯಸ್ಸಿನ, ಯಾವುದೇ ದೇಹದ ಪ್ರಕಾರದ ಜನರ ಮೇಲೆ ಪರಿಣಾಮ ಬೀರಬಹುದು. ಶ್ವಾಸಕೋಶ ತಜ್ಞ ಡಾ.ಅರುಪ್ ಹಾಲ್ಡರ್ ಅವರು ತಿಳಿಸುವ ಪ್ರಕಾರ, ಈ ನಿದ್ರಾಹೀನತೆಯು ಕೇವಲ ಹಗಲಿನ ಆಯಾಸಕ್ಕೆ ಸೀಮಿತವಾಗಿಲ್ಲ ಎಂದು ಎಚ್ಚರಿಕೆ ನೀಡುತ್ತಾರೆ. ಆಮ್ಲಜನಕದ ಮಟ್ಟದಲ್ಲಿ ಪುನರಾವರ್ತಿತ ಕುಸಿತ ಮತ್ತು ಕಳಪೆ ಗುಣಮಟ್ಟದ ನಿದ್ದೆ ಹಲವಾರು ಆರೋಗ್ಯ ತೊಡಕುಗಳಿಗೆ ಕಾರಣವಾಗಬಹುದು. ಅಧಿಕ ರಕ್ತದೊತ್ತಡ ಮತ್ತು ಹೃದಯ ಸಂಬಂಧಿತ ಸಮಸ್ಯೆಗಳ ಅಪಾಯ ಹೆಚ್ಚಾಗುತ್ತದೆ.

ಹಗಲಿನ ಆಯಾಸ ಮತ್ತು ಚಾಲನೆ ಮಾಡುವಾಗ ಸಂಭವನೀಯ ಅಪಾಯಗಳಿಂದಾಗಿ ಕೆಲಸದಲ್ಲಿ ಕಡಿಮೆ ಗಮನ, ಚಾಲನೆ ಮಾಡುವಾಗ ಸಂಭವನೀಯ ಅಪಾಯಗಳು.

ವೈದ್ಯರು ಸಾಮಾನ್ಯವಾಗಿ ದಿನನಿತ್ಯದ ವೈದ್ಯಕೀಯ ತಪಾಸಣೆಯ ಸಮಯದಲ್ಲಿ ಈ ಸ್ಥಿತಿಯನ್ನು ನಿರ್ಣಯಿಸುತ್ತಾರೆ. ಅಗತ್ಯವಿದ್ದರೆ, 'ನಿದ್ರೆ ಅಧ್ಯಯನ' ಎಂದು ಕರೆಯಲ್ಪಡುವ ವಿಶೇಷ ನಿದ್ರೆಯ ಮೌಲ್ಯಮಾಪನವನ್ನು ನಡೆಸಲಾಗುತ್ತದೆ.ಈ ವಿಧಾನವು ನಿದ್ರೆಯ ಸಮಯದಲ್ಲಿ ಉಸಿರಾಟದ ಪ್ರಮಾಣ, ರಕ್ತದ ಆಮ್ಲಜನಕದ ಮಟ್ಟಗಳು, ದೈಹಿಕ ಚಲನೆಗಳನ್ನು ಸಮಗ್ರವಾಗಿ ಮೇಲ್ವಿಚಾರಣೆ ಮಾಡುವ ಮೂಲಕ ನಿಖರವಾದ ಒಳನೋಟಗಳನ್ನು ಒದಗಿಸುತ್ತದೆ.

ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

23

ಎದೆಬಡಿತ ನಿಯಂತ್ರಣ

ಸ್ವಲ್ಪ ತಣ್ಣೀರು ಕುಡಿಯಿರಿ, ಅಂಗೈಗಳನ್ನು ಉಜ್ಜಿಕೊಳ್ಳಿ, ಸುತ್ತ ಗಾಳಿ ಬರುವಂತೆ ನೋಡಿಕೊಳ್ಳಿ. ಮನಸ್ಸಿಗೆ ನಾನು ಸುರಕ್ಷಿತ ಎಂದು ಮೂರು ಬಾರಿ ಹೇಳಿಕೊಳ್ಳಿ. ಪ್ರಶ್ನೆಪತ್ರಿಕೆ ಪೂರ್ತಿ ಓದುವ ಬದಲು ಸುಲಭ ಪ್ರಶ್ನೆಯಿಂದ ಆರಂಭಿಸಿ. ಒಂದು ಉತ್ತರ ಮುಗಿದ ತೃಪ್ತಿಯೇ ಮುಂದಿನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

ಪ್ರಶ್ನೆಪತ್ರಿಕೆ ಕೈಗೆ ಬಂದೊಡನೆ ಅನೇಕರ ಎದೆ ಡಬಡಬನೆ ಹೊಡೆದುಕೊಳ್ಳುತ್ತದೆ.

ಕೈ ಬೆವರುತ್ತದೆ, ಉಸಿರು ಮೊಟಕಾಗುತ್ತದೆ, ಓದಿದ್ದೆಲ್ಲ ಮರೆತಂತೆ ಅನಿಸುತ್ತದೆ. ಇದು ಆತಂಕದ ಸಾಮಾನ್ಯ ಲಕ್ಷಣ. ಎದೆಬಡಿತ ಏರಿದಾಗ ಮಿದುಳಿಗೆ ರಕ್ತ ಹರಿವು ಅಸ್ತವ್ಯಸ್ತಗೊಂಡು ಸ್ಮರಣಶಕ್ತಿ ಮಂದವಾಗುತ್ತದೆ, ನೆನಪು ಜಾರಿದಂತೆ ಭಾಸವಾಗುತ್ತದೆ.

ಇಂತಹ ಕ್ಷಣದಲ್ಲಿ ಗಾಬರಿಗೊಳ್ಳುವುದು ಬೇಡ. ಮೊದಲು ಪೆನ್ ಕೆಳಗಿರಿಸಿ ಬೆನ್ನನ್ನು ನೇರ ಮಾಡಿ ಕುಳಿತುಕೊಳ್ಳಿ.

ಒಂದು ಕೈ ಹೊಟ್ಟೆಯ ಮೇಲಿರಿಸಿ ಮೂಗಿನಿಂದ ನಾಲ್ಕು ಸೆಕೆಂಡು ಉಸಿರೆಳೆದು, ನಾಲ್ಕು ಸೆಕೆಂಡು ತಡೆದು, ಬಾಯಿಂದ ನಾಲ್ಕು ಸೆಕೆಂಡು ನಿಧಾನವಾಗಿ ಬಿಡಿ. ನಾಲ್ಕು ಬಾರಿ ಇದನ್ನು ಮಾಡಿ. ಈ 4-4-4 ಉಸಿರಾಟದಿಂದ

ನರಗಳು ಶಾಂತಗೊಂಡು ಹೃದಯಬಡಿತ ಸಹಜವಾಗುತ್ತದೆ.

ಎದೆಬಡಿತ ಅಪಾಯದ ಸಂಕೇತವಲ್ಲ, ದೇಹ ಸಹಾಯಕ್ಕೆ ಸಿದ್ಧವಾಗುತ್ತಿರುವ ಸೂಚನೆ. ಅದನ್ನು ಸ್ನೇಹಿತನಂತೆ ಸ್ವೀಕರಿಸಿ. ಉಸಿರು ನಿಮ್ಮ ಹತೋಟಿಯಲ್ಲಿದೆ, ಉಸಿರು ಸರಿದರೆ ಎದೆಬಡಿತ ಸರಿಯಾಗುತ್ತದೆ, ಪರೀಕ್ಷೆಯೂ ವಶವಾಗುತ್ತದೆ.

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ ಈ ಎರಡೂ ಕೂಡ ಸೂರ್ಯ ಮತ್ತು ಚಂದ್ರ ಹಾಗೂ ಕಲ್ಪವೃಕ್ಷ ಮತ್ತು ಕಾಮಧೇನು ಇದ್ದ ಹಾಗೆ. ಭೂಮಿಗೆ ಬಿದ್ದ ಬೀಜದಿಂದ ಮೊಳಕೆ ಒಡೆದು,ಸಸ್ಯ,ಗಿಡ ಮರವಾಗಿ ಜಗತ್ತಿಗೆ ಹೂ,ಕಾಯಿ,ಹಣ್ಣು ಮಿಗಿಲಾಗಿ ಜೀವ ರಾಶಿಗಳಿಗೆ ನೆರಳಾಗಿ, ಪಕ್ಷಿಗಳಿಗೆ ವಾಸಸ್ಥಾನ ಹಾಗೂ ಪ್ರಕೃತಿಯಲ್ಲಿ ಇಂಗಾಲ ಆಮ್ಲವನ್ನು ಹೀರಿಕೊಂಡು ಆಮ್ಲಜನಕ ನೀಡುತ್ತಾ, ವಾಯುಮಾಲಿನ್ಯವನ್ನು ಕಾಪಾಡುತ್ತದೆ. ಅದೇ ರೀತಿ ಎದೆಗೆ ಬಿದ್ದ ಅಕ್ಷರದಿಂದ ಸಂಪೂರ್ಣ ಮನಸ್ಸು ಮತ್ತು ಹೃದಯ ವಿಕಾಸವಾಗಿ ಸಮಾಜಕ್ಕೆ ಬೆಳಕು ಮಾಡುವ ವಿಶ್ವಮಾನವನಾಗುವ ಗುಣಕಲಿಸುತ್ತದೆ. ಇಲ್ಲಿ ಪ್ರಕೃತಿ ಮತ್ತು ಮಾನವನ ನಡುವೆ ಯಾವ ರೀತಿ ಅವಿನಾಭಾವ ಸಂಬಂಧ ಹಾಗೂ ಮನುಷ್ಯನಿಗೆ ಮರೆಮಾಚಿ ಪ್ರಕೃತಿ ಗುಟ್ಟಾಗಿ ಏನೆಲ್ಲಾ ಬದಲಾವಣೆ ಆಗುತ್ತದೆಂಬುದನ್ನ ಯಾರೂ ಸಹ ಊಹಿಸಲು ಸಾಧ್ಯವಿಲ್ಲ.

ನೆಲೆ ನಿಂತ ಮೇಲೆ ನೆಲ ಬೆಳಗುವುದೇ ನಿಜವಾದ ಸಾರ್ಥಕದ ಬದುಕು

ನಾವುಗಳು ಈ ನೆಲದಲ್ಲಿ ಹುಟ್ಟಿ,ಬೆಳೆದು,ವಿದ್ಯಾಭ್ಯಾಸ ಮಾಡಿ ದೊಡ್ಡವರಾಗಿ ದೊಡ್ಡ ಉದ್ಯೋಗಕ್ಕೆ ಸೇರಿಕೊಂಡು ಸ್ವಂತ ದುಡಿದು ಒಂದು ನೆಲೆ ನಿಂತ ಮೇಲೆ ಈ ನೆಲದಲ್ಲಿ ಬೆಳಕು ಮಾಡಿ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು ಅದೇ ಈ ನೆಲದ ಧರ್ಮ. ನಾವುಗಳು ಮಾನವರಾಗಿ ಈ ಭೂಮಿಯಲ್ಲಿ ಹುಟ್ಟಿದ್ದ ಮೇಲೆ ಏನೇನು ಕಂಡೆ, ಏನೇನು ಕೇಳ್ದೆ, ಏನೇನು ಮಾಡಿದೆ,ಏನೇನು ಅನುಭವಿಸಿದೆ,ಏನೇನು ಉಳಿಸಿದೆ, ಏನೇನು ಗಳಿಸಿದೆ ಎಂಬುದರ ಬಗ್ಗೆ ಆತ್ಮ ವಿಮರ್ಶೆ ಮಾಡಿ ಕೊಳ್ಳಬೇಕು. ಆತ್ಮಕ್ಕೆ ವಂಚನೆ ಇಲ್ಲದೇ ಸಾರ್ಥಕವಾದ ಬದುಕಾಗಬೇಕು ಇಲ್ಲಾ ಅಂದರೆ ಹುಟ್ಟಿದ್ದು ಸಾರ್ಥಕವಿಲ್ಲ ಅರ್ಥವಿಲ್ಲದ್ದು ನಿರರ್ಥಕ.

ನಮ್ಮ ಮೇಲೆ ಭೂಮಿಯ ಋಣ,ಗಾಳಿಯ ಋಣ, ನೀರಿನ ಋಣ,ಅನ್ನದ ಋಣ,ಪ್ರಕೃತಿಯ ಋಣ, ತಾಯಿ ತಂದೆಯರ ಋಣ, ಗುರು ಹಿರಿಯರ ಋಣ ಮಿಗಿಲಾಗಿ ಈ ಸಮಾಜದ ಋಣ ನಮ್ಮ ಮೇಲಿದೆ ಎಂಬುದನ್ನ ನಾವುಗಳು ಜೀವಂತ ಇರುವವರೆಗೂ ಮರೆಯಬಾರದು. ಸಾಧ್ಯವಾದಷ್ಟು ಋಣವನ್ನು ತೀರಿಸುವ ಹೃದಯವಂತಿಕೆಯನ್ನಿಟ್ಟು ಕೊಳ್ಳಬೇಕು ಆದರೆ ಪೂರ್ತಿ ಋಣವನ್ನ ತೀರಿಸಲು ಯಾರಿಂದಲೂ ಸಾಧ್ಯವಿಲ್ಲ.

ನಾವು ಇಲ್ಲಿ ನೆಲೆ ನಿಲ್ಲಬೇಕಾದರೆ ತಾಯಿ ತಂದೆಯವರ, ಗುರು ಹಿರಿಯರ, ಬಂಧು-ಬಳಗದವರ, ಆತ್ಮೀಯ ಸ್ನೇಹಿತರ ಹಾಗೂ ಹಿತೈಷಿಗಳ ಇನ್ನೂ ಅನೇಕ ಮಹನೀಯ ಮಹಾತ್ಮರ ಆಶೀರ್ವಾದ ಹಾಗೂ ಪರಿಶ್ರಮವಿದೆ. ಅವರ ಪರಿಶ್ರಮದ ಜೊತೆಗೆ ನಮ್ಮ ಪರಿಶ್ರಮವು ಸಹ ಇದೆ ಆದರೆ ಏನೇ ಆದರೂ ಸ್ವಂತ ಪರಿಶ್ರಮದಿಂದ ಗಳಿಸಿದ ಆದಾಯದಲ್ಲಿ ಈ ನೆಲವನ್ನ ಬೆಳಗಬೇಕು. ಕೆಲವೊಂದು ಪರಿಶ್ರಮಗಳಿಂದ ಗಳಿಸಿ ಬೆಳಕು ಮಾಡುವ ಬಗ್ಗೆ ಪ್ರಸ್ತಾಪ ಮಾಡುವುದಾದರೆ. ಮನೆಯಲ್ಲಿ ತಾಯಿ ತಂದೆಗಳಿಂದ ಕಲಿತ ಸಂಸ್ಕಾರ, ಸನ್ಮಾರ್ಗ, ಸಂಸ್ಕೃತಿ, ಇದರಿಂದ ಕುಟುಂಬ,ಸಮಾಜ ಹಾಗೂ ರಾಷ್ಟ್ರಕ್ಕೆ ಬೆಳಕಾಗಬೇಕು. ಗಳಿಸಿದ ಶಿಕ್ಷಣದಿಂದ ಸಮಾಜಕ್ಕೆ ಉಪಯೋಗವಾಗಬೇಕು ಹಾಗೂ ಶಿಕ್ಷಣದಿಂದ ಸಮಾಜ,ರಾಷ್ಟ್ರವನ್ನು ಬೆಳಕು ಮಾಡಬೇಕು. ದೊರಕಿದ ಅಥವಾ ಸ್ವಂತ ಉದ್ಯೋಗದಿಂದ ಗಳಿಸಿದ ಸಂಪಾದನೆಯಲ್ಲಿ ಯೋಗ್ಯಾನುಸಾರ ಎಲ್ಲಾ ಅನುಕೂಲಗಳನ್ನು ಮಾಡಿಕೊಂಡು ಮನೆಯನ್ನು ಬೆಳಗುವುದರ ಜೊತೆಗೆ ಸಮಾಜವನ್ನು ಬೆಳಕು ಮಾಡಬೇಕು.

ಆಡಂಬರ ಮದುವೆಗಳು, ಹೆಗ್ಗಳಿಕೆ, ತೋರ್ಪಡಿಸಿಕೊಳ್ಳುವಿಕೆ, ಶ್ರೀಮಂತಿಕೆ ಪ್ರದರ್ಶಿಸುವುದು, ನಿರ್ಜೀವ ವಸ್ತುಗಳಿಗೆ ಅಲಂಕಾರ ಹಾಗೂ ವೈಭವಕ್ಕೆ ಜಾಸ್ತಿ ಒತ್ತು ಕೊಟ್ಟು ದುಂದು ವೆಚ್ಚ ಮಾಡುವುದು ಇವೆಲ್ಲಕ್ಕೂ ಕಡಿವಾಣ ಹಾಕಿಕೊಳ್ಳಬೇಕು.ಬಡ ಮಕ್ಕಳ ವಿದ್ಯಾಭ್ಯಾಸ,ಮಕ್ಕಳ ಮದುವೆ,ಅವರ ಉದ್ಯೋಗ,ಅವರ ನೆಲೆಗೆ ಸಹಕರಿಸಿ ಮಿಗಿಲಾಗಿ ಅವರನ್ನೆಲ್ಲಾ ವಿಶ್ವಮಾನವರನ್ನಾಗಿ ಪರಿವರ್ತಿಸುವ ಗುಣ ಇರಬೇಕು. ಬಡ ವಿಧವೆ ಅಥವಾ ವಿಧುರನ ಮರು ಮದುವೆ ಮಾಡುವುದು,ಅನಾಥ ಮಕ್ಕಳನ್ನ ದತ್ತು ತೆಗೆದುಕೊಳ್ಳುವುದು ಒಳ್ಳೆಯ ಬೆಳವಣಿಗೆ. ಬಡ ಮಕ್ಕಳಿಗೆ ಆಹಾರ, ಶಿಕ್ಷಣ, ಆರೋಗ್ಯ,ವಸತಿ, ಉದ್ಯೋಗ ಕಲ್ಪಿಸಿ ಕೊಟ್ಟು ಅವರುಗಳಿಗೆ ಮುಖ್ಯವಾಹಿನಿಗೆ ಬರುವಂತೆ ನೋಡಿಕೊಳ್ಳಬೇಕು.

ಮನೆಯಲ್ಲಿ ಹೆಂಡತಿ ಅಥವಾ ಗಂಡ ಮಕ್ಕಳು, ವೃದ್ಧ ತಂದೆ ತಾಯಿ ಅವರಿಗೆ ಹಾಗೂ ಇತರೆ ಅವಲಂಬಿತರಿಗೆ ಆಶ್ರಯರಾಗಬೇಕು.

ಗಳಿಸಿದ ಆದಾಯದಿಂದ ನಿಜವಾಗಿ ನೊಂದವರ, ಬಡವರ,ದೀನದಲಿತರ ನಿರ್ಗತಿಕರ,ಅಂಗವಿಕಲರ ಬಾಳಿಗೆ ಬೆಳಕಾಗಬೇಕು. ಅನಾವಶ್ಯಕವಾಗಿ ಖರ್ಚು ಮಾಡುವ ಬದಲು ಹೆಚ್ಚುವರಿಯಾಗಿ ಆದಾಯವಿದ್ದರೆ ಮನೆ, ಶಾಲೆ,ಆಸ್ಪತ್ರೆ, ಸಮುದಾಯ ಭವನ, ಅನಾಥಾಶ್ರಮ, ವೃದ್ಧಾಶ್ರಮ, ಕ್ರೀಡಾ ಭವನ, ಗ್ರಂಥಾಲಯ, ವಾಚನಾಲಯ ಸ್ಥಾಪಿಸಿ ಸಮಾಜದಲ್ಲಿ ಗುರುತಿಸಿಕೊಳ್ಳಬೇಕು. ನನಗೂ ಒಂದು ದಿನ ಸಾವಿದೆ ಎಂಬ ಅರಿವು ಇಟ್ಟುಕೊಂಡು ಯಾರಿಗೂ ನೋಯಿಸದೆ ಹಾಗೂ ಭಾರವಾಗದೇ ನೊಂದವರ ಬಾಳಿಗೆ ಬೆಳಕಾಗಬೇಕು. ಹಣ,ಅಧಿಕಾರ,ಅಂತಸ್ತು ಯಾವುದೂ ಶಾಶ್ವತ ಇಲ್ಲ ಎಂಬ ಅರಿವು ಇದ್ದರೆ ಸಮ ಸಮಾಜದಲ್ಲಿ ಸರ್ವರಿಗೂ ಸಮಾನತೆ ಮತ್ತು ಸ್ವತಂತ್ರಕ್ಕೆ ಅರ್ಥ ಸಿಗುತ್ತದೆ.

ಒಟ್ಟಾರೆ ಹೃದಯವಂತ ಮತ್ತು ಮಾನವೀಯತೆ ಉಳ್ಳ ಯಾರೇ ಆಗಲೀ ಒಂದು ಸ್ಥಾನಮಾನಕ್ಕೆ ಬಂದು ನೆಲೆ ನಿಂತ ಮೇಲೆ ಈ ನೆಲದಲ್ಲಿ ನೊಂದವರ ಬಾಳಿಗೆ ಬೆಳಕಾಗುವುದೇ ಈ ನೆಲದ ಧರ್ಮ ಅದೇ ನಿಜವಾದ ಮಾನವ ಧರ್ಮ.

ರಾಮಾಯಣ

23. ರಾವಣನೇ ಯುದ್ಧರಂಗಕ್ಕೆ ನಡೆತಂದುದು; ಅವನನ್ನು ಲಕ್ಷ್ಮನು ಎದುರಿಸುವು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ನವಚೈತನ್ಯ ಹರಿಯಿತು, ಗೆದ್ದು ಬರುವ ಛಲ ಹೆಚ್ಚಾಯಿತು, ತಮ್ಮ ದೊರೆಯ ಮುಂದೆ ಶೌರ್ಯಪ್ರದರ್ಶನದ ಅವಕಾಶದಿಂದ ಪುಳಕಗೊಂಡಿತು. ಕಪ್ಪುಮೋಡಗಳಂತಹ ಮೈಯುಳ್ಳ ರಕ್ಕಸದಳದವರು ಒಡೆಯನ ಅಕ್ಕಪಕ್ಕಗಳಲ್ಲಿ ನಡೆಯುತ್ತಿರಲು, ಕತ್ತೆ ಕುದುರೆ ಆನೆ ಒಂಟೆ ಮಾರ್ಜಾಲ ಪಿಶಾಚಗಳೆಲ್ಲ ಸುತ್ತುವರಿದು ಕೋಲಾಹಲವನ್ನುಂಟುಮಾಡುತ್ತಿರಲು ಯಮಸ್ವರೂಪಿಯಾದ ರಾಕ್ಷಸೇಂದ್ರನು ಬರುತ್ತಿರಲು ದಿಕ್ಪಾಲಕರೇ ಮುಂತಾದವರೆಲ್ಲ ನಡುಗುತ್ತ ತಮ್ಮನ್ನು ಇನ್ನಾರು ರಕ್ಷಿಸುತ್ತಾರೆ ಎಂದು ಬಾಯಿಬಿಡುತ್ತ ಮಿಡುಕುತ್ತಿದ್ದರು. ಜಗತ್ತನ್ನೇ ಕೊಂದು ತಿಂದುಬಿಡುವೆನೆಂಬ ಅಹಂಕಾರದಿಂದ ಕೂಡಿದ ರಕ್ಕಸೇಂದ್ರನು ನಗರಿಯಿಂದ ಹೊರಟು ಬರಲು ಅಮರತತಿಯನ್ನು ಎಂಥದೋ ಭೀತಿ ಆವರಿಸಿತು. ದಾವನಸೈನ್ಯದ ಕಾಲುಳಿತದಿಂದ ಭೂಮಿ ನಡುಗುತ್ತಿರಲು ಅದನ್ನು ಅನುಭವಿಸಿದ ಕಪಿಸಂತತಿಯೂ ಕಂಪಿಸಿತು.

ಈ ಕೋಲಾಹಲವನ್ನು ಕೇಳಿದ ಶ್ರೀರಾಮಚಂದ್ರನು ಏನೋ ವಿಶಿಷ್ಟವಾದುದು ಸಂಭವಿಸಿದೆಯೆಂದು ತಿಳಿದು, ಇದೇನು ಹೇಸರಕತ್ತೆಗಳೂ ಆನೆಗಳೂ ಪಿಶಾಚಗಳೂ ಕೂಡಿದ ಕಾಳಮೇಘದಂಹ ಈ ಸೇನೆಯು ಬರುತ್ತಿದೆಯಲ್ಲ. ನಾನಾ ಆಕಾರದ ಧ್ವಜಗಳೂ ಪತಾಕೆಗಳೂ ಹಾರಾಡುತ್ತಿವೆ, ಪ್ರಾಸ, ಕತ್ತಿ ಗದೆ, ಶೂಲಗಳಂತಹ ಅನೇಕ ಆಯುಧಗಳನ್ನು ಸೈನಿಕರು ಹಿಡಿದಿದ್ದಾರೆ. ಪ್ರಚಂಡಬಲರಾದ ಪರಾಕ್ರಮಿಗಳಲ್ಲ ಇಲ್ಲಿರುವರು ಈ ಅದ್ಭುತವೇನು ಎಂದು ಪೌಲಸ್ತ್ಯಕುಲಸಂಭೂತನಾದ ವಿಭೀಷಣನನ್ನು ವಿಚಾರಿಸಿದ. ಆಗ ಈಶಾನನ ಅಡಿದಾವರೆಗೆ ಭಕ್ತಿಯಿಂದ ನಮಿಸಿ ವಿಭೀಷಣನು, ಆಕಾಶದೆತ್ತರದ ಆನೆಯನ್ನೇರಿ, ಕೋಪದಿಂದ ಬಾಲಸೂರ್ಯನಂತೆ ಕೆಂಪಾದ ಕಣ್ಣುಗಳುಳ್ಳ, ಮಹಾಶರೀರಿಯೊಬ್ಬನು ಅಲ್ಲಿ ಬರುತ್ತಿರುವನಲ್ಲ, ಅವನ ಹೆಸರು ಕಂಪನ ಎಂದು. ಅಲ್ಲೊಂದು ಸಿಂಹಕೇತನವುಳ್ಳ ಚಿನ್ನದ ರಥವೊಂದು ಕಾಣುತ್ತಿದೆಯಲ್ಲ, ಅದರ ಮಧ್ಯದಲ್ಲಿ ನಿಂತು, ಇಂದ್ರನ ಧನುಸ್ಸಿಗಿಂತಲೂ ಬಿರುಸಾದ ಬಿಲ್ಲೊಂದನ್ನು ಹಿಡಿದು ರೋಷಾವೇಶದಿಂದ ತಿರುಹುತ್ತಿದ್ದಾನೆ, ಸಮುದ್ರವನ್ನೇ ಹೀರುವವನಂತೆ ತನ್ನ ಕೋರೆದಾಡೆಗಳನ್ನು ಮಸೆಯುತ್ತಿದ್ದಾನೆ, ಅವನೇ ಇಂದಜಿತು. ಅವನಿಗೆ ಬ್ರಹ್ಮನಿತ ವರದ ಬಲವಿದೆ, ಅದರಿಂದಾಗಿ ಅವನು ಖ್ಯಾತನಾಗಿದ್ದಾನೆ. ಥಳಥಳಿಸುವ ಹೊಂದೇರಿನ ತುದಿಯಲ್ಲಿ, ಕಳಶದ ಬಳಿ ಹೊಳೆಯುವ ವಸ್ತಭೂಷಣಗಳನ್ನು ಧರಿಸಿ, ಶರಚಾಪಗಳನ್ನು ಹಿಡಿದು ವಿಂಧ್ಯಪರ್ವತದಂತೆ ಮಹಾಶರೀರದಿಂದ ಕೂಡಿರುವವನು ಕೊಳುಗುಳದಲ್ಲಿ ಈ ಮಹಾರಕ್ಕಸನನ್ನು ಎದುರಿಸುವವರು ಯಾರೂ ಇಲ್ಲ. ಇವನ ಹೆಸರು ಕೇಳಿದರೆ ಬ್ರಹ್ಮನೇ ಮೊದಲಾದ ದೇವಾಸುರರು ಭಯದಿಂದ ನಡುಗುತ್ತಾರೆ! ಬಾಲಸೂರ್ಯನಂತೆ ಕೆಂಪಾದ ಕಣ್ಣುಗಳುಳ್ಳವನೂ, ಮಂದರದಂತಹ ದೇಹವುಳ್ಳವನೂ ಆಗಿ ಒಂದು ಮದ್ದಾನೆಯನ್ನೇರಿ, ನಾನಾ ಶಸ್ತ್ರಾಸ್ತ್ರಗಳನ್ನು ಎಡಬಲಗಳಲ್ಲಿ ಹರಹಿಕೊಂಡು ಬರುತ್ತಿರುವವನು ಮಹೋದರ ಈ ಯುದ್ಧದಲ್ಲಿ ನರವಾನರಸಮೂಹವನ್ನು ಬಡಿದಿಕ್ಕುವೆನೆಂದು ಅರಸನ ಜೊತೆ ಮತ್ತೆ ಮತ್ತೆ ಹೇಳಿಕೊಳ್ಳುವ ರಕ್ಕಸ. ಕುಜೀಗನ ಕುದುರೆಯನ್ನೇ ಕೀಳ್ಮಾಡುತ್ತ ಇಂದ್ರನ ತುರಗವನ್ನೂ ಲೆಕ್ಕಿಸದ ಮನೋಜವವುಳ್ಳ ಗಾಂಧರ್ವಾಶ್ವವನ್ನೇರಿ, ಕೈಯಲ್ಲಿ ಪ್ರಾಸವನ್ನು ಹಿಡಿದು, ಸಂಜೆಗೆಂಪು ಆವರಿಸಿರುವ ಬೆಟ್ಟದಂತೆ ಕಾಣುವ, ಕಿನಿಸಿನಿಂದ ವಜ್ರಾಯುಧದಂತೆ ಹೊಡೆಯುವ ಆ ಮಹಾ ಅಸುರನೇ ಪಿಶಾಚ ದೇವತೆಗಳನ್ನೂ ಲೆಕ್ಕಿಸದ ದುರ್ಜಯ, ದುರ್ವಿಲಾಸ ಅವನು. ಬೆಳ್ಳಿಬೆಟ್ಟದಂತಹ ವೃಷಭವೊಂದನ್ನೇರಿ, ರವಿಕಿರಣಗಳಂತೆ ಹೊಳೆಯುವ ಶೂಲವನ್ನು ಹಿಡಿದು, ಕ್ರೋಧವೇ ಮೂರ್ತಿಭವಿಸಿದಂತೆ ಕಣ್ಣುಗಳಲ್ಲಿ ಕಿಡಿಯುಗುಳುತ್ತ ಬರುತ್ತಿರುವವನೇ ತ್ರಿದಶ ಅಜ ಸುರೇಂದ್ರಾದಿಗಳನ್ನೇ ಹೆದರಿಸುವ ಗರ್ವಯುತನಾದ ಮಹಾಶೂರ ಎಂದು ಹೆಸರುಳ್ಳವನು. ಚಿನ್ನವಜ್ರಖಚಿತವಾದ ರಥವನ್ನೇರಿ ಕಾಳಮೇಘವೇ ಮೈದಳೆದು ಭೂಮಿಗೆ ಇಳಿದು ಬಂದಂತೆ ಕಾಣುವ, ವಜನಿಭವಾದ ಬಾಣಪ್ರಹಾರ ಮಾಡಬಲ್ಲ, ಅವನು ನಿಕುಂಭ. ಅದ್ಭುತ ಚಿತ್ತಾರಗಳನ್ನುಳ್ಳ ಮಣಿಖಚಿತ ರಥವನ್ನೇರಿ, ಶರಚಾಪಗಳನ್ನು ಹಿಡಿದು ಬೆಂಕಿಯಂತೆ ಹೊಳೆಯುತ್ತಿರುವವನು ನರಾಂತಕ, ಮಹಾ ದೈತ್ಯನಾದ ಅವನು ಕ್ರೂರಕರ್ಮಿ. ಅವನ ಪಕ್ಕದಲ್ಲಿ ಅದ್ಭುತವಾದ ಕುದುರೆಯೊಂದನ್ನೇರಿ ಬರುತ್ತಿರುವವನೇ ದೇವಾಂತಕ ಎಂಬ ರಾಕ್ಷಸ ಕೊಳುಗುಳದಲ್ಲಿ ದೇವಸಂತತಿಯನ್ನು ಘೋರವಾಗಿ ತರಿದಿಕ್ಕಬಲ್ಲವನು. ಹುಲಿ, ಒಂಟೆ, ಆನೆ, ಕುದುರೆ ಮುಂತಾದ ಪ್ರಾಣಿಗಳ ಮುಖಗಳಂತಹ ಮುಖಮುದ್ರೆಯುಳ್ಳ ಪಿಶಾಚ ದಾನವರ ಗುಂಪಿನ ನಡುವೆಯಿರುವವನು, ಕೈಲಾಸವನ್ನು ಎತ್ತಿ, ದೇವತೆಗಳ ಅಹಂಕಾರವನ್ನಿಳುಹಿ, ದಿಕ್ಪಾಲಕಮುಖ್ಯರನ್ನೂ ಧಿಕ್ಕರಿಸಿದ ಮಹಾ ಬಲಶಾಲಿಯೂ ವಿಶ್ರವಸನ ಸುತನೂ ಆದ ರಾವಣ ತಾನು ಧರಿಸಿದ ರತ್ತಮಯ ಕಿರೀಟ ಕವಚ ಕುಂಡಲಗಳಿಂದ ಸುತ್ತಲೂ ಬೆಳಕನ್ನು ಚೆಲ್ಲುತ್ತ, ಚಂದ್ರನ ಬೆಳುದಿಂಗಳಂತೆ ಕಂಗೊಳಿಸುವ ಬೆಳ್ಗೊಡೆಯ ಅಡಿಯಲ್ಲಿ, ರತ್ನಮಯ ಕಿರೀಟಧಾರಿಯಾಗಿ, ಎಷ್ಟುವಿನ ಆಯುಧಗಳ ಹೊಡೆತಗಳಿಂದ ಅಮರೇಂದ್ರನ ಆನೆಯಂತೆ ಮೈಯಲ್ಲೆಲ್ಲ ರಣವ್ರಣದ ಗುರುತುಗಳಿಂದ ಕೂಡಿ ರಾರಾಜಿಸುತ್ತಿದ್ದಾನೆ ಇವನ ಹೆಸರು ಕೇಳಿದರೆ ಸಾಕು, ದೇವೇಂದ್ರನೇ ನಡುಗುತ್ತಾನೆ. ಈಶಾನ ಮುಂತಾದ ದಿಕ್ಪಾಲಕರೆಲ್ಲ ಅವಿತುಕೊಂಡುಬಿಡುತ್ತಾರೆ.

ಮುಂದುವರೆಯುವುದು

ಹಿಂದೂ ಜನಜಾಗೃತಿ ಸಮಿತಿಯ 25ನೇ ವರ್ಷದ ರಜತ ಮಹೋತ್ಸವ!

ಬೆಂಗಳೂರು: ರಾಷ್ಟ್ರ ಮತ್ತು ಧರ್ಮ ರಕ್ಷಣೆಯ ಉದಾತ್ತ ಧ್ಯೇಯದೊಂದಿಗೆ 7ಅಕ್ಟೋಬರ್ 2002 ರಂದು (ಆಶ್ವಯುಜ ಶುಕ್ಲ ಪಾಡ್ಯ, ನವರಾತ್ರಿ ಘಟಸ್ಥಾಪನೆಯ ದಿನ) ಸ್ಥಾಪನೆಯಾದ ಹಿಂದೂ ಜನಜಾಗೃತಿ ಸಮಿತಿಯು ತನ್ನ ಯಶಸ್ವಿ 25 ನೇ ವರ್ಷಕ್ಕೆ (ರಜತ ಮಹೋತ್ಸವ) ಪಾದಾರ್ಪಣೆ ಮಾಡುತ್ತಿದ್ದು, ಇದರ ನಿಮಿತ್ತ ಬೆಂಗಳೂರಿನಲ್ಲಿ 'ಸ್ನೇಹ ಸಮ್ಮೇಳನ' ಕಾರ್ಯಕ್ರಮವನ್ನು ಆಯೋಜಿಸಿದೆ.

ಸಮಿತಿಯು ಧರ್ಮಶಿಕ್ಷಣ, ಧರ್ಮಜಾಗೃತಿ, ಧರ್ಮರಕ್ಷಣೆ, ರಾಷ್ಟ್ರರಕ್ಷಣೆ ಹಾಗೂ ಹಿಂದೂಗಳ ಸಂಘಟನೆ ಎಂಬ 'ಪಂಚಸೂತ್ರಗಳ' ಅಡಿಯಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ಜಾತಿ, ಸಂಪ್ರದಾಯ ಮತ್ತು ಭಾಷಿಕ ಭೇದಗಳನ್ನು ತೊರೆದು ಧರ್ಮಾಧಿಷ್ಠಿತ ಹಿಂದೂ ರಾಷ್ಟ್ರ ಸ್ಥಾಪಿಸುವುದೇ ಸಮಿತಿಯ ಮುಖ್ಯ ಧ್ಯೇಯವಾಗಿದೆ.

ಕಳೆದ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಸಮಿತಿಯು ದೇಶಾದ್ಯಂತ 189ಕ್ಕೂ ಹೆಚ್ಚು ಹಿಂದೂ ರಾಷ್ಟ್ರ ಅಧಿವೇಶನಗಳು, 2,180ಕ್ಕೂ ಹೆಚ್ಚು ಜಾಗೃತಿ ಸಭೆಗಳು, 1,700 ಕ್ಕೂ ಹೆಚ್ಚು ಆಂದೋಲನಗಳು ಮತ್ತು 4,188 ಕ್ಕೂ ಅಧಿಕ 'ಧರ್ಮಶಿಕ್ಷಣ ವರ್ಗಗಳನ್ನು' ಯಶಸ್ವಿಯಾಗಿ ಸಂಘಟಿಸಿದೆ.

ಇದರೊಂದಿಗೆ ಲವ್ ಜಿಹಾದ್, ಹಲಾಲ್ ಪ್ರಮಾಣಪತ್ರ ಮತ್ತು ಮತಾಂತರದಂತಹ ಪ್ರಸ್ತುತ ಸವಾಲುಗಳ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದೆ ಮತ್ತು ದೇವಾಲಯಗಳ ರಕ್ಷಣೆಗಾಗಿ ಶ್ರಮಿಸುತ್ತಿದೆ.

ಈ ರಜತ ಮಹೋತ್ಸವದ ಶುಭ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ 'ಸ್ನೇಹ ಸಮ್ಮೇಳನ' ಕಾರ್ಯಕ್ರಮದಲ್ಲಿ ಸಮಸ್ತ ಧರ್ಮಾಭಿಮಾನಿಗಳು, ರಾಷ್ಟ್ರಪ್ರೇಮಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸಮಿತಿಯು ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಕಾರ್ಯಕ್ರಮದ ವಿವರ: **ವಕ್ತಾರರು: 1.** ರಮೇಶ್ ಶಿಂಧೆ, ರಾಷ್ಟ್ರೀಯ ವಕ್ತಾರರು, ಹಿಂದೂ ಜನಜಾಗೃತಿ ಸಮಿತಿ

2. ಶ್ರೀ. ಚಕ್ರವರ್ತಿ ಸೂಲಿಬೆಲೆ, ಸಂಸ್ಥಾಪಕರು, ಯುವ ಬ್ರಿಗೇಡ್

ಶ್ರೀ ಮೋಹನ್ ಗೌಡ ರಾಜ್ಯ ವಕ್ತಾರರು, ಹಿಂದೂ ಜನಜಾಗೃತಿ ಸಮಿತಿ

ಲೇಖಕರು

ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಭಕ್ತಿಯ ಬೆಳಕಿನಲ್ಲಿ ಹಾಸನಾಂಬೆ: ಇತಿಹಾಸ, ಐತಿಹ್ಯ ಮತ್ತು ನಂಬಿಕೆಯ ದಿವ್ಯ ಸಂಗಮ!

ತಾಯಿ ಹಾಸನಾಂಬೆ ತನ್ನ ಭಕ್ತರನ್ನು ಕಾಪಾಡುವಳು, ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ಕರುಣಿಸುವಳು

''ಬಾಗಿಲು ತೆರೆಯುವ ಆ ಶುಭಕ್ಷಣಕ್ಕಾಗಿ ವರ್ಷವಿಡೀ ಕಾಯುವ ಭಕ್ತರ ಹೃದಯದಲ್ಲಿ ನೆಲೆಸಿರುವಳು ಹಾಸನಾಂಬೆ; ನಂಬಿಕೆಯ ದೀಪ ಬೆಳಗಿಸಿ, ಬದುಕಿಗೆ ಭರವಸೆಯ ಬೆಳಕು ನೀಡುವ ನಮ್ಮ ಹಾಸನದ ಅಧಿದೇವತೆ. ಕರ್ನಾಟಕದ ಧಾರ್ಮಿಕ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಹಾಸನಾಂಬೆ ದೇವಿಯ ದರ್ಶನದ ಪುಣ್ಯಕಾಲ ಮತ್ತೆ ಬಂದಿದೆ. ಇಂದು ಹಾಸನಾಂಬೆಯ ದೇವಸ್ಥಾನದ ಬಾಗಿಲು ತೆರೆದಿದ್ದು, ನಾಳೆಯಿಂದ ಭಕ್ತಾದಿಗಳಿಗೆ ದೇವಿಯ ದರ್ಶನ ಲಭ್ಯವಾಗಲಿದೆ. ವರ್ಷಕ್ಕೊಮ್ಮೆ ಮಾತ್ರ ಸಾರ್ವಜನಿಕ ದರ್ಶನಕ್ಕೆ ಅವಕಾಶ ದೊರೆಯುವ ಈ ಪವಿತ್ರ ಕ್ಷಣವು ಹಾಸನ ಜಿಲ್ಲೆಯ ಜನರಿಗೆ ಮಾತ್ರವಲ್ಲದೆ, ರಾಜ್ಯದ ವಿವಿಧ ಭಾಗಗಳಿಂದ ಆಗಮಿಸುವ ಲಕ್ಷಾಂತರ ಭಕ್ತರಿಗೂ ಅಪಾರ ಭಕ್ತಿ, ಸಂತಸ ಮತ್ತು ಆಧ್ಯಾತ್ಮಿಕ ಉತ್ಸಾಹವನ್ನು ತುಂಬುತ್ತದೆ.

ಹಾಸನಾಂಬೆ ದೇವಿಯ ಹಿನ್ನೆಲೆ ಮತ್ತು ಐತಿಹ್ಯ : ಹಾಸನ ನಗರದ ಹೃದಯಭಾಗದಲ್ಲಿರುವ ಹಾಸನಾಂಬೆ ದೇವಾಲಯವು ಶತಮಾನಗಳ ಧಾರ್ಮಿಕ ಪರಂಪರೆ, ಜನರ ಅಚಲ ನಂಬಿಕೆ ಮತ್ತು ವಿಶಿಷ್ಟ ಆಚರಣೆಗಳಿಗೆ ಹೆಸರುವಾಸಿಯಾಗಿದೆ. ಹಾಸನಾಂಬೆ ದೇವಿಯನ್ನು ಆದಿಶಕ್ತಿಯ ಸ್ವರೂಪವೆಂದು ಭಕ್ತರು ಆರಾಧಿಸುತ್ತಾರೆ. ತಾಯಿ ಹಾಸನಾಂಬೆ ತನ್ನ ಭಕ್ತರನ್ನು ಕಾಪಾಡುವಳು, ಅವರ ಕಷ್ಟಗಳಿಗೆ ಸ್ಪಂದಿಸುವಳು ಹಾಗೂ ಕುಟುಂಬಗಳಿಗೆ ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ಕರುಣಿಸುವಳು ಎಂಬುದು ಜನರ ಗಾಢವಾದ ನಂಬಿಕೆ. ಹಾಸನಾಂಬೆ ದೇವಿಯ ಹೆಸರಿನ ಮೂಲ ಮತ್ತು ದೇವಾಲಯದ ಪ್ರಾಚೀನತೆಯ ಕುರಿತು ಹಲವು ಸ್ಥಳೀಯ ಐತಿಹ್ಯಗಳು ಪ್ರಚಲಿತದಲ್ಲಿವೆ. ಜನಪದ ನಂಬಿಕೆಗಳ ಪ್ರಕಾರ, ತಾಯಿ ತನ್ನ ಭಕ್ತರಿಗೆ ಒಳಿತನ್ನು ಬಯಸುವ ಕರುಣಾಮಯಿ ದೇವತೆಯಾಗಿದ್ದಾಳೆ. ದೇವಿಯ ಸನ್ನಿಧಿಯಲ್ಲಿ ಪ್ರಾರ್ಥಿಸಿದರೆ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ, ಸಂಕಷ್ಟಗಳನ್ನು ಎದುರಿಸುವ ಧೈರ್ಯ ಮೂಡುತ್ತದೆ ಎಂಬ ಭಾವನೆ ಭಕ್ತರಲ್ಲಿದೆ. ಹಾಸನಾಂಬೆಯ ಆರಾಧನೆಯು ಕೇವಲ ಧಾರ್ಮಿಕ ಆಚರಣೆಯಲ್ಲ, ಅದು ತಲೆಮಾರುಗಳಿಂದ ಮುಂದುವರಿದು ಬಂದಿರುವ ಸಂಸ್ಕೃತಿ, ಪರಂಪರೆ ಮತ್ತು ಸಾಮೂಹಿಕ ನಂಬಿಕೆಯ ಪ್ರತೀಕವೂ ಆಗಿದೆ. **ವರ್ಷಕ್ಕೊಮ್ಮೆ ದರ್ಶನದ ವಿಶೇಷತೆ :** ಹಾಸನಾಂಬೆ ದೇವಾಲಯದ ಅತ್ಯಂತ ವಿಶಿಷ್ಟವಾದ ಆಚರಣೆಯೆಂದರೆ ವರ್ಷಕ್ಕೊಮ್ಮೆ ಮಾತ್ರ ದೇವಾಲಯದ ಬಾಗಿಲು ತೆರೆದು ಸಾರ್ವಜನಿಕರಿಗೆ ದರ್ಶನ ಕಲ್ಪಿಸುವುದು. ದರ್ಶನದ ಅವಧಿ ಮುಗಿದ ಬಳಿಕ ದೇವಾಲಯದ ಬಾಗಿಲು ಮುಚ್ಚಲಾಗುತ್ತದೆ. ನಂತರ ಮುಂದಿನ ವರ್ಷದ ಉತ್ಸವದ ಸಂದರ್ಭದಲ್ಲಿ ಮತ್ತೆ ಬಾಗಿಲು ತೆರೆಯಲಾಗುತ್ತದೆ.

ಈ ಅಪರೂಪದ ಸಂಪ್ರದಾಯವೇ ಹಾಸನಾಂಬೆಯ ದರ್ಶನಕ್ಕೆ ವಿಶೇಷ ಮಹತ್ವವನ್ನು ನೀಡಿದೆ. ದೇವಿಯ ದರ್ಶನಕ್ಕಾಗಿ ಭಕ್ತರು ದೂರದ ಊರುಗಳಿಂದ ಆಗಮಿಸಿ ಗಂಟೆಗಟ್ಟಲೆ ಸರದಿಯಲ್ಲಿ ನಿಂತು ಪ್ರಾರ್ಥಿಸುತ್ತಾರೆ. ತಮ್ಮ ಕುಟುಂಬದ ಒಳಿತಿಗಾಗಿ, ಆರೋಗ್ಯಕ್ಕಾಗಿ, ಮಕ್ಕಳ ಭವಿಷ್ಯಕ್ಕಾಗಿ, ಉದ್ಯೋಗ ಮತ್ತು ವ್ಯಾಪಾರದ ಪ್ರಗತಿಗಾಗಿ ಹಾಗೂ ಜೀವನದ ಸಂಕಷ್ಟಗಳಿಂದ ಮುಕ್ತಿ ಪಡೆಯುವ ಆಶಯದಿಂದ ತಾಯಿಯ ಪಾದಗಳಿಗೆ ಭಕ್ತಿಯಿಂದ ನಮಿಸುತ್ತಾರೆ. ದೇವಾಲಯದ ಬಾಗಿಲು ತೆರೆಯುವ ದಿನದಿಂದ ಹಾಸನ ನಗರವು ಧಾರ್ಮಿಕ ಸಂಭ್ರಮದ ಕೇಂದ್ರವಾಗುತ್ತದೆ. ಬೀದಿಗಳಲ್ಲಿ ಭಕ್ತರ ಸಂಚಾರ ಹೆಚ್ಚುತ್ತದೆ; ವ್ಯಾಪಾರ ಚಟುವಟಿಕೆಗಳಿಗೆ ವೇಗ ದೊರೆಯುತ್ತದೆ;



ವಿವಿಧ ಸೇವಾ ಸಂಸ್ಥೆಗಳು ಮತ್ತು ಸ್ವಯಂಸೇವಕರು ಭಕ್ತರಿಗೆ ನೆರವಾಗುತ್ತಾರೆ. ಹೀಗೆ ಹಾಸನಾಂಬೆಯ ಉತ್ಸವವು ಧಾರ್ಮಿಕ ಆಚರಣೆಯ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೂ ಚೈತನ್ಯ ನೀಡುತ್ತದೆ. **ಹಾಸನಾಂಬೆ ದೇವಿಯ ಮಹತ್ವ :** ತಾಯಿ ಹಾಸನಾಂಬೆಯ ಮಹತ್ವವನ್ನು ಕೇವಲ ದೇವಾಲಯದ ವೈಭವ ಅಥವಾ ಉತ್ಸವದ ಜನಸಂದಣಿಯಿಂದ ಅಳೆಯಲು ಸಾಧ್ಯವಿಲ್ಲ. ಆಕೆಯ ಮೇಲಿನ ಭಕ್ತರ ನಂಬಿಕೆ, ಕಷ್ಟದ ಸಮಯದಲ್ಲಿ ದೇವಿಯ ನೆನಪಿನಿಂದ ದೊರೆಯುವ ಮಾನಸಿಕ ಧೈರ್ಯ ಮತ್ತು ಕುಟುಂಬದ ಒಳಿತಿಗಾಗಿ ಮಾಡುವ ಪ್ರಾರ್ಥನೆಗಳಲ್ಲಿ ಆ ಮಹತ್ವ ಅಡಗಿದೆ.ದೇವಿಯ ಸನ್ನಿಧಿಗೆ ಬರುವ ಪ್ರತಿಯೊಬ್ಬ ಭಕ್ತನಿಗೂ ಒಂದೊಂದು ಆಶಯವಿರುತ್ತದೆ. ಕೆಲವರು ತಮ್ಮ ನೋವುಗಳನ್ನು ತಾಯಿಯ ಮುಂದೆ ಹೇಳಿಕೊಳ್ಳುತ್ತಾರೆ; ಇನ್ನು ಕೆಲವರು ಜೀವನದಲ್ಲಿ ದೊರೆತ ಒಳಿತಿಗಾಗಿ ಕೃತಜ್ಞತೆ ಸಲ್ಲಿಸುತ್ತಾರೆ. ಮತ್ತೊಂದಿಷ್ಟು ಜನರು ಮನಸ್ಸಿನ ಶಾಂತಿ ಮತ್ತು ಬದುಕಿನ ಹೊಸ ಭರವಸೆಯನ್ನು ಅರಸುತ್ತಾರೆ. ಭಕ್ತಿ ಎಂದರೆ ಕೇವಲ ಬೇಡಿಕೆಗಳ ಪಟ್ಟಿಯಲ್ಲ. ಅದು ಕೃತಜ್ಞತೆ, ಸಹನೆ, ಮಾನವೀಯತೆ ಮತ್ತು ಒಳಿತಿನ ಹಾದಿಯಲ್ಲಿ ನಡೆಯುವ ಸಂಕಲ್ಪವೂ ಹೌದು. ಈ ದೃಷ್ಟಿಯಿಂದ ಹಾಸನಾಂಬೆಯ ಆರಾಧನೆಯು ಜನರ ಬದುಕಿನಲ್ಲಿ ಆಧ್ಯಾತ್ಮಿಕ ಮೌಲ್ಯಗಳನ್ನು ಬಲಪಡಿಸುವ ಮಹತ್ವದ ಪರಂಪರೆಯಾಗಿದೆ. **ಹಾಸನದ ಹೆಮ್ಮೆ, ನಾಡಿನ ಆಕರ್ಷಣೆ :** ಹಾಸನಾಂಬೆ ಉತ್ಸವವು ಹಾಸನ ಜಿಲ್ಲೆಯ ಸಾಂಸ್ಕೃತಿಕ ಗುರುತಿನ ಅವಿಭಾಜ್ಯ ಅಂಗವಾಗಿದೆ. ಈ ಉತ್ಸವದ ಮೂಲಕ ಹಾಸನದ ಧಾರ್ಮಿಕ ಪರಂಪರೆ, ಸ್ಥಳೀಯ ಸಂಸ್ಕೃತಿ ಮತ್ತು ಜನರ ಆತಿಥ್ಯ ಮನೋಭಾವ ರಾಜ್ಯದಾದ್ಯಂತ ಪರಿಚಿತವಾಗುತ್ತದೆ. ಭಕ್ತರ ಸುರಕ್ಷತೆ, ಸ್ವಚ್ಛತೆ, ಕುಡಿಯುವ ನೀರು, ವೈದ್ಯಕೀಯ ನೆರವು ಮತ್ತು ಸುಗಮ ದರ್ಶನಕ್ಕೆ ಸಂಬಂಧಿಸಿದ ವ್ಯವಸ್ಥೆಗಳು ಉತ್ಸವದ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಉಸಿರಾಗಲಿ ಕನ್ನಡ..!!

ಕನ್ನಡ ಭಾಷೆಯ ಹಿರಿಮೆ
ನಮ್ಮ ಕರುನಾಡಿನ ಮಹಿಮೆ
ಅಭಿಮಾನದಿಂದ ನೋಡು ಒಮ್ಮೆ
ಅರಿತುಕೊಂಡರೆ ನೀನು ಇನ್ನೊಮ್ಮೆ
ಜನ್ಮತಾಳಬೇಕೆಂದೆನಿಸುತ್ತದೆ ಮತ್ತೊಮ್ಮೆ
ಇದುವೇ ನಮ್ಮ ಕರುನಾಡಿನ ಹೆಮ್ಮೆ..!!

ಕನ್ನಡ ಭಾಷೆಯ ಒಲವು
ಬಾಂಧವ್ಯಕ್ಕೆ ಬೆಸೆದ ಬಲವು;
ಜಗತ್ತಿನಲ್ಲಿ ಭಾಷೆಗಳು ಹಲವು
ಕನ್ನಡ ನುಡಿಯ ಸುಂದರ ಚೆಲುವು
ನೋವು ನೀಗಿ ನೀಡುವುದು ನಲಿವು
ಭ್ರಾತೃತ್ವ ಭಾವನೆಯಿಂದ ಗೆಲುವು
ತರುವ ನಮ್ಮೀ ಕರುನಾಡ ನೆಲವು..!!

ದೇವರ ಭಾಷೆಯೆಂಬ ಪ್ರತೀತಿ
ಕನ್ನಡ ಭಾಷೆಯ ಅದಮ್ಯ ಪ್ರೀತಿ;
ಸೌಹಾರ್ದತೆಯನ್ನು ಸಾರುವ ರೀತಿ
ಹೇಗೆ ಬಾಳಿ ಬದುಕಬೇಕೆಂಬ ನೀತಿ;
ಪ್ರಕೃತಿ ಮಾತೆಯ ಸುಂದರ ಸಂಗಾತಿ
ಇದುವೇ ಕರುನಾಡಿನ ಶ್ರೇಷ್ಠ ಸಂತತಿ..!!

ಕನ್ನಡಕ್ಕಾಗಿ ಪ್ರಾಣ ಕೊಡುವುದು ಬೇಡ
ಕನ್ನಡವನ್ನು ಜೀವಂತವಾಗಿ ಕೊಲ್ಲಬೇಡ
ಕನ್ನಡ ಮಾತನಾಡುವುದನ್ನು ಬಿಡಬೇಡ
ಇಷ್ಟು ಮಾತ್ರ ಸಾಕಲ್ಲವೇ ನಮ್ಮ ಕನ್ನಡ
ಭಾಷೆ ಉಳಿಯಲು ನಡೆಯುವ ಪವಾಡ
ನಮ್ಮೆಲ್ಲರ ಉಸಿರಾಗಲಿ ಕನ್ನಡ ಕನ್ನಡ..!!

-ಶ್ರೀ ಶ್ರೀನಿವಾಸ. ಎನ್.ದೇಸಾಯಿ,
ಶಿಕ್ಷಕರು.
ಸ ಮಾ ಹಿ ಪ್ರಾ ಶಾಲೆ
ವಿದ್ಯಾನಗರ ಕುಷ್ಟಗಿ.
ಮೊ.ನಂ- 9845808941

ಗ್ರಾಮೀಣ ಭಾಗಗಳಲ್ಲಿ ಅಸ್ಪೃಶ್ಯತೆಯ ಕರಾಳ ಛಾಯೆ ಇಂದಿಗೂ ಸಜೀವವಾಗಿದೆ..

ಸೂಗೂರು ಗ್ರಾಮದಲ್ಲಿ ಮೆರೆದ ಅಸ್ಪೃಶ್ಯತೆಯ ಕರಾಳ ಮುಖ: ದಲಿತರಿಗೆ ದೇವಸ್ಥಾನ, ಹೋಟೆಲ್ ಪ್ರವೇಶ ನಿಷೇಧ!

- **ಇಲಿಯಾಸ್ ಪಟೇಲ್. ಬಳಗಾನೂರ ರಾಜ್ಯ ವಿಶೇಷವರದಿಗಾರರು**
- **ಉದಯವಾಹಿನಿ,ಯಾದಗಿರಿ:**

ಸಂವಿಧಾನ ಜಾರಿಯಾಗಿ ಏಳು ದಶಕಗಳು ಕಳೆದಿದ್ದರೂ, ಗ್ರಾಮೀಣ ಭಾಗಗಳಲ್ಲಿ ಅಸ್ಪೃಶ್ಯತೆಯ ಕರಾಳ ಛಾಯೆ ಇಂದಿಗೂ ಸಜೀವವಾಗಿದೆ ಎಂಬುದಕ್ಕೆ ತಾಲ್ಲೂಕಿನ ಸೂಗೂರು ಗ್ರಾಮದಲ್ಲಿ ನಡೆಯುತ್ತಿರುವ ಘಟನೆಗಳು ಸಾಕ್ಷಿಯಾಗಿವೆ. ಗ್ರಾಮದ ದಲಿತ ಸಮುದಾಯದ ಜನರಿಗೆ ದೇವಸ್ಥಾನ ಪ್ರವೇಶ ನಿರಾಕರಿಸಲಾಗುತ್ತಿದ್ದು, ಸಾರ್ವಜನಿಕ ಹೋಟೆಲ್‌ಗಳಲ್ಲೂ ಬಹಿರಂಗ ತಾರತಮ್ಯ ಎಸಗಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ಸಂವಿಧಾನಬದ್ಧ ಸಮಾನತೆಯ ಹಕ್ಕುಗಳನ್ನು ಪ್ರತಿಪಾದಿಸಲು ಮುಂದಾಗುವ ದಲಿತರಿಗೆ ನೇರವಾಗಿ ಜೀವ ಬೆದರಿಕೆ ಒಡ್ಡಲಾಗುತ್ತಿದ್ದು, ಇಡೀ ಗ್ರಾಮದಲ್ಲಿ ತೀವ್ರ ಭೀತಿ ಹಾಗೂ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಸಂವಿಧಾನದ ಆಶಯಕ್ಕೆ ಅಪಚಾರ
ಹೋಟೆಲ್‌ಗಳಲ್ಲೂ ತಾರತಮ್ಯದ ಪದ್ಧತಿ
ಅಧಿಕಾರಿಗಳ ಮೌನಕ್ಕೆ ಸಾರ್ವಜನಿಕರ ಆಕ್ರೋಶ
ಕಠಿಣ ಕಾಯ್ದೆಯಡಿ ಪ್ರಕರಣ ದಾಖಲಿಸಲು ಆಗ್ರಹ

ಸಂವಿಧಾನದ ಆಶಯಕ್ಕೆ ಅಪಚಾರ: ಭಾರತದ ಸಂವಿಧಾನವು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ, ಧಾರ್ಮಿಕ ಸ್ವಾತಂತ್ರ್ಯ ಹಾಗೂ ಗೌರವಯುತವಾಗಿ ಜೀವಿಸುವ ಮೂಲಭೂತ ಹಕ್ಕನ್ನು ನೀಡಿದೆ. ಕಾನೂನಿನ ಕಣ್ಣಿನಲ್ಲಿ ಸಾರ್ವಜನಿಕ ಸ್ಥಳಗಳು ಹಾಗೂ ಧಾರ್ಮಿಕ ಕೇಂದ್ರಗಳು ಸರ್ವರಿಗೂ ಮುಕ್ತವಾಗಿರಬೇಕು. ಆದರೆ, ಸೂಗೂರು ಗ್ರಾಮದಲ್ಲಿ ಮೇಲ್ವರ್ಗದ ಕೆಲವು ವ್ಯಕ್ತಿಗಳ ದಬ್ಬಾಳಿಕೆಯಿಂದ ದಲಿತರನ್ನು ಸಮಾಜದ ಮುಖ್ಯವಾಹಿನಿಯಿಂದ ಸಂಪೂರ್ಣ ಹೊರಗಿಡುವ ಹುನ್ನಾರ ನಡೆದಿದೆ. ಧಾರ್ಮಿಕ ಕಾರ್ಯಕ್ರಮಗಳು ಹಾಗೂ ದೇವಸ್ಥಾನದ ಆವರಣಕ್ಕೆ ದಲಿತರು ಕಾಲಿಡದಂತೆ ತಡೆಯಲಾಗುತ್ತಿದೆ.

ಹೋಟೆಲ್‌ಗಳಲ್ಲೂ ತಾರತಮ್ಯದ ಪದ್ಧತಿ: ಕೇವಲ ದೇವಸ್ಥಾನ ಪ್ರವೇಶವಷ್ಟೇ ಅಲ್ಲದೆ, ಸಾರ್ವಜನಿಕವಾಗಿ ಪ್ರತಿಯೊಬ್ಬರಿಗೂ ತೆರೆದಿರಬೇಕಾದ ಹೋಟೆಲ್‌ಗಳಲ್ಲೂ ದಲಿತರಿಗೆ ಪ್ರತ್ಯೇಕ ಪಾತ್ರೆಗಳನ್ನು ಬಳಸುವುದು ಹಾಗೂ ಪ್ರತ್ಯೇಕವಾಗಿ ಕುಳಿತುಕೊಳ್ಳುವಂತೆ ಒತ್ತಡ ಹೇರಲಾಗುತ್ತಿದೆ. ತಮ್ಮ ಹಕ್ಕುಗಳಿಗಾಗಿ ಪ್ರಶ್ನಿಸಿದರೆ ಅಥವಾ ತಾರತಮ್ಯವನ್ನು ವಿರೋಧಿಸಿದರೆ, 'ಗ್ರಾಮದಿಂದ ಬಹಿಷ್ಕಾರ ಹಾಕುತ್ತೇವೆ' ಹಾಗೂ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಲಾಗುತ್ತಿದೆ ಎಂದು ಸ್ಥಳೀಯ ದಲಿತ ಮುಖಂಡರು ಹಾಗೂ ಸಂತ್ರಸ್ತರು ಅಳಲು ತೋಡಿಕೊಂಡಿದ್ದಾರೆ.


ಉದಯವಾಹಿನಿ ಚಿತ್ರ

> **ಭಾರತದ ಸಂವಿಧಾನ ಪ್ರತಿಯೊಬ್ಬರಿಗೂ ಗೌರವದಿಂದ ಬದುಕುವ ಹಕ್ಕು ನೀಡಿದೆ. ಆದರೆ ಸೂಗೂರು ಸೇರಿದಂತೆ ಯಾದಗಿರಿ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಇಂದಿಗೂ ಜಾತಿ ಆಧಾರಿತ ತಾರತಮ್ಯ ಜೀವಂತವಾಗಿದೆ. ದಲಿತರು ದೇವಸ್ಥಾನಕ್ಕೆ ಹೋದರೆ ತಡೆಯಲಾಗುತ್ತದೆ, ಹೋಟೆಲ್‌ಗಳಲ್ಲಿ ಪ್ರತ್ಯೇಕತೆ ಮಾಡಲಾಗುತ್ತದೆ. ಇದನ್ನು ಪ್ರಶ್ನಿಸಿದರೆ ಜೀವ ಬೆದರಿಕೆ ಹಾಕುತ್ತಾರೆ. ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಸೂಗೂರು ಗ್ರಾಮಕ್ಕೆ ಭೇಟಿ ನೀಡಿ ವಾಸ್ತವಾಂಶ ಪರಿಶೀಲಿಸಬೇಕು. ದಲಿತರಿಗೆ ಸಂವಿಧಾನಬದ್ಧ ಹಕ್ಕುಗಳನ್ನು ಒದಗಿಸಿ ರಕ್ಷಣೆ ನೀಡದಿದ್ದರೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ವತಿಯಿಂದ ಯಾದಗಿರಿ ಜಿಲ್ಲಾಡಳಿತದ ವಿರುದ್ಧ ಬೃಹತ್ ಹೋರಾಟ ನಡೆಸುವುದು ಅನಿವಾರ್ಯ.**
> **ನಿಂಗಣ್ಣ ಗೋನಲ್, ಜಿಲ್ಲಾ ಸಂಚಾಲಕರು, ಡಿಎಸ್‌ಎಸ್, ಯಾದಗಿರಿ**

ಅಧಿಕಾರಿಗಳ ಮೌನಕ್ಕೆ ಸಾರ್ವಜನಿಕರ ಆಕ್ರೋಶ: ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಹಲವು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಇಂತಹ ಜಾತಿ ಆಧಾರಿತ ಅಸಮಾನತೆ ಹಾಗೂ ಶೋಷಣೆಗಳು ನಿರಂತರವಾಗಿ ವರದಿಯಾಗುತ್ತಲೇ ಇವೆ. ಘಟನೆಗಳು ಬೆಳಕಿಗೆ ಬಂದರೂ ಜಿಲ್ಲಾಡಳಿತ, ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದೆ ಮೌನ ವಹಿಸಿರುವುದು ತಾರತಮ್ಯ ಎಸಗುವ ಮೇಲ್ವರ್ಗದವರ ಅಹಂಕಾರಕ್ಕೆ ಮತ್ತಷ್ಟು ಕುಮ್ಮಕ್ಕು ನೀಡಿದಂತಾಗಿದೆ. ಅಧಿಕಾರಿಗಳ ಈ ನಿಷ್ಕ್ರಿಯತೆ ಹಾಗೂ ಉದಾನ ವೈಖರಿಯ ವಿರುದ್ಧ ಸಾಮಾಜಿಕ ಹೋರಾಟಗಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಠಿಣ ಕಾಯ್ದೆಯಡಿ ಪ್ರಕರಣ ದಾಖಲಿಸಲು ಆಗ್ರಹ: ದೇವಸ್ಥಾನ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಜಾತಿ ಆಧಾರಿತ ನಿರ್ಬಂಧ ಹೇರುವುದು ಮತ್ತು ಬೆದರಿಕೆ ಹಾಕುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಯಾದಗಿರಿ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ತಕ್ಷಣವೇ ಜಾಗೃತಗೊಂಡು ಸೂಗೂರು ಗ್ರಾಮಕ್ಕೆ ಹಿರಿಯ ಅಧಿಕಾರಿಗಳ ತಂಡವನ್ನು ಕಳುಹಿಸಬೇಕು.

ವಾಸ್ತವ ಸ್ಥಿತಿಯ ನಿಷ್ಪಕ್ಷಪಾತ ತನಿಖೆ ನಡೆಸಿ, ಜಾತಿ ತಾರತಮ್ಯ ಎಸಗುತ್ತಿರುವ ಮತ್ತು ಬೆದರಿಕೆ ಒಡ್ಡುತ್ತಿರುವ ತಪ್ಪಿತಸ್ಥರ ವಿರುದ್ಧ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು. ಗ್ರಾಮದಲ್ಲಿ ಸರ್ವ ಸಮುದಾಯಗಳ ನಡುವೆ ಸೌಹಾರ್ದತೆ ಮೂಡಿಸಿ, ದಲಿತರಿಗೆ ಭಯಮುಕ್ತವಾಗಿ ಜೀವಿಸುವ ವಾತಾವರಣ ನಿರ್ಮಿಸಬೇಕೆಂಬುದು ಸಾರ್ವಜನಿಕರ ತೀವ್ರ ಒತ್ತಾಯವಾಗಿದೆ.

> **'ವರ್ಷಗಳಿಂದ ಅನ್ಯಾಯ ಸಹಿಸಿಕೊಂಡು ಬಂದಿದ್ದೇವೆ'**
> **ನಾವು ಹಲವು ವರ್ಷಗಳಿಂದ ಈ ಅನ್ಯಾಯ ಮತ್ತು ಮುಜುಗರವನ್ನು ಸಹಿಸಿಕೊಂಡು ಬಂದಿದ್ದೇವೆ. ನಮ್ಮದೇ ಊರಿನ ದೇವಸ್ಥಾನಕ್ಕೆ ನಮಗೆ ಪ್ರವೇಶವಿಲ್ಲ. ಸಾರ್ವಜನಿಕ ಹೋಟೆಲ್‌ಗಳಿಗೆ ಹೋದರೆ ಗೌರವ ಸಿಗಲ್ಲ. ನಾವೂ ಸಹ ಈ ದೇಶದ ಪ್ರಜೆಗಳು, ನಮಗೂ ಸಮಾಜದಲ್ಲಿ ಗೌರವದಿಂದ ಬಾಳುವ ಹಕ್ಕಿದೆ. ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಹಿರಿಯ ಅಧಿಕಾರಿಗಳು ತಕ್ಷಣವೇ ನಮ್ಮ ಸೂಗೂರು ಗ್ರಾಮಕ್ಕೆ ಭೇಟಿ ನೀಡಬೇಕು. ನಮ್ಮ ಅಹವಾಲುಗಳನ್ನು ಆಲಿಸಿ ನಮಗೆ ರಕ್ಷಣೆ ಮತ್ತು ಸಮಾನ ಹಕ್ಕು ಒದಗಿಸಬೇಕು.**
> **ರಾಮಪ್ಪ ಕೋರೆ, ಸೂಗೂರು ಗ್ರಾಮದ ಸಂತ್ರಸ್ತ ನಿವಾಸಿ**

ಕ್ಷಯ ಮುಕ್ತ ಭಾರತ ನಿರ್ಮಾಣ ಸಾರ್ವಜನಿಕ ಜವಾಬ್ದಾರಿಯಾಗಲಿ.. ಡಾ. ಬಿಂದುಶ್ರೀ

- **ಉದಯವಾಹಿನಿ, ಚಿತ್ರದುರ್ಗ:**

ನಿಗದಿತ ಅವಧಿಯ ಚಿಕಿತ್ಸೆಯಿಂದ ಕ್ಷಯರೋಗವನ್ನು ಗುಣಪಡಿಸಬಹುದು, ಕ್ಷಯ ಮುಕ್ತ ಭಾರತದ ನಿರ್ಮಾಣ ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಲಿ ಎಂದು ಗೋಪನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂದು ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದರು.

ದಿನಾಂಕ 27-10-26 ರಿಂದ ದಿ. 08-10-26 ರವರೆಗೆ ಜಿಲ್ಲೆಯಾದ್ಯಂತ ಕ್ಷಯರೋಗ ಪತ್ತೆ ಹಚ್ಚುವ ಕಾರ್ಯಕ್ರಮ ನಡೆಯುತ್ತಿದ್ದು ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಕ್ಷಯರೋಗ ಪತ್ತೆ ಚಿಕಿತ್ಸೆ ಉಚಿತ, ನಿಗದಿತ ಅವಧಿಯ ಚಿಕಿತ್ಸೆಯಿಂದ ಕ್ಷಯ ರೋಗವನ್ನು ಗುಣಪಡಿಸಬಹುದು ಸರ್ಕಾರದಿಂದ ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ ಎಲ್ಲರೂ ಒಗ್ಗೂಡಿ ಕ್ಷಯರೋಗದ ವಿರುದ್ಧ ಹೋರಾಟ ನಡೆಸಿ ಚಿತ್ರದುರ್ಗ ಜಿಲ್ಲೆಯನ್ನ ಕ್ಷಯ ಮುಕ್ತ ಜಿಲ್ಲೆಯನ್ನಾಗಿ ಸೋಣ ಎಂದರು. ಚಿಕಿತ್ಸೆ ಪೂರ್ಣಗೊಳ್ಳುವವರೆಗೆ ಪೌಷ್ಟಿಕ ಆಹಾರಕ್ಕಾಗಿ ಮಾಸಿಕ ರೂ ಒಂದು ಸಾವಿರ ಹಣವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ಸರ್ಕಾರದಿಂದ ಜಮಾ ಮಾಡಲಾಗುತ್ತದೆ ಎಂದರು.

ಉದಯವಾಹಿನಿ ಚಿತ್ರ

ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ ಡಿ ಮಾತನಾಡಿ ಎರಡು ವಾರಕ್ಕಿಂತ ಹೆಚ್ಚು ಕೆಮ್ಮು ರಾತ್ರಿ ವೇಳೆ ಜ್ವರ ಬೆವರುವುದು ಹಸಿವಾಗದಿರುವುದು ತೂಕ ಇಳಿಕೆ ಕಫದಲ್ಲಿ ರಕ್ತ ಈ ಲಕ್ಷಣಗಳ ಕಂಡುಬಂದಲ್ಲಿ ತಪ್ಪದೇ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಫ ಪರೀಕ್ಷೆ ಮಾಡಿಸಿಕೊಳ್ಳಿ ಶೀಘ್ರ ಪ್ರಕರಣ ಪತ್ತೆ ತ್ವರಿತ ಚಿಕಿತ್ಸೆ ನೀಡುವುದರಿಂದ ನಾವು ಟಿಬಿಯನ್ನು ಕೊನೆಗಾಣಿಸಬಹುದು. ಕ್ಷಯರೋಗ ಪತ್ತೆ ಹಚ್ಚುವ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರು ನಿಮ್ಮ ಮನೆ ಬಾಗಿಲಿಗೆ ಬಂದು ಕ್ಷಯರೋಗದ ಲಕ್ಷಣಗಳು ಕಂಡು ಬಂದಲ್ಲಿ ಕಫ ಪರೀಕ್ಷೆ ಮಾಡಿಸಿ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ. ಮಾನ್ಯ ಪ್ರಧಾನ ಮಂತ್ರಿಗಳು ನಿಕ್ಷಯ ಮಿತ್ರ ಯೋಜನೆ ಅಡಿಯಲ್ಲಿ ಟಿಬಿ ಪ್ರಕರಣಗಳಿಗೆ ಪೌಷ್ಟಿಕ ಪೂರಕ ಆಹಾರ ಮತ್ತು ಪರೀಕ್ಷೆಗಳಿಗೆ ದಾನಿಗಳನ್ನು ಆಹ್ವಾನಿಸಿದ್ದಾರೆ.

ಆರರಿಂದ ಎಂಟು ತಿಂಗಳ ಕಾಲ ಟಿಬಿ ರೋಗಿಗಳನ್ನ ದತ್ತು ಪಡೆದು ಪೌಷ್ಟಿಕ ಪೂರಕ ಆಹಾರಗಳನ್ನು ದಾನದ ರೂಪದಲ್ಲಿ ನೀಡಬಹುದಾಗಿದೆ ತಮ್ಮ ಹೆಸರನ್ನು ನಿಕ್ಷಯ ಮಿತ್ರ ಯೋಜನೆಯ ವೆಬ್ ಪೋರ್ಟಲ್ ನಲ್ಲಿ ನೋಂದಾಯಿಸಲಾಗುತ್ತದೆ ನೋಂದಾವಣೆ ಮಾಡಿದವರಿಗೆ ಕೇಂದ್ರ ಸರ್ಕಾರದ್ದಿಂದ ಪ್ರಶಂಸನ ಪತ್ರವನ್ನು ನೀಡಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ. ಬಿಂದುಶ್ರೀ, ಆರೋಗ್ಯ ನಿರೀಕ್ಷಣಾಧಿಕಾರಿ ಮಹೇಶ, ಪ್ರಯೋಗ ಶಾಲಾ ತಂತ್ರಜ್ಞ ಅಧಿಕಾರಿಗಳಾದ ತಿಪ್ಪೇಸ್ವಾಮಿ, ಫಾರ್ಮಸಿ ಅಧಿಕಾರಿಗಳಾದ ಶಂಕರ್, ಪ್ರಾಥಮಿಕ ಆರೋಗ್ಯ ಸುರಕ್ಷಿತ ಅಧಿಕಾರಿಗಳಾದ ಅಶ್ವಿನಿ, ವಿಶಾಲಕ್ಷಿ, ಲಕ್ಷ್ಮೀದೇವಿ, ಸಮುದಾಯ ಆರೋಗ್ಯ ಅಧಿಕಾರಿ ಮಮತ ಹಾಗೂ ಇತರರು ಭಾಗವಹಿಸಿದ್ದರು.

ಕೈದಿಗಳ ಸಂಬಂಧಿಕರಿಗೆ ಕುಡಿಯುವ ನೀರಿಲ್ಲ, ನೆರಳೂ ಇಲ್ಲ!

- **ಉದಯವಾಹಿನಿ, ಜಮಖಂಡಿ:**

ಜಮಖಂಡಿ ಉಪ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳನ್ನು ಭೇಟಿಯಾಗಲು ಬರುವ ಸಂಬಂಧಿಕರಿಗೆ ಕನಿಷ್ಠ ಮೂಲಭೂತ ಸೌಕರ್ಯಗಳೂ ಇಲ್ಲವೇ? ಕುಡಿಯುವ ನೀರಿನ ವ್ಯವಸ್ಥೆಯಿಲ್ಲ, ಕುಳಿತುಕೊಳ್ಳಲು ನೆರಳಿನ ವ್ಯವಸ್ಥೆಯಿಲ್ಲ! ಗಂಟೆಗಟ್ಟಲೆ ಬಿಸಿಲಿನಲ್ಲಿ ಕುಳಿತು ಕಾಯಬೇಕಾದ ದುಸ್ಥಿತಿ ಎದುರಾಗಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ತಮ್ಮ ಕುಟುಂಬದ ಸದಸ್ಯರನ್ನು ಭೇಟಿಯಾಗಲು ದೂರದ ಊರುಗಳಿಂದ ಬರುವ ಸಂಬಂಧಿಕರು, ಮಹಿಳೆಯರು, ವೃದ್ಧರು ಬಿಸಿಲಿನ ತಾಪಕ್ಕೆ ತುತ್ತಾಗಿ ಪರದಾಡುವಂತಾಗಿದೆ. ಕೈದಿಗಳನ್ನು ಭೇಟಿಯಾಗಲು ಬರುವ ಜನರಿಗೆ ಕುಡಿಯುವ ನೀರು ಹಾಗೂ ನೆರಳಿನ ವ್ಯವಸ್ಥೆ ಕಲ್ಪಿಸುವುದು ಇಷ್ಟೊಂದು ಕಷ್ಟವೇ? ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡಿದೆ. ಕಾರಾಗೃಹಕ್ಕೆ ಕೈದಿಗಳನ್ನು ಭೇಟಿಯಾಗಲು ಬರುವವರು ಮನುಷ್ಯರಲ್ಲವೇ? ಅವರಿಗೆ ಕನಿಷ್ಠ ಕುಡಿಯುವ ನೀರು ಮತ್ತು ನೆರಳಿನ ವ್ಯವಸ್ಥೆ ಕಲ್ಪಿಸುವ ಜವಾಬ್ದಾರಿ ಯಾರದ್ದು? ಎಂಬ ಪ್ರಶ್ನೆ ಇದೀಗ ಸಾರ್ವಜನಿಕರಿಂದ ಕೇಳಿಬರುತ್ತಿದೆ.

ಕಾರಾಗೃಹದ ಆಡಳಿತ ಮಂಡಳಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಕೇವಲ ಆಡಳಿತ ನಡೆಸುವುದಷ್ಟೇ ಅಲ್ಲ, ಸಾರ್ವಜನಿಕರಿಗೆ ಕನಿಷ್ಠ ಮಾನವೀಯ ಸೌಲಭ್ಯಗಳನ್ನು ಒದಗಿಸುವುದೂ ಆಡಳಿತದ ಜವಾಬ್ದಾರಿಯಾಗಿದೆ. ಜಮಖಂಡಿ ಉಪ ಕಾರಾಗೃಹದಲ್ಲಿ ಕೈದಿಗಳನ್ನು ಭೇಟಿಯಾಗಲು ಬರುವ ಸಂಬಂಧಿಕರಿಗೆ ತಕ್ಷಣ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ಆಸನ ವ್ಯವಸ್ಥೆ ಹಾಗೂ ಸೂಕ್ತ ಕಾಯುವ ಸ್ಥಳ ಕಲ್ಪಿಸಬೇಕು. ಜನರು ಗಂಟೆಗಟ್ಟಲೆ ಬಿಸಿಲಿನಲ್ಲಿ ನಿಂತು ಅಥವಾ ಕುಳಿತು ಸಂಕಷ್ಟ ಅನುಭವಿಸುವ ಪರಿಸ್ಥಿತಿಗೆ ಶಾಶ್ವತ ಪರಿಹಾರ ಒದಗಿಸಬೇಕು.

ಅಗ್ರಿಗೋಲ್ಡ್ ವಂಚನೆ ಸಂತ್ರಸ್ತರು, ದಿನಕ್ಕೆ 150 ಟೋಕನ್ ವಿತರಣೆ

- **ಉದಯವಾಹಿನಿ, ಉಡುಪಿ**

ಕೋಟ್ಯಂತರ ರೂಪಾಯಿ ಅಗ್ರಿಗೋಲ್ಡ್ ಹೂಡಿಕೆ ವಂಚನೆ ಪ್ರಕರಣದ ಸಂತ್ರಸ್ತರು, ತಮ್ಮ ಹಣ ಮರಳಿಸಲಾಗುತ್ತಿದೆ ಎಂಬ ವದಂತಿಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕರ (ಎಸ್‌ಪಿ) ಕಚೇರಿಗೆ ನೂರಾರು ಸಂಖ್ಯೆಯಲ್ಲಿ ಆಗಮಿಸಿದ್ದಾರೆ. ಆಂಧ್ರಪ್ರದೇಶ ಮೂಲದ ಅಗ್ರಿಗೋಲ್ಡ್ ಕಂಪನಿಯಲ್ಲಿ ಹೂಡಿಕೆ ಮಾಡಿ ಹಣ ಕಳೆದುಕೊಂಡ ಗ್ರಾಹಕರಿಂದ ಪೊಲೀಸರು ದಾಖಲೆಗಳನ್ನು ಸಂಗ್ರಹಿಸುತ್ತಿದ್ದಾರೆ. ದಾಖಲೆಗಳ ಸಂಗ್ರಹ ಮತ್ತು ಪರಿಶೀಲನೆಗಾಗಿ ದಿನಕ್ಕೆ ಕೇವಲ 150 ಗ್ರಾಹಕರಿಗೆ ಮಾತ್ರ ಟೋಕನ್ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆದರೆ, ಹಣ ಮರುಪಾವತಿಯಾಗಬಹುದು ಎಂಬ ವದಂತಿಗಳಿಂದಾಗಿ ಇದ್ದಕ್ಕಿದ್ದಂತೆ ನೂಕುನುಗ್ಗಲು ಉಂಟಾಯಿತು. ತಮ್ಮ ಹೂಡಿಕೆಯ ಹಣವನ್ನು ಮರಳಿ ಪಡೆಯುವ ನಿರೀಕ್ಷೆಯೊಂದಿಗೆ ನೂರಾರು ಸಂತ್ರಸ್ತರು, ಅದರಲ್ಲೂ ವಿಶೇಷವಾಗಿ ಮಹಿಳೆಯರು, ಎಸ್‌ಪಿ ಕಚೇರಿಗೆ ಆಗಮಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದ್ದರಿಂದ ಗೊಂದಲ ಉಂಟಾಯಿತು ಮತ್ತು ಟೋಕನ್‌ಗಳಿಗಾಗಿ ತಳ್ಳಾಟ ನಡೆಯಿತು. ಈ ವೇಳೆ ಹಲವು ಮಹಿಳೆಯರು ತಮಗೂ ಅವಕಾಶ ನೀಡುವಂತೆ ಪೊಲೀಸರಲ್ಲಿ ಮನವಿ ಮಾಡಿದರು. ಪೊಲೀಸರು ಜನಸಂದಣಿಯನ್ನು ಸಮಾಧಾನಪಡಿಸಲು ಮತ್ತು ದಾಖಲೆ ಸಂಗ್ರಹ ಪ್ರಕ್ರಿಯೆಯನ್ನು ವಿವರಿಸಲು ಯತ್ನಿಸಿದರು. ಈ ವಂಚನೆಯಿಂದ ಸಂತ್ರಸ್ತರಾದವರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಮತ್ತು ಅನೇಕರು ತಮ್ಮ ಹೂಡಿಕೆಯನ್ನು ಮರಳಿ ಪಡೆಯುವ ಭರವಸೆಯಲ್ಲಿ ಕಚೇರಿಗೆ ಭೇಟಿ ನೀಡುತ್ತಿದ್ದಾರೆ. ಈ ಗದ್ದಲ ಹಣ ಹಿಂತಿರುಗಿಸುವ ವದಂತಿಗಳಿಂದ ಉಂಟಾಗಿದ್ದು, ಸಂತ್ರಸ್ತರ ಮಧ್ಯೆ ಗೊಂದಲ ಮೂಡಿಸಿದೆ. ಆದರೆ, ಈ ವದಂತಿಗಳನ್ನು ಹಣ ಹಿಂತಿರುಗಿಸಲಾಗುತ್ತದೆ ಎಂಬುದಕ್ಕೆ ಖಚಿತಪಡಿಕೆ ಎಂದು ಪರಿಗಣಿಸಬಾರದು.

ಮೂರು ತಿಂಗಳ ಧರಣಿ ಬಳಿಕ ಚಿಕ್ಕಲಕಿ ಕ್ರಾಸ್‌ನಲ್ಲಿ ರಸ್ತೆ ತಡೆದು ರೈತರ ಆಕ್ರೋಶ

- **ಉದಯವಾಹಿನಿ, ಜಮಖಂಡಿ, :**

ಕಳೆದ 14 ವರ್ಷಗಳಿಂದ ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿರುವ ಎಕ್ಕಲಮಟ್ಟಿ ಏತ ನೀರಾವರಿ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಆಗ್ರಹಿಸಿ ರೈತರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಮೂರು ತಿಂಗಳು ಪೂರೈಸಿದೆ. ಆದರೂ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸದ ಹಿನ್ನೆಲೆಯಲ್ಲಿ ಚಿಕ್ಕಲಕಿ ಕ್ರಾಸ್‌ನಲ್ಲಿ ರಸ್ತೆ ತಡೆದು ರೈತರು ಪ್ರತಿಭಟನೆ ನಡೆಸಿದರು.

2012-13ನೇ ಸಾಲಿನಲ್ಲಿ ಸುಮಾರು 48 ಕೋಟಿ ಅನುದಾನದಲ್ಲಿ ಆರಂಭಿಸಲಾದ ಈ ಯೋಜನೆಗೆ ಅಂದಿನ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಜಗದೀಶ ಶೆಟ್ಟರ್ ಶಂಕುಸ್ಥಾಪನೆ ನೆರವೇರಿಸಿದ್ದರು. ಸುತ್ತಮುತ್ತಲಿನ ಗ್ರಾಮಗಳ ಸುಮಾರು 5,000 ಎಕರೆ ಕೃಷಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತು. ಆದರೆ, 14 ವರ್ಷಗಳು ಕಳೆದರೂ ಯೋಜನೆ ಪೂರ್ಣಗೊಳ್ಳದಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಉದಯವಾಹಿನಿ ಚಿತ್ರ

ಯೋಜನೆಯ ಶೇ.99ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಕೇವಲ ಶೇ.1ರಷ್ಟು ಕಾಮಗಾರಿ ಬಾಕಿಯಿದೆ. ತಾಂತ್ರಿಕ ತೊಂದರೆಯಿಂದ ಸುಮಾರು 418 ಮೀಟರ್ ಕಾಲುವೆ ನಿರ್ಮಾಣ ಕಾರ್ಯ ಸ್ಥಗಿತಗೊಂಡಿದೆ. ಈ ಅಲ್ಪ ಪ್ರಮಾಣದ ಕಾಮಗಾರಿ ಪೂರ್ಣಗೊಳ್ಳದ ಕಾರಣ ಇಡೀ ಯೋಜನೆಯ ಪ್ರಯೋಜನ ರೈತರಿಗೆ ದೊರೆಯುತ್ತಿಲ್ಲ ಎಂದು ಹೋರಾಟಗಾರರು ಆರೋಪಿಸಿದರು. ರೈತರಾದ ಶರಣಪ್ಪ ಕರಜಿ ಹಾಗೂ ಸುನೀಲ ಕದಮ್ ಮಾತನಾಡಿ, ಸಣ್ಣ ನೀರಾವರಿ ಇಲಾಖೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿಳಂಬ ನೀತಿಯಿಂದಾಗಿ ಯೋಜನೆ ಪೂರ್ಣಗೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಯೋಜನೆ ಪೂರ್ಣಗೊಳಿಸುವಂತೆ ಈಗಾಗಲೇ ಆರು ಬಾರಿ ಸತ್ಯಾಗ್ರಹ ನಡೆಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಬಾಕಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

> **ಯೋಜನೆ ಪೂರ್ಣಗೊಂಡರೆ ಎಕ್ಕಲಮಟ್ಟಿ, ತೊದಲಬಾಗಿ, ಚಿಕ್ಕಲಕಿ ಹಾಗೂ ಜನವಾಡ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರೆಯಲಿದೆ. ಆದರೆ, ಇಂದಿಗೂ ಜಮೀನುಗಳಿಗೆ ನೀರು ಹರಿಯದಿರುವುದರಿಂದ ರೈತರು ಸಂಕಷ್ಟ ಎದುರಿಸುವಂತಾಗಿದೆ.**

ಎನ್‌ಡಿಎ ಗೆಲುವು ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆ

- **ಉದಯವಾಹಿನಿ, ಬೀದರ್:**

ಉದಯವಾಹಿನಿ ಚಿತ್ರ

ಕರ್ನಾಟಕ ವಿಧಾನಪರಿಷತ್ತಿನ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳ ನಾಲ್ಕೂ ಸ್ಥಾನಗಳಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಜಯಗಳಿಸಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತ ಮತ್ತು ದ್ವೇಷ ರಾಜಕಾರಣಕ್ಕೆ ಶಿಕ್ಷಿತ ಮತದಾರರು ನೀಡಿದ ತಕ್ಕ ಉತ್ತರವಾಗಿದೆ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಹೇಳಿದ್ದಾರೆ.ವಿಧಾನಪರಿಷತ್ತಿನ ನಾಲ್ಕೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ ಎನ್‌ಡಿಎ ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿರುವ ಅವರು, ಮೈತ್ರಿಕೂಟವನ್ನು ಬೆಂಬಲಿಸಿ ಆಶೀರ್ವದಿಸಿದ ಪದವೀಧರರು ಹಾಗೂ ಶಿಕ್ಷಕ ಮತದಾರರಿಗೆ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ಪರಿಕಲ್ಪನೆ ಹಾಗೂ ಸಮರ್ಥ ನಾಯಕತ್ವಕ್ಕೆ ಶಿಕ್ಷಿತ ಸಮಾಜ ನೀಡಿರುವ ಬೆಂಬಲವೇ ಈ ಐತಿಹಾಸಿಕ ಗೆಲುವು. ನಾಲ್ಕೂ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಮತದಾರರು ಪ್ರಧಾನಿ ಮೋದಿ ಅವರ ನಾಯಕತ್ವದ ಮೇಲೆ ಮತ್ತೊಮ್ಮೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಅಪಪ್ರಚಾರ, ಭ್ರಷ್ಟಾಚಾರ ಹಾಗೂ ಸಾಂವಿಧಾನಿಕ ಸಂಸ್ಥೆಗಳ ಮೇಲಿನ ಅನಗತ್ಯ ದಾಳಿಗಳಿಗೆ ಪದವೀಧರರು ಮತ್ತು ಶಿಕ್ಷಕರು ಚುನಾವಣೆಯ ಮೂಲಕ ತಕ್ಕ ಉತ್ತರ ನೀಡಿದ್ದಾರೆ. ಈ ಫಲಿತಾಂಶ ಕೇವಲ ವಿಧಾನಪರಿಷತ್ ಚುನಾವಣೆಗೆ ಸೀಮಿತವಾಗದೆ, ಮುಂಬರುವ ಎಲ್ಲಾ ಚುನಾವಣೆಗಳಿಗೂ ದಿಕ್ಸೂಚಿಯಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಚಿಮ್ಮನಚೋಡ ಸಂಪೂರ್ಣ ಬಂದ್ ಯಶಸ್ವಿ

ನಾಗರಾಳ ಜಲಾಶಯ ನೀರು ಮುಲ್ಲಾಮಾರಿ ನದಿಗೆ ಹರಿಸುವಂತೆ ಒತ್ತಾಯಿಸಿ ರೈತರಿಂದ ಬೃಹತ್ ಪ್ರತಿಭಟನೆ

- **ಉದಯವಾಹಿನಿ,ಚಿಂಚೋಳಿ:**

ತಾಲ್ಲೂಕಿನ ನಾಗರಾಳ ಜಲಾಶಯದಿಂದ ಮುಲ್ಲಾಮಾರಿ ನದಿಗೆ ತಕ್ಷಣ ನೀರು ಬಿಡಬೇಕು ಹಾಗೂ ಚಿಮ್ಮನಚೋಡ ಗ್ರಾಮದ ವಿವಿಧ ಮೂಲಭೂತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಚಿಮ್ಮಾನಚೋಡ ಸ್ಥಳೀಯ ರೈತರು ಮತ್ತು ಸಾರ್ವಜನಿಕರು ಚಿಮ್ಮನಚೋಡ ಗ್ರಾಮವನ್ನು ಸಂಪೂರ್ಣ ಬಂದ್ ಮಾಡಿ,ಬೃಹತ್ ರಸ್ತೆ ತಡೆ ಚಳವಳಿ ನಡೆಸಿದರು. ತದನಂತರ ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.ಬೆಳಿಗ್ಗೆಯಿಂದಲೇ ವ್ಯಾಪಾರ-ವಹಿವಾಟು ಅಂಗಡಿ ಮುಂಗಟ್ಟುಗಳು ಸಂಪೂರ್ಣವಾಗಿ ಸ್ಥಗಿತಗೊಳಿಸಿ ಬೆಂಬಲ ಸೂಚಿಸಿದ ಗ್ರಾಮಸ್ಥರು ಹಾಗೂ ನೂರಾರು ರೈತರು ಚಿಮ್ಮನಚೋಡ ಗ್ರಾಮದ ಅಂಬಿಗರ ಚೌಡಯ್ಯ ವೃತ್ತದಲ್ಲಿ ರೈತರು ಜಮಾಯಿಸಿ ರಸ್ತೆ ತಡೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಮಾತನಾಡಿದ ಹೋರಾಟಗಾರರು ಧನಕರುಗಳಿಗೆ ಸಾರ್ವಜನಿಕರಿಗೆ ಕುಡಿಯಲು ನೀರಿಲ್ಲ,ಬೋರವೇಲ್ ಬತ್ತಿ ಹೋಗುತ್ತಿವೆ,ಭಾವಿಗಳಲ್ಲಿ ನೀರಿಲ್ಲ,ಮಳೆಯಿಲ್ಲದೆ ರೈತರ ಬೆಳೆಗಳು ಸಂಪೂರ್ಣ ಒಣಗಿವೆ ಎಂದು ಅಳಲು ತೋಡಿಕೊಂಡರು.ಚಿಮ್ಮಾನಚೋಡ ಗ್ರಾಮದಲ್ಲಿ ಕುಡಿಯಲು ನೀರಿಲ್ಲವೆಂದು ಅನೇಕ ಬಾರಿ ಪಿಡಿಒ ತಾಪಂ ಇಓ ಅವರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ,ಜೆಜೆಎಂ ಕಾಮಗಾರಿ ಸಂಪೂರ್ಣ ಕಳಪೆ ಹಾಗೂ ನಾಲ್ಕು ವರ್ಷ ಕಳೆದರೂ ಕಾಮಗಾರಿ ಪೂರ್ಣವಿಲ್ಲ ಎಂದು ಪಿಡಿಒ ವಿರುದ್ಧ ಗ್ರಾಮಸ್ಥರು ತಯ್ಯಾಬ್ ಅಲಿ ಮೀರ್,ದಶರಥತಾಹೇರ್ ಸೌದಾಗಾರ,ತಾಜೋದ್ದಿನ್ ನಾಯ್ಕೋಡಿ,ರಾಮರೆಡ್ಡಿ ಪಾಟೀಲ,ಅಸಮಾಧಾನ ವ್ಯಕ್ತಪಡಿಸಿದ್ದರು.ರಸ್ತೆ ತಡೆಯಿಂದಾಗಿ ತಾಲ್ಲೂಕಿನ ಪ್ರಮುಖ ಮಾರ್ಗಗಳಲ್ಲಿ ಕೆಲಕಾಲ ವಾಹನ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತು.ಬೃಹತ್ ಪ್ರತಿಭಟನೆಯಲ್ಲಿ ಚಿಮ್ಮನಚೋಡ ಮಾತ್ರವಲ್ಲದೆ ನರನಾಳ,ನಾಗರಾಳ,ಕನಕಪುರ,ತಾಜಲಾಪೂರ,ಗೌಡನಹಳ್ಳಿ,ದೋಟಿಕೋಳ,ಗಾರಂಪಳ್ಳಿಸೇರಿದಂತೆ ಸುತ್ತಮುತ್ತಲಿನ ವಿವಿಧ ಗ್ರಾಮಗಳ ತಾಂಡಾಗಳ ನೂರಾರು ರೈತರು ಭಾಗವಹಿಸಿ ತಮ್ಮ ಬೆಂಬಲ ವ್ಯಕ್ತಪಡಿಸಿದರು.**ನದಿಪಾತ್ರದ ಗ್ರಾಮಗಳಲ್ಲಿ ನೀರಿನ ಹಾಹಾಕಾರ:** ಮುಲ್ಲಾಮಾರಿ ನದಿ ಪಾತ್ರದ ಗ್ರಾಮಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿದ್ದು ಜನ-ಜಾನುವಾರುಗಳು ಹನಿ ನೀರಿಗೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಹೇಗಾದರೂ ಮಾಡಿ ಮುಲ್ಲಾಮಾರಿ ನದಿಗೆ ನೀರು ಬಿಡಬೇಕು ಎಂದು ಮಲ್ಲು ಕೊಡಂಬಲ್ ಒತ್ತಾಯಿಸಿದರು. ನದಿಯಲ್ಲಿ ನೀರಿಲ್ಲದೆ ಜನಸಾಮಾನ್ಯರು ಬಟ್ಟೆ ಒಗೆಯಲು,ಧನಕರುಗಳಿಗೆ ಕುಡಿಯಲು ನೀರಿಲ್ಲದೆ ಹಾಗೂ ಬೋರವೇಲ್ ಗಳಲ್ಲಿ ನೀರು ಬತ್ತಿ ಹೋಗಿವೆ ಇದರಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಬಂಡಾರೆಡ್ಡಿ ಹೇಳಿದರು.ಶರಣರೆಡ್ಡಿ ಮೊಗಲಪ್ಪನೋರ ಮಾತನಾಡಿ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.ಚಿಮ್ಮನಚೋಡ ಗ್ರಾಮಕ್ಕೆ ನೀರು ಬಿಡುತ್ತೇವೆ ಎಂದು ಹೇಳಿ,ಇಲ್ಲ ನೀರು ಬಿಡಲು ಆಗುವುದಿಲ್ಲ ಎಂದು ಹೇಳಿ ನಮ್ಮ ಗ್ರಾಮದಲ್ಲಿ ಬಾವಿ ಹಾಗೂ ಬೋರ್‌ವೆಲ್‌ಗಳು ಸಂಪೂರ್ಣವಾಗಿ ಬತ್ತಿ ಹೋಗಿದ್ದು ಕುಡಿಯುವ ನೀರಿಗೆ ತೀವ್ರ ಹಾಹಾಕಾರ ಉಂಟಾಗಿದೆ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸೂಕ್ತ ತೀರ್ಮಾನ ಕೈಗೊಂಡು,ನೀರು ಪೂರೈಸುವ ಸ್ಪಷ್ಟ ಭರವಸೆ ನೀಡಬೇಕು ಎಂದು ಅವರು ಕಟ್ಟುನಿಟ್ಟಾಗಿ ಆಗ್ರಹಿಸಿದರು. ಚಿಮ್ಮನಚೋಡ ಜಲಾಶಯದಿಂದ ನದಿಗೆ ನೀರು ಬಿಟ್ಟರೆ ನದಿ ದಂಡೆಯಲ್ಲಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಅನುಕೂಲ ಆಗಲಿದೆ ಎಂದು ಗೋಪಾಲ ಎಂಪಿ ಹೇಳಿದರು.ಮಲ್ಲುಕೊಡಂಬಲ್, ಜಗನ್ನಾಥರೆಡ್ಡಿ,ಬಂಡಾರೆಡ್ಡಿ,ವೀರಭದ್ರಪ್ಪ ಮಲಕೂಡ ಗಾರಂಪಳ್ಳಿ,ಹಾಗೂ ಜಾವೀದ್ ಪಟೇಲ್ ನಾಗರಾಳ,ಮಹ್ಮುದ್ ನಾಯ್ಕೋಡಿ ಪ್ರತಿಭಟನೆಯಲ್ಲಿ ಮಾತನಾಡಿ ನದಿಗೆ ನೀರು ಬಿಡಲು ಮನವಿ ಮಾಡಿದರು.

ಉದಯವಾಹಿನಿ ಚಿತ್ರ

> **ಚಿಂಚೋಳಿ ತಾಲ್ಲೂಕಿನಲ್ಲಿ ಭೀಕರ ಬರಗಾಲದಿಂದ ತತ್ತರಿಸಿರುವ ಗ್ರಾಮಸ್ಥರಿಗೆ ಕುಡಿಯಲು ನೀರು ಸಿಗುತ್ತಿಲ್ಲ,ಈ ಕಠಿಣ ಪರಿಸ್ಥಿತಿಯಲ್ಲಿ ಅಧಿಕಾರಿಗಳಿಗೆ ಸಾರ್ವಜನಿಕರು ಮತ್ತು ರೈತರ ಸಹಕಾರ ತುಂಬಾ ಅಗತ್ಯವಾಗಿದೆ,ನಿಮ್ಮ ಸಮಸ್ಯೆಗೆ ಸರ್ಕಾರ ಖಂಡಿತ ಸ್ಪಷ್ಟವಾಗಿ ಸ್ಪಂದಿಸಲಿದೆ,ಈಗಾಗಲೇ ಬಹಳಷ್ಟು ಸಮಸ್ಯೆ ಆಗುತ್ತಿದ್ದು ನನ್ನ ಜೀವನದಲ್ಲಿಯೇ ಇಂತಹ ಭೀಕರ ಬರಗಾಲವನ್ನು ನಾನು ಕಂಡಿಲ್ಲ ಖಂಡಿತ ರೈತರ ಸಮಸ್ಯೆಗೆ ಪರಿಹಾರ ದೊರಕಲಿದೆ ಎಂದರು.-ತಾಲ್ಲೂಕಾ ಪಂಚಾಯತ್ ಇಒ ಸಂತೋಷ್ ಚವ್ಹಾಣ**

ತಹಸೀಲ್ದಾರ್ ಭರವಸೆ:-ನೀರು ಬಿಡುಗಡೆಗೆ ಕ್ರಮ:
ಸ್ಥಳಕ್ಕೆ ಆಗಮಿಸಿ ರೈತರಿಂದ ವಿವಿಧ ಬೇಡಿಕೆಗಳ ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಜಿಲ್ಲಾಧಿಕಾರಿಗಳು ಈಗಾಗಲೇ ತಾಲ್ಲೂಕಿನ ಸಂಪೂರ್ಣ ವರದಿ ಪಡೆದುಕೊಂಡು ಸಭೆ ನಡೆಸಿದ್ದಾರೆ,ಶೀಘ್ರದಲ್ಲೇ ಚಿಂಚೋಳಿ ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಭೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಪೂರ್ಣ ವರದಿ ಸಲ್ಲಿಸಲಾಗುವುದು. ನಿಮ್ಮ ಗ್ರಾಮಕ್ಕೆ ಮುಲ್ಲಾಮಾರಿ ನೀರಾವರಿ ಜಲಾಶಯದಿಂದ ನದಿಗೆ ನೀರು ಬಿಡಲಾಗುವುದು ಎಂದು ಭರವಸೆ ನೀಡಿದರು.


ಉದಯವಾಹಿನಿ ಚಿತ್ರ

ನಾಗರಾಳ ಜಲಾಶಯದಲ್ಲಿ ಶೇ.75ರಷ್ಟು ನೀರಿದೆ:- ನಾಗರಾಳ ಜಲಾಶಯ ಎಇಇ ಅಮೃತ್ ಪವ್ಹಾರ ಮಾತನಾಡಿ ಪ್ರಸ್ತುತ ಜಲಾಶಯದಲ್ಲಿ ಶೇಕಡಾ 75ರಷ್ಟು ನೀರಿನ ಪ್ರಮಾಣ ಲಭ್ಯವಿದೆ ಎಂದು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದರು.ಚಿಂಚೋಳಿ ಸಿಪಿಐ ಕಪಿಲದೇವ್ ಮತ್ತು ಪಿಎಸ್‌ಐ ಗಂಗಮ್ಮ ಜಿನಿಕೇರಿ ಅವರು ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅಹಿತಕರ ಘಟನೆಗಳು ಸಂಭವಿಸದೆ ಚಿಮ್ಮನಚೋಡ ಗ್ರಾಮ ಬಂದ್ ಹಾಗೂ ಪ್ರತಿಭಟನೆ ಸಂಪೂರ್ಣವಾಗಿ ಶಾಂತಿಯುತವಾಗಿ ಜರುಗಿತು.

ಮಿನಿ ನ್ಯೂಸ್

ಎಂಆರ್‌ಪಿಎಲ್‌ಗೆ ಎರಡು ರಾಷ್ಟ್ರೀಯ ಪ್ರಶಸ್ತಿ

- **ಉದಯವಾಹಿನಿ, ಮಂಗಳೂರು :**

ಒಎನ್‌ಜಿಸಿಯ ಅಂಗಸಂಸ್ಥೆ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ ಲಿಮಿಟೆಡ್ (ಎಂಆರ್‌ಪಿಎಲ್) ಸ್ವದೇಶಿ ತಂತ್ರಜ್ಞಾನ ಅಭಿವೃದ್ಧಿ ಹಾಗೂ ಸಂಸ್ಕರಣಾಗಾರದಲ್ಲಿನ ನಾವೀನ್ಯತೆಗಾಗಿ ಎರಡು ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಧೀನದಲ್ಲಿರುವ ಸೆಂಟರ್ ಫಾರ್ ಹೈ ಟೆಕ್ನಾಲಜಿ ವತಿಯಿಂದ ನೀಡಲಾಗುವ 2025-26ನೇ ಸಾಲಿನ ನಾವೀನ್ಯತೆ ಪ್ರಶಸ್ತಿಗಳಲ್ಲಿ ಎಂಆರ್‌ಪಿಎಲ್ ಸ್ವದೇಶಿ ತಂತ್ರಜ್ಞಾನ ಅಭಿವೃದ್ಧಿ ಮತ್ತು ಸಂಸ್ಕರಣಾಗಾರದಲ್ಲಿನ ಅತ್ಯುತ್ತಮ ನಾವೀನ್ಯತೆ ವಿಭಾಗಗಳಲ್ಲಿ ವಿಜೇತ ಸಂಸ್ಥೆಯಾಗಿ ಹೊರಹೊಮ್ಮಿದೆ. ಗೋವಾದ ಐಟಿಸಿ-ಒಎನ್‌ಜಿಸಿಯಲ್ಲಿ ನಡೆದ 29ನೇ ಇಂಧನ ತಂತ್ರಜ್ಞಾನ ಮತ್ತು ನಾವೀನ್ಯತೆ ಸಮಾವೇಶದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಅತ್ಯುತ್ತಮ ಸ್ವದೇಶಿ ತಂತ್ರಜ್ಞಾನ ಅಭಿವೃದ್ಧಿ, ಸಂಸ್ಕರಣಾಗಾರದಲ್ಲಿನ ಅತ್ಯುತ್ತಮ ನಾವೀನ್ಯತೆಗೆ ಈ ಪ್ರಶಸ್ತಿಗಳು ಲಭಿಸಿವೆ. ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆಗೆ ವೈಜ್ಞಾನಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಜಿ.ಡಿ.ಯಾದವ್ ನೇತೃತ್ವದ ಸಮಿತಿ ಚಾಲನೆ ನೀಡಿತ್ತು.

ಕಟಾವಿಗೆ ಬಂದಿದ್ದ 5 ಎಕರೆ ಕಬ್ಬು ಬೆಂಕಿಗೆ ಆಹುತಿಸೂಕ್ತ ಪರಿಹಾರಕ್ಕೆ ಆಗ್ರಹ

ಉದಯವಾಹಿನಿ ಚಿತ್ರ

- **ಉದಯವಾಹಿನಿ, ವಿಜಯಪುರ, :**

ಕಟಾವಿಗೆ ಬಂದಿದ್ದ ಐದು ಎಕರೆ ಪ್ರದೇಶದ ಕಬ್ಬಿನ ಬೆಳೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿಗಾಹುತಿಯಾದ ಘಟನೆ ನಿಡಗುಂದಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ನಡೆದಿದೆ.ಹೆಬ್ಬಾಳ ಗ್ರಾಮದ ರೈತ ಕಮಲಪ್ಪ ಪಟ್ಟಣಶೆಟ್ಟಿ ಅವರಿಗೆ ಸೇರಿದ ಜಮೀನಿನಲ್ಲಿ ಕಬ್ಬು ಬೆಳೆದಿದ್ದು, ಕಟಾವಿಗೆ ಸಿದ್ಧವಾಗಿತ್ತು. ಬುಧವಾರ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕಬ್ಬಿನ ಗದ್ದೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕ್ಷಣಾರ್ಧದಲ್ಲಿ ಬೆಂಕಿ ಇಡೀ ಜಮೀನಿಗೆ ವ್ಯಾಪಿಸಿದ್ದು, ಕಬ್ಬಿನ ಫಸಲು ಸುಟ್ಟು ಕರಕಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸಪಟ್ಟರು. ಆದರೆ ಬೆಂಕಿ ನಂದಿಸುವಷ್ಟರಲ್ಲಿ ಐದು ಎಕರೆ ಜಮೀನಿನಲ್ಲಿದ್ದ ಕಬ್ಬಿನ ಬಹುತೇಕ ಫಸಲು ಸಂಪೂರ್ಣ ಸುಟ್ಟುಹೋಗಿತ್ತು. ಸಾಲ ಮಾಡಿ ಕಬ್ಬು ಬೆಳೆದಿದ್ದ ರೈತ ಕಮಲಪ್ಪ ಪಟ್ಟಣಶೆಟ್ಟಿ, ಕಟಾವಿನ ಸಂದರ್ಭದಲ್ಲಿ ಬೆಳೆ ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಬೆಳೆ ನಷ್ಟದಿಂದ ರೈತನಿಗೆ ಭಾರಿ ಆರ್ಥಿಕ ಹೊರೆ ಉಂಟಾಗಿದೆ. ಘಟನಾ ಸ್ಥಳಕ್ಕೆ ಹೆಸ್ಕಾಂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಳೆ ನಷ್ಟವಾಗಿರುವ ಹಿನ್ನೆಲೆಯಲ್ಲಿ ಹೆಸ್ಕಾಂ ವತಿಯಿಂದ ರೈತನಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಮತೀಯ ಗಲಭೆಗಳು ಆಗದಂತೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕು

- **ಉದಯವಾಹಿನಿ, ಉಡುಪಿ, :**

ಶಿಕ್ಷಣ ಸಮಾಜದಲ್ಲಿ ಬದಲಾವಣೆ ತರುತ್ತದೆ. ಗುಣಮಟ್ಟದ ಶಿಕ್ಷಣವು ಜವಾಬ್ದಾರಿಯುತ ನಾಗರೀಕನಾಗಿಸುತ್ತದೆ. ಪ್ರತಿಯೊಬ್ಬರಿಗೂ ಶಿಕ್ಷಣವಂತರಾಗುವಂತೆ ನೋಡಿಕೊಳ್ಳಬೇಕೆಂದು ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಯು.ನಿಸಾರ್ ಅಹ್ಮದ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಶಿಕ್ಷಣ ಇಲ್ಲದಿದ್ದಲ್ಲಿ ರಾಜ್ಯ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಅಲ್ಪ ಸಂಖ್ಯಾತ ಸಮುದಾಯದಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ, ಬುದ್ಧ ಹಾಗೂ ಪಾರ್ಸಿ ಸಮುದಾಯಗಳು ಸೇರಿದಂತೆ ಯಾರೊಬ್ಬ ಮಕ್ಕಳು ಶಿಕ್ಷಣದಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದರು.

ಸರಕಾರಿ ಶಾಲೆಗಳಿಗೆ ನಿನ್ನೆ ಭೇಟಿ ನೀಡಿದ ಸಂದರ್ಭದಲ್ಲಿ ಮಕ್ಕಳ ಸಂಖ್ಯೆ 25 ರಿಂದ 30 ಕಂಡುಬಂದಿದೆ. ಸರಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸಲು ಗುಣಮಟ್ಟದ ಶಿಕ್ಷಣವನ್ನು ನೀಡಿದಲ್ಲಿ ಮಕ್ಕಳ ಸಂಖ್ಯೆ ಹೆಚ್ಚುತ್ತದೆ. ಇದಕ್ಕೆ ಒತ್ತು ನೀಡಬೇಕು. ಇದರ ಜೊತೆಯಲ್ಲಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಡಿ.ಡಿ.ಪಿ.ಐ ಸೇರಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ, ಪರಿಶೀಲಿಸಬೇಕು ಎಂದರು.

ಉದಯವಾಹಿನಿ ಚಿತ್ರ

31ರಂದು ಸರ್ದಾರ್ ಪಟೇಲ್ ಜಯಂತಿ, ಏಕತಾ ಪ್ರತಿಜ್ಞೆ

- **ಉದಯವಾಹಿನಿ, ಬೀದರ್:**

ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲರ 152ನೇ ಜಯಂತಿ ಹಾಗೂ 13ನೇ ರಾಷ್ಟ್ರೀಯ ಏಕತಾ ದಿವಸದ ಅಂಗವಾಗಿ ಅಕ್ಟೋಬರ್ 31ರಂದು ಬೀದರ್‌ನಲ್ಲಿ ರಾಷ್ಟ್ರೀಯ ಏಕತಾ ಪ್ರತಿಜ್ಞೆ ಸ್ವೀಕಾರ ಕಾರ್ಯಕ್ರಮ ಆಯೋಜಿಸಲಾಗಿದೆ.

ನಗರದ ಭಾರತ ರತ್ನ ಪೂಜ್ಯ ಬಾಬಾಸಾಹೇಬ ಅಂಬೇಡ್ಕರ್ ವೃತ್ತದಲ್ಲಿ ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ನಡೆಯಲಿದೆ ಎಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಷ್ಠಾನದ ಅಧ್ಯಕ್ಷ ಶಿವಶರಣಪ್ಪ ವಾಲಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಉದಯವಾಹಿನಿ ಚಿತ್ರ

ಪ್ರತಿಷ್ಠಾನವು ಕಳೆದ 27 ವರ್ಷಗಳಿಂದ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ವೋದಯ ನ್ಯಾಸ್, ಭಾರತ ಸೇವಾದಳ, ಭಾರತ ಸಂರಕ್ಷಣಾ ಸಮಿತಿ ಸೇರಿದಂತೆ ವಿವಿಧ ಸರ್ಕಾರಿ, ಅರೆ ಸರ್ಕಾರಿ ಹಾಗೂ ಸಾಮಾಜಿಕ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಸರ್ದಾರ್ ಪಟೇಲರ ಜಯಂತಿ ಮತ್ತು ರಾಷ್ಟ್ರೀಯ ಏಕತಾ ಪ್ರತಿಜ್ಞೆ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	10:30 ರಿಂದ 12:00
ಗುಳಿಕ ಕಾಲ	ಬೆಳಿಗ್ಗೆ	07:30 ರಿಂದ 09:00
ಯಮಗಂಡ ಕಾಲ	ಮಧ್ಯಾಹ್ನ	03:00 ರಿಂದ 04:30

ಮೇಷ ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ಕುಟುಂಬದ ಪರಿಸ್ಥಿತಿ ಇಂದು ನೀವು ಯೋಚಿಸುವ ಹಾಗೆ ಇರುವುದಿಲ್ಲ. ಇಂದು ಮನೆಯಲ್ಲಿ ಯಾವುದೇ ವಿಷಯದ ಬಗ್ಗೆ ಅಪಶ್ರುತಿ ಉಂಟಾಗುವ ಸಾಧ್ಯತೆ ಇದೆ.

ವೃಷಭ ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ – ಮನೋಲ್ಲಾಸ ಮತ್ತು ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು.

ಮಿಥುನ ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ತಮ್ಮ ಹಣವನ್ನು ಬೆಟ್ಟಿಂಗ್ ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ. ಬೆಟ್ಟಿಂಗ್‌ನಿಂದ ದೂರವಿರಲು ನಿಮಗೆ ಸೂಚಿಸಲಾಗಿದೆ.

ಕಟಕ ಗರ್ಭಿಣಿಯರಿಗೆ ವಿಶೇಷ ಕಾಳಜಿಯ ದಿನ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.

ಸಿಂಹ ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು.

ಕನ್ಯಾ ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಇಂದು ನಿಮಗೆ ಅನೇಕ ಹೊಸ ಆರ್ಥಿಕ ಯೋಜನೆಗಳು ದೊರಕುತ್ತವೆ – ಯಾವುದೇ ಬದ್ಧತೆಗೊಳಗಾಗುವ ಮುನ್ನ ಸಾಧಕ ಬಾಧಕಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ. ಸಕಾರಾತ್ಮಕವಾಗಿರುವ ಬೆಂಬಲ ನೀಡುವ ಸ್ನೇಹಿತರೊಂದಿಗೆ ಹೊರಗೆ ಹೋಗಿ.

ತುಲಾ ನಿಮ್ಮ ಉತ್ತಮ ಆರೋಗ್ಯದ ಸಲುವಾಗಿ ದೀರ್ಘ ನಡಿಗೆಗೆ ಹೋಗಿ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ. ಕುಟುಂಬ ಮತ್ತು ಸ್ನೇಹಿತರೊಂದಿಗೆ ಆಹ್ಲಾದಕರ ಸಮಯ ನಿಮ್ಮ ಗೆಳತಿಯ ಜೊತೆ ಅಸಭ್ಯವಾಗಿ ನಡೆದುಕೊಳ್ಳಬೇಡಿ.

ವೃಶ್ಚಿಕ ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ. ಒಂದು ಉತ್ತಮ ಸಂವಹನ ಅಥವಾ ನಿಮ್ಮ ಪ್ರೀತಿಪಾತ್ರರಿಂದ ಸಂಗಾತಿಯಿಂದ ಬರುವ ಸಂದೇಶ ಇಂದು ನಿಮ್ಮ ಸ್ಥೈರ್ಯವನ್ನು ಹೆಚ್ಚಿಸುತ್ತದೆ.

ಧನಸ್ಸು ಜಗಳಗಂಟ ವ್ಯಕ್ತಿಯೊಂದಿಗಿನ ನಿಮ್ಮ ಮೂಡ್ ಅನ್ನು ಹಾಳು ಮಾಡಬಹುದು. ಬುದ್ಧಿವಂತಿಕೆ ತೋರಿಸಿ ಮತ್ತು ಸಾಧ್ಯವಾದರೆ ವೈಷಮ್ಯಗಳನ್ನು ತಪ್ಪಿಸಿ, ಏಕೆಂದರೆ ಜಗಳಗಳು ಹಾಗೂ ವೈಷಮ್ಯಗಳು ಯಾವತ್ತೂ ನಿಮಗೆ ಸಹಾಯ ಮಾಡುವುದಿಲ್ಲ. ಬಯಸದೆ ಇರುವ ಯಾವುದೇ ಅತಿಥಿ ಇಂದು ನಿಮ್ಮ ಮನೆಗೆ ಬರಬಹುದು,

ಮಕರ ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಇಂದು ನಿಮಗೆ ಅನೇಕ ಹೊಸ ಆರ್ಥಿಕ ಯೋಜನೆಗಳು ದೊರಕುತ್ತವೆ – ಯಾವುದೇ ಬದ್ಧತೆಗೊಳಗಾಗುವ ಮುನ್ನ ಸಾಧಕ ಬಾಧಕಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.

ಕುಂಭ ನೀವು ಚೈತನ್ಯಯುಕ್ತವಾಗಿರುತ್ತೀರಿ ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ನೀವು ದೀರ್ಘಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ.

ಮೀನ ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಒಂದು ವೈವಾಹಿಕ ಸಂಬಂಧವನ್ನು ಹೊಂದಲು ಒಳ್ಳೆಯ ಸಮಯ. ಹಠಾತ್ ಪ್ರಣಯ ಪ್ರಸಂಗಗಳು ನಿಮ್ಮನ್ನು ಗೊಂದಲಕ್ಕೀಡು ಮಾಡಬಹುದು.

ಡಾ. ಪುನೀತ್ ರಾಜಕುಮಾರ್ ಪುಣ್ಯಸ್ಮರಣೆ: ಸರಳತೆ ಹಾಗೂ ಸಮಾಜ ಸೇವೆಯೇ ಅಪ್ಪುಗೆ ನಿಜವಾದ ನಮನ

ಉದಯವಾಹಿನಿ ಕೆಂಭಾವಿ:

ಪಟ್ಟಣದ ಅಪ್ಪು ಸರ್ಕಲ್‌ನಲ್ಲಿ ಕರುನಾಡಿನ ನೆಚ್ಚಿನ ನಟ, ದಿವಂಗತ ಡಾ. ಪುನೀತ್ ರಾಜಕುಮಾರ್ ಅವರ ಪುಣ್ಯಸ್ಮರಣೆಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ರಮೇಶ್ ಕೊಡಗಾನೂರು ಅವರು ಡಾ. ಪುನೀತ್ ರಾಜಕುಮಾರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಂಜುನಾಥ ಗುತ್ತೇದಾರ, ಅಪ್ಪು ಅವರು ಕೇವಲ ತೆರೆಯ ಮೇಲಿನ ನಾಯಕರಲ್ಲ, ಬಡವರ ಬಂಧುವಾಗಿ, ಅನಾಥರ ಪಾಲಿನ ಆಸರೆಯಾಗಿ ನೂರಾರು ಸಮಾಜಮುಖಿ ಕೆಲಸಗಳನ್ನು ಮಾಡುವ ಮೂಲಕ ತಮ್ಮ ಆದರ್ಶ ಜೀವನದಿಂದ ಎಲ್ಲರಿಗೂ ಮಾದರಿಯಾಗಿದ್ದಾರೆ. ಅವರ ಸರಳತೆ, ಮಾನವೀಯ ಮೌಲ್ಯಗಳು ಮತ್ತು ಸಮಾಜ ಸೇವೆಯ ಗುಣಗಳನ್ನು ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.


ಉದಯವಾಹಿನಿ ಚಿತ್ರ

ಪುಣ್ಯಸ್ಮರಣೆಯ ಅಂಗವಾಗಿ ಸಾರ್ವಜನಿಕರಿಗೆ ಹಾಗೂ ಅಭಿಮಾನಿಗಳಿಗೆ ಅನ್ನ ಸಂತರ್ಪಣೆಯನ್ನು ಹಮ್ಮಿಕೊಳ್ಳಲಾಯಿತು. ನೂರಾರು ಸಂಖ್ಯೆಯಲ್ಲಿ ಆಗಮಿಸಿದ ಸಾರ್ವಜನಿಕರು ಪ್ರಸಾದ ಸ್ವೀಕರಿಸಿ ಅಪ್ಪು ಅವರಿಗೆ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ರಮೇಶ ಕೊಡಗನೂರ,ಶಿವಪ್ಪ ಕಂಬಾರ,ಹಳ್ಳೆಪ್ಪ ಕವಲ್ದಾರ್ ಹಣಮಯ್ಯ ಕರಡಕಲ್,ಯಲ್ಲಪ್ಪ ಆರ್ ಬಾವಿಮನಿ,ಪರಶುರಾಮ ಎಸ್ ವಠಾರ,ದೇವಿಂದ್ರ ಃ ಕವಲ್ದಾರ್ ಅಭಿಷೇಕ್ ಗುತ್ತೇದಾರ,ಶರಣಯ್ಯ ಗುತ್ತೇದಾರ,ಸಂತೋಷ ಗುತ್ತೇದಾರ ರವಿಕುಮಾರ್ ಗುತ್ತೇದಾರ,ದಯಾನಂದ ಪತ್ತೇಪುರ, ಪರಶುರಾಮ ಹಾಗೂ ಸಿದ್ದಪ್ಪ ಹಾಗೂ ಪ್ರಮುಖರು, ಅಭಿಮಾನಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಅಪ್ಪು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವ ಅರ್ಪಿಸಿದರು.

ರೈತರಿಗಾಗಿ ಮನೆಯಿಂದ ಹೋಳಿಗೆ, ರೊಟ್ಟಿ ಹೊತ್ತು ತರುತ್ತಿರುವ ಮಹಿಳೆಯರು!

ಗುರ್ಲಾಪುರ ಕಬ್ಬು ಬೆಳೆಗಾರರ ಹೋರಾಟ ಕಬ್ಬು ಬೆಳೆಗಾರರ ಪ್ರತಿಭಟನೆ ಕಬ್ಬಿಗೆ ಎಂಎಸ್‌ಪಿ ದರ ನಿಗದಿ ಗುರ್ಲಾಪುರದಲ್ಲಿ ಕಬ್ಬು ಬೆಳೆಗಾರರ ಹೋರಾಟ

ಉದಯವಾಹಿನಿ ಚಿಕ್ಕೋಡಿ:

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರದ ಬಳಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಪ್ರತಿಭಟನೆ ಇದೀಗ ಬೃಹತ್ ಜಾತ್ರೆಯ ಸ್ವರೂಪ ಪಡೆದುಕೊಂಡಿದೆ. ಕಳೆದು ನಾಲ್ಕು ದಿನಗಳಿಂದ ಮುಧೋಳ ಹಾಗೂ ಚಿಕ್ಕೋಡಿ ರಾಜ್ಯ ಹೆದ್ದಾರಿಯನ್ನು ತಡೆಗಟ್ಟಿ ಪ್ರತಿಭಟನೆ ನಡೆಸುತ್ತಿರುವ ಸಾವಿರಾರು ರೈತರಿಗೆ ಪ್ರತಿನಿತ್ಯ ಮೃಷ್ಟಾನ್ನ ಭೋಜನದ ವ್ಯವಸ್ಥೆ ಮಾಡಲಾಗುತ್ತಿದೆ.

1 : ಅನ್ನದಾಸೋಹಕ್ಕೆ ಯಾವುದೇ ಕೊರತೆಯಾಗಿಲ್ಲ
2 : ಸುತ್ತಮುತ್ತಲಿನ ರೈತರು ಸಂಪೂರ್ಣ ಬೆಂಬಲ
3 : ಪ್ರತಿಭಟನಾ ಸ್ಥಳದಲ್ಲಿ ಊಟದ ವ್ಯವಸ್ಥೆ

ಪ್ರತಿಭಟನೆಯಲ್ಲಿ ದಿನೇ ದಿನೇ ರೈತರ ಸಂಖ್ಯೆ ಹೆಚ್ಚುತ್ತಿದ್ದರೂ, ಅನ್ನದಾಸೋಹಕ್ಕೆ ಯಾವುದೇ ಕೊರತೆಯಾಗಿಲ್ಲ. ಹೋರಾಟಕ್ಕೆ ಇಳಿದಿರುವ ರೈತರಿಗಾಗಿ ರೈತರೇ ಸ್ವಯಂ ಪ್ರೇರಿತರಾಗಿ ನಗದು, ದವಸ-ಧಾನ್ಯಗಳನ್ನು ತಂದು ಅಚ್ಚುಕಟ್ಟಾದ ಊಟದ ವ್ಯವಸ್ಥೆ

ಉದಯವಾಹಿನಿ ಚಿತ್ರ

ಮಾಡಿದ್ದಾರೆ. ಸ್ಥಳೀಯ ಗುರ್ಲಾಪುರ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ರೈತರು ಇದಕ್ಕೆ ಸಂಪೂರ್ಣ ಬೆಂಬಲ ನೀಡಿದ್ದಾರೆ. ಗುರ್ಲಾಪುರ ಕಬ್ಬು ಬೆಳೆಗಾರರ ಹೋರಾಟ ಕಬ್ಬು ಬೆಳೆಗಾರರ ಪ್ರತಿಭಟನೆ ಕಬ್ಬಿಗೆ ಎಂಎಸ್‌ಪಿ ದರ ನಿಗದಿ ಗುರ್ಲಾಪುರದಲ್ಲಿ ಕಬ್ಬು ಬೆಳೆಗಾರರ ಹೋರಾಟ ನಿತ್ಯ 40-50 ಕ್ವಿಂಟಾಲ್ ಅಕ್ಕಿ ಬಳಕೆ ಪ್ರತಿಭಟನಾ ಸ್ಥಳದಲ್ಲಿ ಊಟದ ವ್ಯವಸ್ಥೆಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ರೈತರೇ ಹೇಳುವಂತೆ, ಪ್ರತಿನಿತ್ಯ ಲಕ್ಷಾಂತರ

> ಶೇಂಗಾ ಹೋಳಿಗೆ, ಸಜ್ಜಿಗೆ ಹೋಳಿಗೆ, ಚಪಾತಿ, ರೊಟ್ಟಿ, ಲಡ್ಡು (ಲಡಕಿ ಉಂಡಿ), ಚುರುಮುರಿ, ಅಂಬಲಿ, ಬಾಳೆಹಣ್ಣು.... ಹೀಗೆ ತರಹೇವಾರಿ ಆಹಾರ ಪದಾರ್ಥಗಳನ್ನು ಪ್ರತಿಭಟನೆಗೆ ಸಾಲುಸಾಲಾಗಿ ತಂದುಕೊಡುವ ಮೂಲಕ ಬೆಂಬಲ ಸೂಚಿಸಿದ್ದಾರೆ. -ರೈತರು

ಜನ ಇಲ್ಲಿ ಊಟ ಮಾಡುತ್ತಿದ್ದಾರೆ.

ಮೊದಲನೇ ದಿನ 46 ಕ್ವಿಂಟಾಲ್ ಅಕ್ಕಿ ಬಳಕೆಯಾದರೆ, ಎರಡನೇ ದಿನ 50, ಮೂರನೇ ದಿನ 60 ಹಾಗೂ ಮಂಗಳವಾರ 40 ಕ್ವಿಂಟಾಲ್ ಮತ್ತು ಬುಧವಾರ 25 ಕ್ವಿಂಟಾಲ್ ಅಕ್ಕಿಯನ್ನು ಬಳಸಲಾಗಿದೆ. ಒಟ್ಟಿನಲ್ಲಿ ಪ್ರತಿನಿತ್ಯ 50 ರಿಂದ 70 ಕ್ವಿಂಟಾಲ್ ಅಕ್ಕಿ ಕೇವಲ ಅನ್ನಕ್ಕಾಗಿ ಬಳಕೆಯಾಗುತ್ತಿದೆ ಎಂದಿದ್ದಾರೆ.

ಗುರ್ಲಾಪುರ ಕಬ್ಬು ಬೆಳೆಗಾರರ ಹೋರಾಟ ಕಬ್ಬು ಬೆಳೆಗಾರರ ಪ್ರತಿಭಟನೆ ಕಬ್ಬಿಗೆ ಎಂಎಸ್‌ಪಿ ದರ ನಿಗದಿ ಗುರ್ಲಾಪುರದಲ್ಲಿ ರೈತರಿಗಾಗಿ ಆಹಾರ ಸಿದ್ಧಪಡಿಸುತ್ತಿರುವುದು ಹೋಳಿಗೆ, **ರೊಟ್ಟಿ**

> ಮೈಸೂರು ದಸರಾ ಹೇಗಾಗುತ್ತದೋ ನಮಗೆ ಗೊತ್ತಿಲ್ಲ, ಆದರೆ ನಮ್ಮ ಪಾಲಿಗೆ ಇಲ್ಲೇ ಮೈಸೂರು ದಸರಾ ಸೃಷ್ಟಿಯಾದೆ. ಹೆಣ್ಣುಮಕ್ಕಳು, ಗಂಡುಮಕ್ಕಳು ಎಲ್ಲರೂ ಒಟ್ಟಾಗಿ ಸೇರಿ ಈ ಹೋರಾಟವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಹೊತ್ತು ತರುತ್ತಿರುವ ಮಹಿಳೆಯರು: ಈ ಬೃಹತ್ ಪ್ರತಿಭಟನೆಗೆ ರೈತ ಮಹಿಳೆಯರು ಕೂಡ ಹೆಗಲಿಗೆ ಹೆಗಲು ಕೊಟ್ಟು ನಿಂತಿದ್ದಾರೆ. ಸ್ಥಳದಲ್ಲೇ ಅನ್ನ, ಸಾಂಬಾರ್, ಪಲ್ಯ ತಯಾರಿಸಲಾಗುತ್ತಿದೆ. ಇನ್ನು ಸುತ್ತಲಿನ ಗ್ರಾಮಗಳ ಮಹಿಳೆಯರು ತಮ್ಮ ಮನೆಗಳಿಂದಲೇ ಬಗೆಬಗೆಯ ಖಾದ್ಯಗಳನ್ನು ಸಿದ್ದಪಡಿಸಿಕೊಂಡು ತರುತ್ತಿದ್ದಾರೆ.

ಯಾವುದೇ ಸಂಘ-ಸಂಸ್ಥೆಗಳ ನೆರವಿಲ್ಲದೆ ಕೇವಲ ರೈತರೇ ಒಗ್ಗೂಡಿ ಮಾಡುತ್ತಿರುವ ಈ ವ್ಯವಸ್ಥೆ ಬಗ್ಗೆ ಸ್ಥಳೀಯರಾದ ಶ್ರೀಮಂತ ಗಾಣಿಗೇರ ಮಾತನಾಡಿ, ಈ ಹೋರಾಟ ನಮಗೆ ಜಾತ್ರೆಗಿಂತಲೂ ದೊಡ್ಡದಾಗಿದೆ. ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಬೀದಿಗಿಳಿದಿರುವ ರೈತರು, ಪ್ರತಿಭಟನೆಯ ನಡುವೆಯೂ ಅನ್ನದಾಸೋಹದ ಮೂಲಕ ಒಗ್ಗಟ್ಟಿನ ಮಂತ್ರ ಪಠಿಸುತ್ತಿರುವುದು ಎಲ್ಲರ ಗಮನ ಸೆಳೆದಿದೆ.

ಚಿತ್ರದುರ್ಗದಲ್ಲಿ ಜಿಲ್ಲಾಮಟ್ಟದ 'ಕಲಾಶ್ರೀ' ಸ್ಪರ್ಧೆ: ನಾವೀನ್ಯತೆ ಹಾಗೂ ಪ್ರತಿಭಾ ಪ್ರದರ್ಶನಕ್ಕೆ ಆಹ್ವಾನ

ಉದಯವಾಹಿನಿ, ಚಿತ್ರದುರ್ಗ:

ರಾಜ್ಯ ಬಾಲಭವನ ಸೊಸೈಟಿ (ಬೆಂಗಳೂರು), ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ, ಚಿತ್ರದುರ್ಗ ಇವರ ವತಿಯಿಂದ 09 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗಾಗಿ ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ 'ಕಲಾಶ್ರೀ' ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹ ಮಕ್ಕಳನ್ನು ಆಯ್ಕೆ ಮಾಡಲು ಜಿಲ್ಲಾಮಟ್ಟದ ಸ್ಪರ್ಧೆಯನ್ನು 2026ನೇ ಇಸವಿ ನವೆಂಬರ್ 07ರಂದು ಬೆಳಿಗ್ಗೆ ಹಮ್ಮಿಕೊಳ್ಳಲಾಗಿದೆ.

ವಿಜ್ಞಾನದಲ್ಲಿ ಸೃಜನಾತ್ಮಕ ಆವಿಷ್ಕಾರ: ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಒಂದು ವಿಷಯದ ಬಗ್ಗೆ ಮಾದರಿ ಪ್ರದರ್ಶನ ಹಾಗೂ ವಿವರಣೆ ಮತ್ತು ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ತೀರ್ಪುಗಾರರ ಇತ್ತೀಚಿನ ಪ್ರಶ್ನೆಗಳಿಗೆ ಉತ್ತರ (ಮಕ್ಕಳು ಪ್ರತ್ಯೇಕ ಮಾದರಿ ಪ್ರದರ್ಶನ ಮಾಡುವುದು ಕಡ್ಡಾಯ).ಅಂಗವಿಕಲ ಹಾಗೂ ಬುಡಕಟ್ಟು ಪ್ರದೇಶದ ಮಕ್ಕಳಿಗೆ ಮೇಲಿನ ಯಾವುದೇ ಪ್ರಕಾರದ ಸ್ಪರ್ಧೆಯಲ್ಲಿ ಭಾಗವಹಿಸಲು ವಿಶೇಷ ಅವಕಾಶ ನೀಡಲಾಗಿದೆ.

ಪ್ರಮುಖ ದಿನಾಂಕ ಹಾಗೂ ನೊಂದಣಿ ವಿವರ:
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05-11-2026 ರ ಸಂಜೆ 05:00 ಗಂಟೆಯೊಳಗೆ.


ಜಿಲ್ಲಾ ಬಾಲಭವನ ಸಮಿತಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.ಚಿತ್ರದುರ್ಗ
ಪ್ರಕಟಣೆಗಾಗಿ:
ಉದಯವಾಹಿನಿ ಚಿತ್ರ

ಅರ್ಜಿ ಸಲ್ಲಿಸುವ ವಿಳಾಸ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಾರ್ಯದರ್ಶಿಗಳು, ಜಿಲ್ಲಾ ಬಾಲಭವನ ಸಮಿತಿ, ಜಿಲ್ಲಾ ಬಾಲಭವನ ಆವರಣ, ಚಿತ್ರದುರ್ಗ.

ಜಿಲ್ಲಾಮಟ್ಟದಲ್ಲಿ ಆಯ್ಕೆಯಾಗುವ ಪ್ರತಿಭಾವಂತ ಮಕ್ಕಳಿಗೆ ಬಹುಮಾನ ನೀಡಿ, ರಾಜ್ಯಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಿಗೆ ಕಳುಹಿಸಿಕೊಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಾರ್ಯದರ್ಶಿಗಳು, ಜಿಲ್ಲಾ ಬಾಲಭವನ ಸಮಿತಿ, ಜಿಲ್ಲಾ ಬಾಲಭವನ ಆವರಣ, ಸ್ಟೇಡಿಯಂ ಮುಂಭಾಗ, ಚಿತ್ರದುರ್ಗ ಅಥವಾ ಕಾರ್ಯಕ್ರಮ ಸಂಯೋಜಕರ ಮೊಬೈಲ್ ಸಂಖ್ಯೆ: 7259551325 ಅನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ.

ಸ್ಪರ್ಧೆಯ ಪ್ರಮುಖ ವಿಭಾಗಗಳು:

ಸೃಜನಾತ್ಮಕ ಕಲೆ: ಚಿತ್ರಕಲೆ, ಕರಕುಶಲತೆ ಮತ್ತು ಜೇಡಿಮಣ್ಣಿನ ಕಲೆ (ಮೂರರಲ್ಲೂ ಕಡ್ಡಾಯವಾಗಿ ಭಾಗವಹಿಸಬೇಕು).

ಸೃಜನಾತ್ಮಕ ಬರವಣಿಗೆ: ಕಥೆ, ಕವನ ಮತ್ತು ಪ್ರಬಂಧ ಬರೆಯುವುದು (ಮೂರರಲ್ಲೂ ಕಡ್ಡಾಯವಾಗಿ ಭಾಗವಹಿಸಬೇಕು).

ಸೃಜನಾತ್ಮಕ ಪ್ರದರ್ಶನ ಕಲೆ: ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ವಾದ್ಯಸಂಗೀತ, ಸುಗಮ ಸಂಗೀತ, ಏಕಪಾತ್ರಾಭಿನಯ ಹಾಗೂ ಯೋಗನೃತ್ಯ - ಇವುಗಳಲ್ಲಿ ಯಾವುದಾದರೂ ಒಂದು ಕಲೆಯನ್ನು ಮಾತ್ರ ಪ್ರದರ್ಶಿಸಲು ಅವಕಾಶವಿರುತ್ತದೆ (ಸಮೂಹ ಪ್ರದರ್ಶನಕ್ಕೆ ಅವಕಾಶವಿರುವುದಿಲ್ಲ).

'ಅಂಜನಾದ್ರಿ' ದೇವಾಲಯ ಸುಪರ್ದಿಗೆ ಪಡೆದ ಜಿಲ್ಲಾಡಳಿತ!

ಉದಯವಾಹಿನಿ, ಕೊಪ್ಪಳ:

ಹನುಮಂತನ ಜನ್ಮಸ್ಥಳವೆಂದು ನಂಬಲಾದ ಅಂಜನಾದ್ರಿ ಬೆಟ್ಟದ ಹನುಮಾನ್ ದೇವಾಲಯದಲ್ಲಿ, ಬುಧವಾರದಂದು ಕೊಪ್ಪಳ ಜಿಲ್ಲಾಡಳಿತವು ಕಚೇರಿಗಳ ಬೀಗಗಳನ್ನು ಒಡೆದು ಆವರಣವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತು. ಇದಕ್ಕೂ ಮುನ್ನ, ದೇವಾಲಯದ ಆಡಳಿತಕ್ಕೆ ಸಂಬಂಧಿಸಿದ ಕಚೇರಿಗಳ ಬೀಗಗಳನ್ನು ಮುಖ್ಯ ಅರ್ಚಕ ವಿದ್ಯಾಧಾಸ್ ಬಾಬಾ ಅವರು ಒಡೆದು, ಅವುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದರು.

ಈ ಕಾರ್ಯಾಚರಣೆಯ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಬಾಬಾ ಅವರ ನಡುವೆ ತೀವ್ರ ಮಾತಿನ ಚಕಮಕಿ ನಡೆಯಿತು. ಅಕ್ಟೋಬರ್ 2018 ರವರೆಗೆ, ಅಂಜನಾದ್ರಿ ದೇವಾಲಯವನ್ನು ಮುಖ್ಯ ಅರ್ಚಕ ವಿದ್ಯಾಧಾಸ್ ಬಾಬಾ ಅವರ ನೇತೃತ್ವದ ಟ್ರಸ್ಟ್ ನಿರ್ವಹಿಸುತ್ತಿತ್ತು. ಟ್ರಸ್ಟ್ ಮತ್ತು ಬಾಬಾ ಅವರ ನಡುವೆ ಉಂಟಾದ ಭಿನ್ನಾಭಿಪ್ರಾಯಗಳ ಹಿನ್ನೆಲೆಯಲ್ಲಿ,

ಉದಯವಾಹಿನಿ ಚಿತ್ರ

ಜಿಲ್ಲಾಡಳಿತವು ಅಕ್ಟೋಬರ್ 2018 ರಲ್ಲಿ ದೇವಾಲಯವನ್ನು ಧಾರ್ಮಿಕ ದತ್ತಿ ಇಲಾಖೆಯ ನಿಯಂತ್ರಣಕ್ಕೆ ತಂದಿತು. ನ್ಯಾಯಾಲಯದ ಆದೇಶದ ಬೆನ್ನಲ್ಲೇ, ಅಕ್ಟೋಬರ್ 8 ರಂದು ಅಂಜನಾದ್ರಿ ಬೆಟ್ಟಕ್ಕೆ ಭೇಟಿ ನೀಡಿದ ಬಾಬಾ ಅವರು, ದೇವಾಲಯದ ಆವರಣದಲ್ಲಿದ್ದ ಧಾರ್ಮಿಕ ದತ್ತಿ ಇಲಾಖೆಯ ಕಚೇರಿಗಳಿಗೆ ಬೀಗ ಹಾಕಿ, ಜಿಲ್ಲಾಡಳಿತದ ಸಿಬ್ಬಂದಿಯನ್ನು ಹೊರಗೆ ಕಳುಹಿಸಿ, ದೇವಾಲಯದ ಆಡಳಿತವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರು. ಅಲ್ಲದೆ, ಅವರು

> ಈ ಕ್ರಮವನ್ನು ಪ್ರಶ್ನಿಸಿ ಬಾಬಾ ಅವರು ನ್ಯಾಯಾಲಯದ ಮೊರೆ ಹೋಗಿದ್ದರು. ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠವು, ದೇವಾಲಯವನ್ನು ಧಾರ್ಮಿಕ ದತ್ತಿ ಇಲಾಖೆಯ ನಿಯಂತ್ರಣಕ್ಕೆ ತರುವ ಆದೇಶವು ಕಾನೂನುಬಾಹಿರವಾಗಿದೆ ಎಂದು ಅಭಿಪ್ರಾಯಪಟ್ಟು, ಆಡಳಿತವನ್ನು ವಶಕ್ಕೆ ಪಡೆದಿದ್ದ ಸರ್ಕಾರದ ಆದೇಶವನ್ನು ರದ್ದುಗೊಳಿಸಿತು.

ತಮ್ಮದೇ ಆದ ಹೊಸ ಸಿಬ್ಬಂದಿಯನ್ನು ನೇಮಿಸಿಕೊಂಡರು. ಗಂಗಾವತಿ ಉಪವಿಭಾಗಾಧಿಕಾರಿ ಮಹಬೂಬ್ ಜಿಲಾನಿ, ಪೊಲೀಸ್ ಉಪ ಅಧೀಕ್ಷಕ ನ್ಯಾಯಗೌಡ ಮತ್ತು ತಹಸೀಲ್ದಾರ್ ಕಚೇರಿಯ ಸಿಬ್ಬಂದಿಯನ್ನು ಒಳಗೊಂಡ ಅಧಿಕಾರಿಗಳ ತಂಡವು ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಹನುಮಾನ್ ದೇವಾಲಯಕ್ಕೆ ಭೇಟಿ ನೀಡಿತು. ಅವರು ವಿದ್ಯಾಧಾಸ್ ಬಾಬಾ ಹಾಕಿದ್ದ ಬೀಗಗಳನ್ನು ಒಡೆದು ಕಚೇರಿಗಳ ಒಳಗೆ ಪ್ರವೇಶಿಸಿದರು.

ತಂತ್ರಜ್ಞಾನದ ಸುರಕ್ಷತೆ ಸದ್ಬಳಕೆಗೆ ಆದ್ಯತೆ ನೀಡಬೇಕು

ಉದಯವಾಹಿನಿ ಚಿತ್ರ

ಉದಯವಾಹಿನಿ, ಬಳ್ಳಾರಿ, :

ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನದ ಬಳಕೆ ಎಷ್ಟು ಉಪಯೋಗ ಆಗಿದೆಯೋ, ಅಷ್ಟೇ ಪ್ರಮಾಣದಲ್ಲಿ ದುರ್ಬಳಕೆ ಆಗುತ್ತಿದೆಂದು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಅವ್ವಾರು ಮಂಜುನಾಥ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಾಗೂ ಬಳ್ಳಾರಿ ಜಿಲ್ಲಾ ಪೊಲೀಸ್ ಇಲಾಖೆಯ ಜಂಟಿ ಆಶ್ರಯದಲ್ಲಿ ಸಂಸ್ಥೆಯ ಆಡಿಟೋರಿಯಂನಲ್ಲಿ ನಡೆದ 'ಸೈಬರ್ ಅಪರಾಧಗಳ ತಡೆಗಟ್ಟುವಿಕೆ ಜಾಗೃತಿ' ಶಿಬಿರದ ಅಧ್ಯಕ್ಷತೆವಹಿಸಿ ಮಾತನಾಡಿದರು. ಹಣಕ್ಕಾಗಿ, ಮಾಹಿತಿಗಾಗಿ, ಅಧಿಕಾರಕ್ಕಾಗಿ, ಪ್ರಚಾರಕ್ಕಾಗಿ, ನಾನಾ ಕಾರಣಗಳಿಗಾಗಿ ತಂತ್ರಜ್ಞಾನದ ಬಳಕೆ ದುರ್ಬಳಕೆ ಆಗುತ್ತಿದೆ. ತಂತ್ರಜ್ಞಾನದ ಬಳಕೆ ಹೆಚ್ಚಾಗುತ್ತಿದ್ದಂತೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಅನಿವಾರ್ಯತೆ ಅಗತ್ಯತೆ ದಿನೇ ದಿನೇ ಹೆಚ್ಚಾಗುತ್ತಿದೆ. ಡಿಜಿಟಲ್ ಸುರಕ್ಷತೆಯು ಪ್ರತಿಯೊಬ್ಬರ ಜೀವನದ ಅವಿಭಾಜ್ಯವಾಗಿದೆ. ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ವ್ಯಾಪಾರಿಗಳು, ಉದ್ಯಮಿಗಳು, ಸಾರ್ವಜನಿಕರು ಮತ್ತು ಯುವ ಸಮೂಹದಲ್ಲಿ ಡಿಜಿಟಲ್ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆಂದರು. ಹೈದರಾಬಾದ್‌ನ ಸಿಎ ಡಿ.ಪ್ರೇಮನಾಥ್ ಅವರು, ಡಿಜಿಟಲ್ ಸುರಕ್ಷತೆಗಾಗಿ ಡಿಪಿಡಿಪಿ ಕಾಯ್ದೆ ಜಾರಿಯಾಗಿದ್ದು, ಪ್ರತ್ಯೇಕ ಮಂಡಳಿ ರಚನೆಯಾಗುತ್ತಿದೆ. ಸಾರ್ವಜನಿಕರಿಗೆ ಡಿಜಿಟಲ್ ಸುರಕ್ಷತೆ ಒದಗಿಸಲು ಕೇಂದ್ರ ಸರ್ಕಾರ ಸೂಕ್ತ ಕಾಯ್ದೆಯನ್ನು ರೂಪಿಸಿದ್ದು, ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ.

> ಸಂಪನ್ಮೂಲ ವ್ಯಕ್ತಿ ಗೃಹ ಇಲಾಖೆಯ ಕ್ರೈಂ ಬ್ರ್ಯಾಂಚ್ನ ಡಿಸಿಪಿ ಆರ್.ಐ. ಖಾಸಿಂ, ಶಿಕ್ಷಿತರಲ್ಲೇ ಹೆಚ್ಚಿನ ಪ್ರಮಾಣದ ವಂಚನೆಗಳು ನಡೆಯುತ್ತಿವೆ. ವಂಚಕರೂ ಹೆಚ್ಚಿನ ಸಂಖ್ಯೆಯಲ್ಲಿ ಸುಶಿಕ್ಷಿತರು. ವಂಚನೆಗೆ ಒಳಗಾಗುವವರೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸುಶಿಕ್ಷಿತರು ಶಿಕ್ಷಣ ಪಡೆದವರು ಆಗಿದ್ದಾರೆಂದರು.

31 ರಂದು ಇಂದಿರಾಗಾಂಧಿ ಪುಣ್ಯದಿನ, ವಲ್ಲಭಬಾಯಿ ಪಟೇಲ್ ಜನ್ಮದಿನ ಆಚರಣೆ

ಉದಯವಾಹಿನಿ, ಕಲಬುರಗಿ,-

ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಅ.31 ರಂದು ಬೆಳಿಗ್ಗೆ 10 ಗಂಟೆಗೆ ಮಾಜಿ ಪ್ರಧಾನಿ ಉಕ್ಕಿನ ಮಹಿಳೆ ಎಂದು ಹೆಸರು ಪಡೆದ ಇಂದಿರಾಗಾಂಧಿ ಪುಣ್ಯದಿನ ಹಾಗೂ ಮಾಜಿ ಉಪ ಪ್ರಧಾನಿ ಉಕ್ಕಿನ ಮನುಷ್ಯ ಎಂದು ಹೆಸರು ಪಡೆದ ಸರ್ದಾರ ವಲ್ಲಭಬಾಯಿ ಪಟೇಲ ಜನ್ಮದಿನವನ್ನು ಆಚರಣೆ ಮಾಡಲಾಗುವದು ಎಂದು ಪಕ್ಷದ ಜಿಲ್ಲಾ ಅಧ್ಯಕ್ಷ ಡಾ.ಕಿರಣ ದೇಶಮುಖ ತಿಳಿಸಿದ್ದಾರೆ. ಪಕ್ಷದ ಹಾಲಿ ಹಾಗೂ ಮಾಜಿ ಸಂಸದರು, ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ನಿಗಮ/ಮಂಡಳಿ/ಪ್ರಾಧಿಕಾರದ ಅಧ್ಯಕ್ಷರು, ಮುಖಂಡರು, ಕೆಪಿಸಿಸಿ ಹಾಗೂ ಡಿಸಿಸಿ ಪದಾಧಿಕಾರಿಗಳು ಹಾಗೂ ಸದಸ್ಯರು, ಜಿಲ್ಲಾ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷರು, ಡಿಸಿಸಿ ಡೇಲಿಗೇಟ ಸದಸ್ಯರು, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ವಿವಿಧ ಮೂಂಚೂಣಿ ಘಟಕ, ವಿಭಾಗಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾಯಿತ ಹಾಲಿ ಹಾಗೂ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಎಪಿಎಂಸಿಯ ಹಾಲಿ ಹಾಗೂ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಮಹಾ ನಗರ ಪಾಲಿಕೆಯ ಹಾಲಿ ಹಾಗೂ ಮಾಜಿ ಪೂಜ್ಯ ಮಹಾಪೌರರು, ಉಪ ಮಹಾಪೌರರು ಹಾಗೂ ಸದಸ್ಯರುಗಳು, ಮಹಿಳೆಯರು, ಯುವಕರು ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಉದಯವಾಹಿನಿ ಚಿತ್ರ

ನ. 1ರಂದು ಪ್ರತ್ಯೇಕ ಕಲ್ಯಾಣ ಕರ್ನಾಟಕ ಧ್ವಜಾರೋಹಣ

ಉದಯವಾಹಿನಿ, ಕಲಬುರಗಿ,:

ಕಲ್ಯಾಣ ಕರ್ನಾಟಕದ ದಶಕಗಳ ಹಿಂದುಳಿತನಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಸಂವಿಧಾನದ ವಿಧಿ 371 (ಜೆ) ಜಾರಿಗೊಳಿಸಿದರೂ, ಶಿಕ್ಷಣ, ಆರೋಗ್ಯ, ಉದ್ಯೋಗ, ನೀರಾವರಿ, ಕುಡಿಯುವ ನೀರು, ಕೈಗಾರಿಕೆ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಈ ಪ್ರದೇಶದ ಸಮಸ್ಯೆಗಳು ಸಂಪೂರ್ಣವಾಗಿ ಪರಿಹಾರಗೊಂಡಿಲ್ಲ. ಹೀಗಾಗಿ ವಿಶೇಷ ಸ್ಥಾನಮಾನ ಮತ್ತು ಅಭಿವೃದ್ಧಿ ಮಂಡಳಿಯ ವ್ಯವಸ್ಥೆಗಳಾಚೆಗೆ ಹೋಗಿ, ತೆಲಂಗಾಣ ಮಾದರಿಯಲ್ಲಿ ಪ್ರತ್ಯೇಕ ಕಲ್ಯಾಣ ಕರ್ನಾಟಕ ರಾಜ್ಯವನ್ನು ಸ್ಥಾಪಿಸಬೇಕು ಎಂಬ ಬೇಡಿಕೆಯನ್ನು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಮುಂದಿಟ್ಟಿದೆ.

ಎಂ.ಎಸ್. ಪಾಟೀಲ್ ನರಿಬೋಳ್ ಅವರ ನೇತೃತ್ವದಲ್ಲಿ, ಕರ್ನಾಟಕ ರಾಜ್ಯೋತ್ಸವದ ದಿನವಾದ ನವೆಂಬರ್ 1 ರಂದು ಪ್ರತ್ಯೇಕ ಕಲ್ಯಾಣ ಕರ್ನಾಟಕ ಧ್ವಜಾರೋಹಣ ನಡೆಸಿ, ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಜನತಾಂತ್ರಿಕ ಮತ್ತು ಸಂವಿಧಾನಬದ್ಧ ಮಾರ್ಗದಲ್ಲಿ ಮತ್ತಷ್ಟು ಬಲಪಡಿಸಲು ನಿರ್ಧರಿಸಲಾಗಿದೆ.

ಈ ಧ್ವಜಾರೋಹಣವು ಕೇವಲ ಸಾಂಕೇತಿಕ ಕಾರ್ಯಕ್ರಮವಲ್ಲ; ಕಲ್ಯಾಣ ಕರ್ನಾಟಕದ ಅಭಿವೃದ್ಧಿ, ಪ್ರಾದೇಶಿಕ ನ್ಯಾಯ, ಸಮಾನ ಅವಕಾಶ ಮತ್ತು ಸ್ವಯಂ ಆಡಳಿತದ ಬೇಡಿಕೆಯನ್ನು ಸಾರ್ವಜನಿಕ ಚರ್ಚೆಯ ಕೇಂದ್ರಕ್ಕೆ ತರುವ ಪ್ರಯತ್ನವಾಗಿದೆ ಎಂದು ಸಮಿತಿ ಅಧ್ಯಕ್ಷ ಎಂ.ಎಸ್. ಪಾಟೀಲ್ ನರಿಬೋಳ, ಮಹಾಪ್ರಧಾನ ಕಾರ್ಯದರ್ಶಿ ವಿನೋದ ಕುಮಾರ ಜನೆವರಿ ತಿಳಿಸಿದ್ದಾರೆ.

ಎನ್‌ಸಿಸಿ ದಾಖಲಾತಿ; 27 ವಿದ್ಯಾರ್ಥಿಗಳ ಆಯ್ಕೆ

ಉದಯವಾಹಿನಿ,ಕಲಬುರಗಿ,:

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು (ಸಿಯುಕೆ) 2026-27ನೇ ಶೈಕ್ಷಣಿಕ ಸಾಲಿಗೆ ಮೊದಲ ಬಾರಿಗೆ ರಾಷ್ಟ್ರೀಯ ಕೆಡೆಟ್ ಕಾಪ್ಸ್ (ಎನ್‌ಸಿಸಿ) ದಾಖಲಾತಿ ಪ್ರಕ್ರಿಯೆ ನಡೆಸಿದ್ದು, 160ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯ ಮತ್ತು ಅರ್ಹತಾ ಪರೀಕ್ಷೆಗಳ ಬಳಿಕ ಒಟ್ಟು 27 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಸಿಯುಕೆ ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಡಾ. ರಂಗನಾಥಂ ಗಂಗಿನೇನಿ ಅವರ ಮೇಲ್ವಿಚಾರಣೆಯಲ್ಲಿ, 32ನೇ ಕರ್ನಾಟಕ ಬೆಟಾಲಿಯನ್‌ನ ಲೆಫ್ಟಿನೆಂಟ್ ಅಜಿನಾಥ್ ಮತ್ತು ಲೆಫ್ಟಿನೆಂಟ್ ಜಸ್ವಂತ್ ಸಿಂಗ್ ಅವರು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಆಯ್ಕೆಯಾದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಶಿಸ್ತು, ನಾಯಕತ್ವ, ತಂಡದ ಕೆಲಸ, ದೇಶಭಕ್ತಿ ಹಾಗೂ ರಾಷ್ಟ್ರನಿರ್ಮಾಣದಲ್ಲಿ ಎನ್‌ಸಿಸಿಯ ಪಾತ್ರವನ್ನು ವಿವರಿಸಿದರು. ಎನ್‌ಸಿಸಿಯೊಂದಿಗಿನ ತಮ್ಮ ಬಾಲ್ಯದ ಅನುಭವಗಳನ್ನು ಹಂಚಿಕೊಂಡ ಅವರು, ವಿದ್ಯಾರ್ಥಿಗಳು ಜೀವನದಲ್ಲಿ ಶ್ರೇಷ್ಠತೆ ಸಾಧಿಸುವುದರೊಂದಿಗೆ ರಾಷ್ಟ್ರಸೇವೆಗೆ ಸಮರ್ಪಿಸಿಕೊಳ್ಳಬೇಕು ಎಂದು ಪ್ರೇರೇಪಿಸಿದರು. ಸಿಯುಕೆ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ ಅವರು ಆಯ್ಕೆಯಾದ ಕೆಡೆಟ್‌ಗಳನ್ನು ಅಭಿನಂದಿಸಿದರು.ಈ ಮೊದಲ ಎನ್.ಸಿ.ಸಿ ದಾಖಲಾತಿ ಪ್ರಕ್ರಿಯೆಯು ವಿಶ್ವವಿದ್ಯಾಲಯದಲ್ಲಿ ಎನ್‌ಸಿಸಿ ಚಟುವಟಿಕೆಗಳನ್ನು ಬಲಪಡಿಸುವ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಉತ್ತೇಜನ ನೀಡುವ ಮಹತ್ವದ ಹೆಜ್ಜೆಯಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ಪಲ್ಲೇದ ಮೈತ್ರಿ ರಾಜೀನಾಮೆ

ಉದಯವಾಹಿನಿ, ಬಳ್ಳಾರಿ, :

ಇಲ್ಲಿನ ಜನತಾ ಬಜಾರ್ ಅಧ್ಯಕ್ಷ ಸ್ಥಾನಕ್ಕೆ ಪಲ್ಲೇದ ಮೈತ್ರಿ ಅವರು ಪ್ರಧಾನ ವ್ಯವಸ್ಥಾಪಕರಿಗೆ ರಾಜೀನಾಮೆ ನಿನ್ನೆ ನೀಡಿದ್ದಾರೆ.ವಯಕ್ತಿಕ ಕಾರಣ ಮತ್ತು ಸ್ವ ಇಚ್ಛೆಯಿಂದ ರಾಜೀನಾಮೆ ನೀಡಿದ್ದು ನಿಯಮಾನುಸಾರ ಅಂಗೀಕರಿಸಬೇಕೆಂದು ಹೇಳಿದ್ದಾರೆ. ಇವರನ್ನು ಈ ಹಿಂದೆ ಅವಿರೋಧವಾಗಿ ಆಯ್ಕೆ ಮಾಡುವ ಸಂಧರ್ಭದಲ್ಲಿ ಜನತಾ ಬಜಾರ್ ನಿರ್ದೇಶಕರೆಲ್ಲ ಸೇರಿ ಮಾಜಿ ಶಾಸಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ ರಾಜೀನಾಮೆ ನೀಡಿದ್ದಾರೆ.

ಈ ರಾಜೀನಾಮೆಯನ್ನು 14 ದಿನದ ನಂತರ ಅಂಗೀಕರಿಸಿ ನಂತರ ಚುನಾವಣೆ ಪ್ರಕ್ರಿಯೆ ಆರಂಭಿಸಬೇಕಿದೆ. ಹೀಗಾಗಿ ಅಧ್ಯಕ್ಷ ಸ್ಥಾನಕ್ಕೆ ನವೆಂಬರ್ ಅಂತ್ಯದೊಳಗೆ ಚುನಾವಣೆ ನಡೆಸಬಹುದು. ಮತ್ತೆ ಅಧ್ಯಕ್ಷರಾಗುವವರ ಅವಧಿ ಬರುವ ಮಾರ್ಚ್ ವರೆಗೆ ಇದೆ. ಈ ಸ್ಥಾನವನ್ನು ಕಾಂಗ್ರೆಸ್ ಮುಖಂಡ ವೆಂಕಟೇಶ್ ಹೆಗಡೆ ಬಯಸಿದ್ದಾರೆ.

ಕಸದ ಸಮಸ್ಯೆಗೆ ಸಿಗದ ಮುಕ್ತಿ: ಹುಬ್ಬಳ್ಳಿ-ಧಾರವಾಡದಲ್ಲಿ ದುರ್ನಾತ

ಮಾರುಕಟ್ಟೆಯ ತ್ಯಾಜ್ಯದ ಜೊತೆಗೆ ಮಳೆನೀರು, ಚರಂಡಿ ನೀರು ಸೇರಿಕೊಳ್ಳುವುದರಿಂದ ಸೊಳ್ಳೆಗಳು ಹೆಚ್ಚಾಗುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ.

ಉದಯವಾಹಿನಿ, ಹುಬ್ಬಳ್ಳಿ:

ಅವಳಿ ನಗರವನ್ನು ಕಸಮುಕ್ತ ನಗರವನ್ನಾಗಿಸಲು ಹು-ಧಾ ಮಹಾನಗರ ಪಾಲಿಕೆಯು ಪ್ರತಿವರ್ಷವೂ ಕೋಟ್ಯಂತರ ಹಣ ವ್ಯಯಿಸುತ್ತಿದೆ. ಆದರೂ, ಪರಿಸ್ಥಿತಿ ಬದಲಾಗಿಲ್ಲ. ನಗರದ ಪ್ರಮುಖ ರಸ್ತೆ ಬದಿ, ಮಾರುಕಟ್ಟೆ ಪ್ರದೇಶ, ಖಾಲಿ ನಿವೇಶಗಳಲ್ಲಿ ಕಸದ ರಾಶಿ ಬಿದ್ದಿದ್ದು, ದುರ್ನಾತ ಬೀರುತ್ತಿದೆ.

1 : ಆಟೊ ಟಿಪ್ಪರ್‌ಗಳ ಮೂಲಕ ಕಸ ಸಂಗ್ರಹ
2 : ಇದರಿಂದ ಸಮಸ್ಯೆ ಮತ್ತಷ್ಟು ಉಲ್ಬಣಿಸಿದೆ
3 : ಟ್ರ್ಯಾಕ್ಟರ್‌ಗಳ ಮೂಲಕ ಕಸ ಸಂಗ್ರಹಿಸಿ,

ಕುಸುಗಲ್ ರಸ್ತೆ, ಸುಳ್ಳ ರಸ್ತೆ, ಆನಂದನಗರ ರಸ್ತೆ, ಕಾರವಾರ ರಸ್ತೆ ಬದಿಗಳು, ಅತ್ಯಂತ ಜನನಿಬಿಡ ಪ್ರದೇಶಗಳಾದ ದುರ್ಗದಬೈಲ್, ಜನತಾ ಬಜಾರ್, ನಗರ ಬಸ್ ನಿಲ್ದಾಣ ಸೇರಿದಂತೆ ವಿವಿಧ ಪ್ರದೇಶದಲ್ಲಿ ಕಸದ ಸಮಸ್ಯೆ ತೀವ್ರವಾಗಿದೆ. ಕೆಲವೆಡೆ ಸಂಜೆ ಹೊತ್ತಿನಲ್ಲಿ ಕಸದ ರಾಶಿಗೆ ಬೆಂಕಿ ಹಚ್ಚುತ್ತಿದ್ದು, ಇದರಿಂದ ವಾಯು ಮಾಲಿನ್ಯ ಉಂಟಾಗುತ್ತಿದೆ. ದಶಕಗಳಿಂದಲೂ ಇರುವ ಈ ಸಮಸ್ಯೆಗೆ ಮಹಾನಗರ ಪಾಲಿಕೆಯಿಂದ ಇನ್ನೂವರೆಗೆ ಮುಕ್ತಿ ದೊರೆತಿಲ್ಲ ಎಂದು ನಗರದ ನಿವಾಸಿಗಳು ಆರೋಪಿಸುತ್ತಿದ್ದಾರೆ.

ಉದಯವಾಹಿನಿ ಚಿತ್ರ

ಮನೆ-ಮನೆಗಳಿಂದ ಆಟೊ ಟಿಪ್ಪರ್‌ಗಳ ಮೂಲಕ ಕಸ ಸಂಗ್ರಹ ಮಾಡಲಾಗುತ್ತಿದೆ. ಆದರೆ, ಅದು ಸೂಕ್ತವಾಗಿ ನಡೆಯುತ್ತಿಲ್ಲ. ಪರಿಣಾಮ ಸಾರ್ವಜನಿಕರು, ಸಣ್ಣಪುಟ್ಟ ಹೋಟೆಲ್ ಮಾಲೀಕರು, ಅಂಗಡಿಯವರು ರಾತ್ರಿ ವೇಳೆ ರಸ್ತೆ ಬದಿ ಪ್ಲಾಸ್ಟಿಕ್ ಸಹಿತ ತ್ಯಾಜ್ಯವನ್ನು ಎಸೆಯುತ್ತಿದ್ದಾರೆ. ಇದರಿಂದ ಸಮಸ್ಯೆ ಮತ್ತಷ್ಟು ಉಲ್ಬಣಿಸಿದೆ. ನಿತ್ಯ ಸಾವಿರಾರು ಜನ ಸೇರುವ ಜನತಾ ಬಜಾರ್, ದುರ್ಗದಬೈಲ್ ಸೇರಿದಂತೆ ತರಕಾರಿ ಮಾರುಕಟ್ಟೆಯಲ್ಲಿ ನಿತ್ಯ ಕೊಳೆತ ಕಾಯಿಪಲ್ಲೆ

> ಕಸಮುಕ್ತ ನಗರ ಯೋಜನೆಯ ಭಾಗವಾಗಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ವಿಶೇಷ ಅಭಿಯಾನದ ಮೂಲಕ ಸ್ವಚ್ಛತೆ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರು ಮನೆ ಬಾಗಿಲಿಗೆ ಬರುವ ಪಾಲಿಕೆ ವಾಹನಗಳಲ್ಲಿ ಕಸ ಹಾಕಬೇಕು. -ಸಂತೋಷ, ಕಾರ್ಯನಿರ್ವಾಹಕ ಇಂಜಿನಿಯರ್

ರಸ್ತೆ ಬದಿಯಲ್ಲೇ ಉಳಿಯುತ್ತಿವೆ. ಈ ಕಸದ ರಾಶಿಯಲ್ಲಿಯೇ ಅಕ್ಕಪಕ್ಕದ ಅಂಗಡಿಯವರು ಮತ್ತಷ್ಟು ತ್ಯಾಜ್ಯ ಎಸೆಯುತ್ತಾರೆ. ಸಾಮಾನ್ಯವಾಗಿ ಬೆಳಗಿನ ಜಾವ ಆಟೊ ಟಿಪ್ಪರ್‌ಗಳು ಮತ್ತು ಟ್ರ್ಯಾಕ್ಟರ್‌ಗಳ ಮೂಲಕ ಕಸ ಸಂಗ್ರಹಿಸಿ, ವಿಲೇವಾರಿ ಮಾಡಬೇಕು. ಆದರೆ, ಮಧ್ಯಾಹ್ನದವರೆಗೂ ಕಸದ ರಾಶಿಗಳು ಹಾಗೆಯೇ ಬಿದ್ದಿರುತ್ತವೆ ಎನ್ನುತ್ತಾರೆ ಇಲ್ಲಿನ ತರಕಾರಿ ವ್ಯಾಪಾರಿಗಳು. ಮಾರುಕಟ್ಟೆಯ ತ್ಯಾಜ್ಯದ ಜೊತೆಗೆ ಮಳೆನೀರು, ಚರಂಡಿ ನೀರು ಸೇರಿಕೊಳ್ಳುವುದರಿಂದ ಸೊಳ್ಳೆಗಳು ಹೆಚ್ಚಾಗುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ.

ರಸ್ತೆ ಬದಿ ಬಿದ್ದಿರುವ ತ್ಯಾಜ್ಯವನ್ನು ಸಕಾಲಕ್ಕೆ ವಿಲೇವಾರಿ ಮಾಡದ ಕಾರಣ, ಮಳೆಗಾಲದ ವೇಳೆಯಲ್ಲಿ ಆ ತ್ಯಾಜ್ಯವು ರಾಜಕಾಲುವೆ, ಚರಂಡಿಗೆ ಸೇರುತ್ತದೆ. ಇದರಿಂದ ಕೊಳಚೆ ನೀರು ಸರಾಗವಾಗಿ

> ವಾರ್ಡ್‌ಗಳ ಮರುವಿಂಗಡಣೆಯ ನಂತರ ಅವಳಿ ನಗರಗಳ ವಾರ್ಡ್‌ಗಳ ಸಂಖ್ಯೆ 67 ರಿಂದ 82ಕ್ಕೆ ಹೆಚ್ಚಳವಾಗಿದೆ.ಹಾಗೆಯೇ ಇಲ್ಲಿನ ಜನಸಂಖ್ಯೆಯೂ ಸುಮಾರು 14 ಲಕ್ಷಕ್ಕೆ ಏರಿಕೆ ಆಗಿದೆ. ಇದರಿಂದ ದೈನಂದಿನ ಸ್ವಚ್ಛತೆ ಮತ್ತು ನೈರ್ಮಲ್ಯ ಕಾರ್ಯಗಳು ವಿಳಂಬವಾಗುತ್ತಿವೆ.

ಹರಿಯದೇ ರಸ್ತೆ ಮೇಲೆ ಹರಿಯುತ್ತದೆ. ವಾಹನ ಸವಾರರಿಗೆ ಹಾಗೂ ಪಾದಚಾರಿಗಳ ಸುಗಮ ಸಂಚಾರಕ್ಕೂ ತೊಂದರೆಯಾಗುತ್ತದೆ.

ಪೌರ ಕಾರ್ಮಿಕರ ಕೊರತೆ : ಪೌರಕಾರ್ಮಿಕರ ಕೊರತೆಯಿಂದಾಗಿ ಅವಳಿ ನಗರದ ಸ್ವಚ್ಛತಾ ಕಾರ್ಯಕ್ಕೆ ಹಿನ್ನಡೆ ಆಗಿದೆ ಎಂಬ ಆರೋಪ ಕೇಳಿಬಂದಿದೆ. ಕಾಯಂ ಮತ್ತು ಗುತ್ತಿಗೆ ಸೇರಿ ಸುಮಾರು 2,193 ಪೌರಕಾರ್ಮಿಕರು ಮಾತ್ರ ಪಾಲಿಕೆ ಪಟ್ಟಿಯಲ್ಲಿದ್ದಾರೆ.

ಈ ಹಿಂದೆ ಪ್ರತಿ ವಾರ್ಡ್‌ನಲ್ಲಿ ಸುಮಾರು 30 ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಆದರೆ, ಇಂದು ಪ್ರತಿ ವಾರ್ಡ್‌ನಲ್ಲಿ 12 ರಿಂದ 15 ಕಾರ್ಮಿಕರು ಮಾತ್ರ ಇದ್ದಾರೆ ಎಂದು ಹೆಸರು ಹೇಳಲಿಚ್ಛಿಸದ ಪೌರ ಕಾರ್ಮಿಕರೊಬ್ಬರು ತಿಳಿಸಿದರು. ಅರವಿಂದ ನಗರ, ಕಮರಿಪೇಟೆಯ ಸುಬ್ರಾಯನಪೇಟೆ, ಹಳೇಹುಬ್ಬಳ್ಳಿ ಗಂಜಿಪೇಟ್, ವಿದ್ಯಾನಗರ, ಕಾಳಿದಾಸ ನಗರ ಸೇರಿದಂತೆ ಹಳೇ ಹುಬ್ಬಳ್ಳಿಯ ಬಹುತೇಕ ಪ್ರದೇಶಗಳಲ್ಲಿ ಕಸದ ಸಮಸ್ಯೆ ತೀವ್ರವಾಗಿದೆ.